ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ ಎಂ.ಫಿಲ್ (ಅಭಿವೃದ್ಧಿ ಅಧ್ಯಯನ)
ಪದವಿಗಾಗಿ ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಸುಜಯ.ಪಿ

ಮಾರ್ಗದರ್ಶಕರು

ಡಾ. ಗಿರಿಧರ ರಾವ್ ಎಂ. ಎಸ್
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು, ವಿಟ್ಲ
ದಕ್ಷಿಣ ಕನ್ನಡ ಜಿಲ್ಲೆ

2013

ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ ಎಂ.ಫಿಲ್ (ಅಭಿವೃದ್ಧಿ ಅಧ್ಯಯನ)
ಪದವಿಗಾಗಿ ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಸುಜಯ.ಪಿ

ಮಾರ್ಗದರ್ಶಕರು

ಡಾ. ಗಿರಿಧರ ರಾವ್ ಎಂ. ಎಸ್
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು. ವಿಟ್ಲ
ದಕ್ಷಿಣ ಕನ್ನಡ ಜಿಲ್ಲೆ

2013

ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ಯೋಗ್ಯತಾ ಪತ್ರ

ಸುಜಯ.ಪಿ ಇವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ***"ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಒಂದು ಅಧ್ಯಯನ"*** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ (ಅಭಿವೃದ್ಧಿ ಅಧ್ಯಯನ) ಪದವಿ ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸ ಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ದಿನಾಂಕ: 15/7/2013.

ಡಾ. ಗಿರಿಧರ ರಾವ್ ಎಂ. ಎಸ್
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು. ವಿಟ್ಲ
ದಕ್ಷಿಣ ಕನ್ನಡ ಜಿಲ್ಲೆ

GOVT. FIRST GRADE COLLEGE
VITTAL-574 243, D. K.

ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಒಂದು ಅಧ್ಯಯನ

ಅಧ್ಯಯನದ ವಿವರಗಳು

ಕೋಷ್ಟಕಗಳ ಪಟ್ಟಿ

ಅಧ್ಯಾಯ–1

ಪ್ರಸ್ತಾವನೆ

ಪೀಠಿಕೆ

ಭಾರತದ ಪ್ರಾಚೀನ ಆಡಳಿತಾತ್ಮಕ ವ್ಯವಸ್ಥೆಯು ಸಮಾಜದ ಬಲಾಢ್ಯ ಜನವರ್ಗ ಮತ್ತು ಬಲಾಢ್ಯ ಲಿಂಗ ಸಮೂಹದವರಿಂದ ನಿರ್ವಹಿಸಲ್ಪಟ್ಟಿರುವ ಸನ್ನಿವೇಶವನ್ನು ಕಾಣಬಹುದಾಗಿದೆ. ದೇಶದ ಬಹುತೇಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಪುರುಷರ ಮೇಲುಗೈ ಹಾಗೂ ಅತೀ ಪ್ರಾತಿನಿಧ್ಯತೆಯನ್ನು ಕಾಣಬಹುದಾಗಿದೆ. ಗ್ರಾಮೀಣ ಪ್ರದೇಶವನ್ನು ಬಹುತೇಕವಾಗಿ ಹೊಂದಿರುವ ಭಾರತವು ಸ್ಥಳೀಯ ಆಡಳಿತ ನಿರ್ವಹಿಸುವುದಕ್ಕೆ ಮಾಂಡಲೀಕರು, ಪಾಳೆಗಾರರು, ಪಾರುಪತ್ಯದಾರರು ಮತ್ತು ಪಂಚರಂತಹ ಸ್ಥಳೀಯ ನಾಯಕತ್ವವನ್ನು ಹೊಂದಿರುವಂತಹ ಆಡಳಿತಾತ್ಮಕ ವ್ಯವಸ್ಥೆಯನ್ನು ನಮ್ಮ ಇತಿಹಾಸದಲ್ಲಿ ಗಮನಿಸಬಹುದಾಗಿದೆ.

ಬ್ರಿಟಿಷರ ಆಗಮನದ ನಂತರ ಸ್ಥಳೀಯ ಆಡಳಿತ ನಿರ್ವಹಣೆಯಲ್ಲಿ ಗಮನಾರ್ಹವಾದ ಬದಲಾವಣೆ ಮತ್ತು ಮೂರ್ತ ಸ್ವರೂಪದ ಕಾರ್ಯಕ್ರಮ ಅನುಷ್ಠಾನ ಕಾಣುವುದಕ್ಕೆ ಸಾಧ್ಯವಾಯಿತು. ಭಾರತದ ಒಟ್ಟು ಗ್ರಾಮೀಣ ಅಭಿವೃದ್ಧಿ ಸಾಧಿಸುವಲ್ಲಿ ಸ್ಥಳೀಯಾಡಳಿತ, ಸ್ಥಳೀಯ ಸರ್ಕಾರ ಮತ್ತು ಸ್ಥಳೀಯ ನಿರ್ಧಾರಗಳ ಪ್ರಾಮುಖ್ಯತೆಯನ್ನು ಸಾರಿ ಹೇಳಿರುವುದು ಬ್ರಿಟಿಷ್ ಸರ್ಕಾರದ ಹೆಗ್ಗಳಿಕೆ. ಇದಕ್ಕೆ ಪೂರಕವೆಂಬಂತೆ ಮೈಸೂರು ಪ್ರಾಂತ್ಯದಲ್ಲಿ ಅಸ್ತಿತ್ವಕ್ಕೆ ಬಂದಂತಹ ಪ್ರಜಾಪ್ರತಿನಿಧಿ ಸಭೆಯು ಕೂಡ ಸ್ಥಳೀಯ ಸರ್ಕಾರಗಳ ಅಗತ್ಯತೆಯನ್ನು ಬಹಳ ಗಂಭಿರವಾಗಿ ನಿರೂಪಿಸಿತ್ತು.

1.1: ಭಾರತದಲ್ಲಿ ಸ್ಥಳೀಯ ಸರ್ಕಾರ

ಸ್ವಾತಂತ್ರ್ಯ ನಂತರದ ಭಾರತದಲ್ಲಿ ಸ್ಥಳೀಯ ಸರ್ಕಾರದ ಸಶಕ್ತೀಕರಣಗೊಳಿಸುವ ನಿಟ್ಟಿನಲ್ಲಿ ಬಹಳಷ್ಟು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಆದರೆ ಇವುಗಳಲ್ಲಿ ಬಹುತೇಕ ಕಾರ್ಯಕ್ರಮಗಳು

ಸಾಂದರ್ಭಿಕ ನೆಲೆಯಲ್ಲಿ ರೂಪಿಗೊಂಡಿರುವ ಕಾರಣದಿಂದ ನಿರೀಕ್ಷಿತ ಬದಲಾವಣೆಗಳನ್ನು ಕಾಣಲಿಕ್ಕೆ ಸಾಧ್ಯವಾಗಲಿಲ್ಲ. ಅಲ್ಲದೆ ಸ್ಥಳೀಯ ಸರ್ಕಾರಗಳಲ್ಲಿ ತೆಗೆದುಕೊಳ್ಳುವ ನಿರ್ಣಯಗಳು ಬಹುತೇಕವಾಗಿ ಸಮಾಜದ ಬಲಾಢ್ಯ ಲಿಂಗ ಸಮುದಾಯದ ಪರವಾಗಿದೆ ಅನ್ನುವುದು ಖೇದಕರ. ಈ ನಿಟ್ಟನಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸ್ವಾಯತ್ತ ಮತ್ತು ಸ್ವಯಂ ಅಧಿಕಾರವನ್ನು ನೀಡುವ ದೃಷ್ಟಿಯಲ್ಲಿ 1993 ರಲ್ಲಿ ಸಂವಿಧಾನಕ್ಕೆ 73 ನೇ ತಿದ್ದುಪಡಿಯನ್ನು ತರಲಾಯಿತು. ಈ ತಿದ್ದುಪಡಿಯು ಸ್ಥಳೀಯ ಸಂಸ್ಥೆಗಳನ್ನು ಸಂವಿಧಾನದ ಭಾಗವಾಗಿ ಪರಿಗಣಿಸಿದ್ದು ಮಾತ್ರವಲ್ಲದೆ ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ಚುನಾವಣೆ ಮತ್ತು ಅಧಿಕಾರದ ಹಂಚಿಕೆಯಲ್ಲಿ ಲಿಂಗ ಸಮಾನತೆಯನ್ನು ಹಂಚುವ ಸಾಮಾಜಿಕ ನ್ಯಾಯದ ದೃಷ್ಟಿಕೋನವನ್ನು ಹೊಂದಿತ್ತು. ಅಲ್ಲದೆ ಮಹಿಳೆಯರಿಗೆ ವಿಶೇಷವಾಗಿ ಅಧಿಕಾರ ಮತ್ತು ಚುನಾವಣಾ ಭಾಗವಹಿಸುವಿಕೆಯಲ್ಲಿ 1/3 ಭಾಗ ಸಂವಿಧಾನಾತ್ಮಕ ಅವಕಾಶವನ್ನು ನೀಡಲಾಯಿತು. ಸಂವಿಧಾನದ 73 ನೇಯ ತಿದ್ದುಪಡಿಯ ಪರಿಣಾಮವಾಗಿ ಶೇ.4 ರಷ್ಟು ಇದ್ದಂತಹ ಮಹಿಳೆಯ ಭಾಗವಹಿಸುವಿಕೆಯನ್ನು ಶೇ.33 ಕ್ಕೆ ಏರಿಸಿತು, ಜೊತೆಗೆ ಗ್ರಾಮೀಣ ಮಹಿಳೆಯರು ಕೂಡ ಅಧಿಕಾರಕ್ಕೆ ಸಂಬಂಧಿಸಿದ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗವಹಿಸುವ ಅಧಿಕಾರವನ್ನು ನೀಡಿತ್ತು. ಈ ಮೀಸಲಾತಿಯು ಕೇವಲ ಸಾಂಕೇತಿಕ ಅಂಶವಾಗಿರದೆ ದೇಶದ ಅಂಚಿನ ವರ್ಗದಲ್ಲಿರುವ ಮಹಿಳೆಯರ ಧ್ವನಿಯಾಗಿದ್ದು, ಇದೇ ಸಮಯದಲ್ಲಿ ಕೆಲವೊಂದು ತೊಡಕುಗಳು ಈ ತಿದ್ದುಪಡಿಯ ಪರಿಣಾಮಕಾರಿ ಅನುಷ್ಠಾನಕ್ಕೆ ತೊಡಕನ್ನುಂಟು ಮಾಡಿತು. ಅವುಗಳೆಂದರೆ ಅನಕ್ಷರತೆ, ಪುರುಷ ಪ್ರಾದನ್ಯತೆ, ಜಾತೀಯತೆ, ಸಮಾಜದಲ್ಲಿ ಬೇರುರಿದ ಸಾಂಸ್ಕೃತಿಕ ನಂಬಿಕೆಗಳು ಮತ್ತು ಮೌಲ್ಯಗಳು ಮಹಿಳೆಯರ ಪರಾವಲಂಬನೆ ಮತ್ತು ಸಾಮಾಜಿಕ, ಸಾಂಸ್ಕೃತಿಕ ತೊಡಕುಗಳು ಮಹಿಳೆಯರು ಸ್ಥಳೀಯಾಡಳಿತದಲ್ಲಿ ಭಾಗವಹಿಸುವುದಕ್ಕೆ ತೊಡಕನ್ನುಂಟು ಮಾಡಿದೆ.

ಇಡೀ ಜಗತ್ತಿನಲ್ಲಿ ಶೇ.50 ಕ್ಕಿಂತಲೂ ಹೆಚ್ಚು ಮಹಿಳಾ ಜನಸಂಖ್ಯೆಯಿದ್ದು ಆದರೆ ಉನ್ನತ ಮಟ್ಟದ ಸರ್ಕಾರಿ ಮತ್ತು ರಾಜಕೀಯ ಸ್ಥಾನಮಾನಗಳಲ್ಲಿ ಅವರ ಪ್ರತಿನಿಧೀಕರಣ ಕೇವಲ ಶೇ.10ಕ್ಕಿಂತ ಕಡಿಮೆ, ವಿಶ್ವಸಂಸ್ಥೆಯ ಮಹಿಳಾ ದಾಖಲೆಗಳ ಪ್ರಕಾರ ಕಳೆದ ದಶಕಗಳಲ್ಲಿ ಒಟ್ಟು ರಾಜಕೀಯದಲ್ಲಿ ಮಹಿಳೆಯು ಭಾಗವಹಿಸುವಿಕೆ ಗಣನೀಯವಾಗಿ ಹೆಚ್ಚಿದೆ ಆದರೆ ಸಾರ್ವಜನಿಕ ಆಡಳಿತ, ರಾಜಕೀಯ ಪಕ್ಷ ಮತ್ತು ಕಾರ್ಮಿಕ ಸಂಘಟನೆಗಳಲ್ಲಿ ಹಾಗೂ ನೀತಿ ನಿರೂಪಣೆಯ ನಿರ್ಧಾರ ಕೈಗೊಳ್ಳುವ ಹಂತಗಳಲ್ಲಿ ಮಹಿಳೆಯ ಸಂಖ್ಯೆಯಲ್ಲಿ ಅಂತಹ ಬದಲಾವಣೆ ಇಲ್ಲ. ಒಟ್ಟಾರೆಯಾಗಿ ನೋಡಿದಾಗ ಜಗತ್ತಿನ ಒಟ್ಟು ಮಹಿಳೆಯರ ಪೈಕಿ ಶೇ. 14ರಷ್ಟು ಮಾತ್ರ ನಿರ್ವಹಣಾ ಹುದ್ದೆ ಮತ್ತು ಆಡಳಿತಾತ್ಮಕ ಕಾರ್ಯಗಳಲ್ಲಿ ಇರುವುದನ್ನು ನೋಡಬಹುದಾಗಿದೆ. ಇದು ಕೇವಲ ಅಸಮಾನತೆಯ ಲೆಕ್ಕಚಾರವಾಗಿರದೆ ಜಗತ್ತಿನ ಒಟ್ಟು ಮಾನವಾಭಿವೃದ್ಧಿಯ ವೈಪರಿತ್ಯವಾಗಿದೆ. ಯಾಕೆಂದರೆ ಜಗತ್ತಿನ ಒಟ್ಟು ಬಡವರ ಪೈಕಿ ಶೇ.70 ರಷ್ಟು ಮಹಿಳೆಯರೇ ಆಗಿದ್ದಾರೆ ಮತ್ತು ಜಗತ್ತಿನ ಒಟ್ಟು ಅನಕ್ಷರಸ್ಥರಲ್ಲಿ 1/3 ಭಾಗದಷ್ಟು ಮಹಿಳೆಯರಿದ್ದಾರೆ. 1995 ರ ಮಾನವಾಭಿವೃದ್ಧಿ ವರದಿಯಂತೆ "ಮಹಿಳೆಯರು ಕೂಡ ಪುರುಷರಿಗೆ ಸಮಾನವಾಗಿ ದುಡಿಯುತ್ತಾರೆ. ಆದರೆ ಭೌತಿಕ ಸಂದರ್ಭದಲ್ಲಿ ಅವರ ಕೆಲಸ ಅಪಮೌಲ್ಯೀಕರಣ ಅಥವಾ ಅಪಮಾನ್ಯತೆಗೆ ಒಳಗಾಗುತ್ತದೆ. ಒಟ್ಟಾರೆಯಾಗಿ ಒಟ್ಟು ಜಗತ್ತಿನಲ್ಲಿ ಬಡತನ, ಅನರಕ್ಷತೆ, ದೀರ್ಘ ಕೆಲಸದ ಅವಧಿ ಮತ್ತು ಹಿಂಸೆಗೆ ಮಹಿಳೆಯರು ಸಾಕ್ಷಿಯಾಗಿದ್ದಾರೆ.

ಭಾರತದಲ್ಲೂ ಕೂಡ ಉನ್ನತ ಮಟ್ಟದ ರಾಜಕೀಯ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಬಹಳ ಕಾಲದ ಹಿಂದೆಯೇ ಒತ್ತಿ ಹೇಳಲಾಗಿತ್ತು. 1931 ರಲ್ಲಿ ನಡೆದಂತ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶದಲ್ಲಿ ಶಾಸನ ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಅಗತ್ಯತೆ ಮತ್ತು ಸಮಾನ ಗುಂಪಿನ ಮಹಿಳೆಯರ ಕುರಿತಾಗಿ ಮಾಡಬಹುದಾದ ಕೆಲಸ ಕಾರ್ಯಗಳ ಬಗ್ಗೆ ಚರ್ಚಿಸಲಾಯಿತು. ಭಾರತದ ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಶ್ರೀ ಟಿ. ಎನ್. ಶೇಷನ್ ರವರು ರಾಜಕೀಯ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿನ

ಮಹಿಳೆಯರ ಗೈರು ಹಾಜರಿಯು ಅಥವಾ ಭಾಗವಹಿಸುವಿಕೆಯ ಅಸಮಾನತೆಯು ಒಟ್ಟು ಮಹಿಳಾ ಸಮುದಾಯಕ್ಕೆ ಮಾಡುವ ತಾರತಮ್ಯ ಎಂದು ಹೇಳಿದ್ದಾರೆ. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ನಡೆದಿರುವಂತಹ ಮಹಿಳಾ ಚಳವಳಿಗಳು ದೇಶದ ಸ್ಥಳೀಯ, ಮಧ್ಯಮ ಮತ್ತು ಉನ್ನತ ಮಟ್ಟದ ಸಂಸ್ಥೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಅನುಕೂಲ ಕಲ್ಪಿಸಿಕೊಟ್ಟಿದೆ. ಈ ಅನುಕೂಲಗಳು ಸಾಂವಿಧಾನಿಕ ಆಶಯ ಮತ್ತು ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದರ ಮೂಲಕ ರಾಜಕೀಯ ಶಕ್ತಿಯ ಪುನರ್ ವ್ಯಾಖ್ಯಾನ ಸಾಮಾಜಿಕ ಸಮಾನತೆ ಸಾಧಿಸಲು ಸಾಧ್ಯವಾಗುತ್ತದೆ.

1.2 ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ

ವೈದಿಕ ಯುಗದ ಪ್ರಾರಂಭದಲ್ಲಿ ಮಹಿಳೆಯರು ಕೂಡ ಪುರುಷರಿಗೆ ಸಮಾನವಾದ ಸ್ಥಾನಮಾನವನ್ನು ಹೊಂದಿದ್ದರು ಮತ್ತು ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಗಳಾಗಿದ್ದು ಕ್ರಿಯಾತ್ಮಕವಾಗಿ ಸಾರ್ವಜನಿಕ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ಅದರ ಹೊರತಾಗಿಯೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮತ್ತು ಸಾಂಪ್ರದಾಯಿಕ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಮಹಿಳೆಯರು ಪ್ರಮುಖ ಪಾತ್ರವನ್ನು ವಹಿಸಿದ್ದರು. ಈ ಕಾಲವನ್ನು ಭಾರತದ ಮಹಿಳೆಯರ ಸುವರ್ಣ ಯುಗವೆಂದು ಕರೆಯಲಾಗುತ್ತದೆ. ಆದರೆ ಕ್ರಿಸ್ತ ಪೂರ್ವ 300 ರಲ್ಲಿ ಮಹಿಳೆಯರ ಸ್ಥಾನಮಾನ ಗಮನಾರ್ಹವಾಗಿ ಕುಸಿಯಲಾರಂಭಿಸಿತು. ಕಾರಣ ಆರ್ಯ ಮಹಿಳೆಯರು ಆರ್ಯೇತರ ಮಹಿಳೆಯರೊಂದಿಗೆ ಮಿಲಿತಗೊಂಡಿರುವ ಪರಿಣಾಮವಾಗಿ ಶಿಕ್ಷಣದ ಕೊರತೆ ಇರುವ ಆರ್ಯೇತರ ಮಹಿಳೆಯರು ಕ್ರಮೇಣವಾಗಿ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸ್ಥಾನಮಾನದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವುದಕ್ಕೆ ಸಾಧ್ಯವಾಗಲಿಲ್ಲ. ಇದರ ಮುಂದುವರಿದ ಭಾಗವಾಗಿ 19 ನೇ ಶತಮಾನದ ಪ್ರಾರಂಭದಲ್ಲಿ ಮುಸ್ಲಿಂ ಆಳ್ವಿಕೆಯಲ್ಲಿ ಮಹಿಳೆಯರನ್ನು ಅತೀ ಕಠೋರವಾಗಿ ಕಾಣಲಾಗಿತ್ತು. ಆ ಸಂದರ್ಭದಲ್ಲಿ ಮಹಿಳೆಯರ ಸಾಮಾಜಿಕ ನಗಣ್ಯತೆಯನ್ನು ಬಿಂಬಿಸುವ ಸಾಮಾಜಿಕ ಅನಿಷ್ಟ

ಪದ್ಧತಿಗಳಾದ ಪರ್ದಾ, ಸತಿ ಪದ್ಧತಿ ಮತ್ತು ಹೆಣ್ಣು ಶಿಶುವಿನ ಹತ್ಯೆ ಮುಂತಾದುವುಗಳು ಬಹಿರಂಗವಾಗಿ ಪ್ರಚಲಿತಕ್ಕೆ ಬಂತು. ಆದರೆ ಬ್ರಿಟಿಷರು ಆಳ್ವಿಕೆ ನಡೆಸಿದ 200 ವರ್ಷಗಳ ಅವಧಿಯಲ್ಲಿ ಭಾರತದಲ್ಲಿ ಬೇರೂರಿದ್ದ ಸಾಮಾಜಿಕ ರಚನೆ ಮತ್ತು ಪದ್ಧತಿಗಳಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಕಂಡು ಬಂತು. ಇವರ ಆಳ್ವಿಕೆಯ ಪರಿಣಾಮದಿಂದ ದೇಶದಲ್ಲಿ ಸಾಂಪ್ರದಾಯಿಕ ಶಿಕ್ಷಣದ ಬದಲಾಗಿ ಶಾಸ್ತ್ರೀಯ ಶಿಕ್ಷಣ ಪ್ರಾರಂಭಗೊಂಡ ಫಲವಾಗಿ ಹೊಸ ಚಿಂತಕರ ಹೊಸ ತಲೆಮಾರು ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಹುದುಗಿದ್ದ ಸಾಮಾಜಿಕ ಅನಿಷ್ಟಗಳ ವಿರುದ್ಧ ಧ್ವನಿ ಎತ್ತುವ ಮತ್ತು ಹೋರಾಟ ಮಾಡುವ ಮನಸ್ಥಿತಿ ಮೊಳಕೆಯೊಡೆಯಿತು. ಸಮಾಜಶಾಸ್ತ್ರಜ್ಞರು 19 ನೇ ಶತಮಾನದ ಉತ್ತರಾರ್ಧವನ್ನು ಮಹಿಳೆಯರ ಯುಗವೆಂದು ಕರೆಯುತ್ತಾರೆ. ಯಾಕೆಂದರೆ, ಈ ಅವಧಿಯಲ್ಲಿ ಮಹಿಳೆ ಚರ್ಚೆಯ ಮುಖ್ಯ ಭಾಗವಾಗಿದ್ದಳು ಮತ್ತು ರಾಜಾರಾಮ್ ಮೋಹನ್ ರಾಯ್ ಅಂತಹ ಸಾಮಾಜಿಕ ಚಿಂತಕರು ಮಹಿಳೆ ಮತ್ತು ದುರ್ಬಲ ವರ್ಗದ ಗೌರವ ಅಸ್ತಿತ್ವವನ್ನು ಉಳಿಸಲು ಪ್ರಯತ್ನಪಟ್ಟರು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಕೂಡ ಮಹಿಳೆಯರ ಪಾತ್ರವನ್ನು ಅಲ್ಲಗೆಳೆಯುವಂತಿಲ್ಲ, ಆದರೆ ಬಹುತೇಕ ಮಹಿಳಾ ಹೋರಾಟಗಾರ್ತಿಯರು ಆಗಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿಯುತ್ತಿದ್ದ ಪುರುಷ ಹೋರಾಟಗಾರರ ಪತ್ನಿ, ಮಗಳು ಹಾಗೂ ಸಹೋದರಿಯರಾಗಿದ್ದರು ಮತ್ತು ಆಗಲೇ ಅವರು ಸಮಾಜದಲ್ಲಿ ಸಾಮಾಜಿಕ ಸ್ಥಾನಮಾನ ಮತ್ತು ಗೌರವವನ್ನು ಅನುಭವಿಸಿದ್ದರು.

1.3 ಗಾಂಧಿ ಮತ್ತು ಸ್ವಾತಂತ್ರ ಪಡೆದ ನಂತರ ಮಹಿಳೆಯರ ಭಾಗವಹಿಸುವಿಕೆ

ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳಾ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಿದವರ ಪೈಕಿ ಗಾಂಧೀಜಿಯವರ ಪ್ರಯತ್ನ ಅದ್ವಿತೀಯವಾದುದು. ಗಾಂಧೀಜಿಯ ಹೋರಾಟದ ಅಸ್ತ್ರದಾಗಿದ್ದ ಸತ್ಯಾಗ್ರಹದಲ್ಲಿ ಮಹಿಳೆಯರು ಕೂಡ ಭಾಗವಹಿಸುವಂತೆ ಉತ್ತೇಜಿಸಿದ್ದರು. ಅಲ್ಲದೇ ಗಾಂಧೀಜಿಯವರು ನಡೆಸಿದ ಬಹುತೇಕ ಹೋರಾಟಗಳು ಮೇಲ್ನೋಟಕ್ಕೆ ರಾಷ್ಟ್ರೀಯ ವಿವೇಚನೆಯ ಉದ್ದೇಶವನ್ನು ಹೊಂದಿದ್ದರೂ ಅಂತರ್ಯದಲ್ಲಿ ಮಹಿಳೆಯರು ಯಥೇಚ್ಛಾವಾಗಿ ಬಳಸುತ್ತಿದ್ದ

ಚರಕ, ಉಪ್ಪು ಮತ್ತು ಮದ್ಯದಂಗಡಿ ನಿಷೇಧದ ಪರವಾಗಿತ್ತು. ಇವುಗಳಲ್ಲಿ ಚಳವಳಿಯನ್ನು ಅಡುಗೆ ಮನೆಯಿಂದಲೇ ಪ್ರಾರಂಭಿಸುವಂತೆ ಮಹಿಳೆಯರಿಗೆ ಪ್ರೇರಣೆಯನ್ನು ನೀಡಿತ್ತು. ಗಾಂಧೀಜಿಯವರ ದೃಷ್ಟಿಕೋನದಲ್ಲಿ ಶುದ್ಧ ರಾಜಕೀಯತೆಯು ಮಹಿಳೆಯರ ಭಾಗವಹಿಸುವಿಕೆಯಲ್ಲಿ ಮನಗಂಡಿದ್ದರು. ಆದರೆ ಪ್ರತ್ಯೇಕ ಮಹಿಳಾ ಚಳವಳಿಗಳ ಬಗ್ಗೆ ಗಂಭೀರ ಆಲೋಚನೆ ಅಥವಾ ಆಸಕ್ತಿಯನ್ನು ಹೊಂದಿರಲಿಲ್ಲ. ಸ್ವಾತಂತ್ರ್ಯ ಸಂಗ್ರಾಮದ 1917 ರಿಂದ 1947 ರ ಅವಧಿಯಲ್ಲಿ ಲಿಂಗ ಅಷ್ಟೇನು ಪ್ರಾಮುಖ್ಯತೆಯನ್ನು ಪಡೆದಿರಲಿಲ್ಲ. ಆದರೆ 1920 ರಲ್ಲಿ ಮದ್ರಾಸ್ ಪ್ರಾಂತ್ಯ ಶಾಸನ ಸಭೆಯಲ್ಲಿ ಮುತ್ತು ಲಕ್ಷ್ಮೀ ರೆಡ್ಡಿ ನಾಮಕರಣಗೊಂಡಾಗ ಸ್ವಾತಂತ್ರ್ಯ ಚಳವಳಿಗೆ ಮಹಿಳಾ ಹಂಗಾಮವನ್ನು ತಂದು ಕೊಟ್ಟಿತು. ಇದರಿಂದ ಗಾಂಧೀಜಿಯ ಹೋರಾಟದ ಪ್ರಯತ್ನ ಅಲ್ಲಗಲೆಯುವಂತಿಲ್ಲ.

ಸ್ವಾತಂತ್ರ್ಯ ನಂತರ ಸಂವಿಧಾನತ್ಮಕ ಆಡಳಿತ ವ್ಯವಸ್ಥೆ ಜಾರಿಗೆ ಬಂದ 50 ವರ್ಷಗಳ ನಂತರ ಮಹಿಳಾ ರಾಷ್ಟ್ರಾಧ್ಯತೆಯನ್ನು ಕಾಣಲು ಸಾಧ್ಯವಾಯಿತು.ಆದರೂ ದೇಶದ ಅತ್ಯುನ್ನತ ಸ್ಥಾನಗಳಾದ ಉಪಾಧ್ಯಕ್ಷ, ಶೇಷ ನ್ಯಾಯಾಲಯ ಮುಖ್ಯ ನ್ಯಾಯಧೀಶರು, ಚುನಾವಣಾ ಆಯುಕ್ತರಂತಹ ಸ್ಥಾನಮಾನವನ್ನು ಪಡೆಯುವಲ್ಲಿ ಮಹಿಳೆಯರು ವಿಫಲರಾಗಿದ್ದಾರೆ. ಇಂದಿರಾ ಗಾಂಧಿಯವರ ಎರಡು ದಶಕಗಳ ರಾಜಕೀಯ ಅವಧಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಅಷ್ಟೇನೂ ಇರಲಿಲ್ಲ. ಉತ್ತರ ಪ್ರದೇಶದಿಂದ ಇಂದಿರಾ ಗಾಂಧಿಯವರು ಆಯ್ಕೆಯಾದರೂ ಕೂಡ ಸ್ಥಳೀಯ ಮಹಿಳೆಯರು ರಾಜ್ಯ ರಾಜಕೀಯ ಮತ್ತು ಗ್ರಾಮ, ಪುರಸಭೆ ರಾಜಕೀಯದಲ್ಲಿ ಪ್ರತಿನಿಧಿಸುವುದಕ್ಕೆ ಪೂರಕವಾದ ವಾತಾವರಣ ಕಲ್ಪಿಸಲಿಲ್ಲ. ಇತ್ತೀಚ್ಚಿನ ದಿನಗಳಲ್ಲಿ ದೇಶದ ಅತ್ಯುನ್ನತ ಸ್ಥಾನಗಳಾದ ರಾಷ್ಟ್ರಾಧ್ಯಕ್ಷರು ಮತ್ತು ಲೋಕಸಭಾ ಸ್ಪೀಕರ್ ಮಹಿಳೆಯರ ಪಾಲಾಗಿರುವುದು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಉತ್ತೇಜಿಸಿದೆ.

ವಿಶ್ವಸಂಸ್ಥೆಯ ಸ್ಥಾಪಕ ದೇಶಗಳಲ್ಲಿ ಒಂದಾದ ಭಾರತವು ಸ್ವಾತಂತ್ರ್ಯದ ನಂತರ ಲಿಂಗ ಸಮಾನತೆಯ ತತ್ವಗಳನ್ನು ಸಂವಿಧಾನದಲ್ಲಿ ಅಳವಡಿಸಿಕೊಂಡಿದ್ದು 1955ರ ಮಧ್ಯಭಾಗದಲ್ಲಿ ಸರ್ಕಾರ ಮಹಿಳೆಯರ ಕುರಿತಾದ ಪ್ರಗತಿಪರ ಕಾನೂನುಗಳನ್ನು ಜಾರಿಗೊಳಿಸುವುದರ ಮೂಲಕ ಮಹಿಳೆಯರ ಹಕ್ಕು ರಕ್ಷಣೆಗೆ ದಿಟ್ಟ ಹೆಜ್ಜೆ ಇಟ್ಟಿತು. ವಿಶೇಷವಾಗಿ 1993ರಲ್ಲಿ ಸಂವಿಧಾನದ 73ನೇ ತಿದ್ದುಪಡಿಯ ಅನುಷ್ಠಾನಕ್ಕೆ ಬಂದು, ಮಹಿಳೆಯರಿಗೆ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಒದಗಿಸಿದೆ. ಇದಕ್ಕೆ ಪೂರಕವೆಂಬಂತೆ ಸರಕಾರಗಳು ಮಹಿಳೆ ಮತ್ತು ವಿಶೇಷವಾಗಿ ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ (ದಾಕ.ಎಸ್, 2005). ಸರಕಾರದ ಈ ಉಪಕ್ರಮಗಳು ಸಂವಿಧಾನಬದ್ಧವಾದ ಸೌಲಭ್ಯಗಳಾಗಿದ್ದು, ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳು ಕೂಡ ಮಹಿಳೆಯರ ಶಿಕ್ಷಣ ಹಾಗೂ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಮಾನವಾದ ಅವಕಾಶಗಳನ್ನು ಕಲ್ಪಿಸಿ ಕೊಟ್ಟಿತು. ಆರನೇಯ ಪಂಚವಾರ್ಷಿಕ ಯೋಜನೆಯ್ಯು ಮಹಿಳೆಯರ ಸಮಗ್ರ ಅಭಿವೃದ್ದಿಗೆ ಕ್ರಮವನ್ನು ಕೈಗೊಂಡಿತ್ತು (ಗುಪ್ತ. ಶಾಕುಂತಲಾ, 2005)).

ಶಾಸನೀಯ ಉಪಕ್ರಮಗಳು ಕೂಡ ಮಹಿಳೆಯರ ದೌರ್ಜನ್ಯದ ವಿರುದ್ಧ ಕ್ರಮಕೈಗೊಳ್ಳುವುದಕ್ಕೆ ಮತ್ತು ಅವರ ಆಸಕ್ತಿ ಹಕ್ಕುಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪರಿಣಾಮವಾಗಿ ಜಾರಿಗೆ ಬಂದಂತಹ ಪ್ರಸೂತಿಕ ಸೌಲಭ್ಯ ಕಾಯ್ದೆ 1961, ಸಮಾನ ವೇತನ ಕಾಯ್ದೆ 1961, ವರದಕ್ಷಿಣೆ ನಿಷೇದ ಕಾಯ್ದೆ, ವಿವಾಹ ಕಾಯ್ದೆ, ವೈದ್ಯಕೀಯ ಗರ್ಭ ಸಮಾಪನ ಕಾಯ್ದೆ 1961, ಬಾಲ್ಯವಿವಾಹ ನಿಷೇದ ಕಾಯ್ದೆ, ಹಿಂದೂ ವಿವಾಹ ಕಾಯ್ದೆ 1955, ಉತ್ತರಾಧಿಕಾರತ್ವ ಕಾಯ್ದೆ 1956 ಅನುಷ್ಠಾನಕ್ಕೆ ಬಂದು ಮಹಿಳೆಯರ ಒಟ್ಟು ಜೀವನಾಭಿವೃದ್ಧಿಗೆ ಸಹಾಯಕವಾಗಿದೆ. 1985 ರಲ್ಲಿ ಮಾನವ ಅಭಿವೃದ್ಧಿ ಇಲಾಖೆಯ ಭಾಗವಾಗಿ ಅಸ್ತಿತ್ವಕ್ಕೆ ಬಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಮಹಿಳೆಯರ ಸಾಮಾಜಿಕ, ಆರ್ಥಿಕ, ರಾಜಕೀಯ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡಿದೆ. ಈ ಇಲಾಖೆಯು ಬಡ ಮತ್ತು ಭೂ ರಹಿತ

ಮಹಿಳೆಯರಿಗೆ ಮಹಿಳಾ ಆರ್ಥಿಕ ಕಾರ್ಯಕ್ರಮ 1982, ಮಹಿಳಾ ತರಬೇತಿ ಮತ್ತು ಉದ್ಯೋಗ ಕಾರ್ಯಕ್ರಮ 1987, ರಾಷ್ಟ್ರೀಯ ಮಹಿಳಾ ಕೋಶ 1993 ಗಳನ್ನು ಅನುಷ್ಠಾನಗೊಳಿಸಿ ಮಹಿಳೆಯರ ತಾರತಮ್ಯ ಹೋಗಲಾಡಿಸಲು ಹೋರಾಡುತ್ತಿದೆ.

ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಎತ್ತಿ ಹಿಡಿಯುವುದಕ್ಕೆ ಪೂರಕವಾಗಿ ರಾಷ್ಟ್ರೀಯ ಮಹಿಳಾ ಸಶಕ್ತೀಕರಣ ನೀತಿ 2001, ಸ್ವಯಂಸಿದ್ಧ 2001, ಸುವರ್ಣ ಜಯಂತಿ ಗ್ರಾಮ ಸ್ವರಾಜ್ ಯೋಜನೆ 1999 ಅನುಷ್ಠಾನಕ್ಕೆ ಬಂದು ಸಾಮಾನ್ಯ ಮಹಿಳೆ ಮತ್ತು ಗ್ರಾಮೀಣ ಮಹಿಳೆಯರು ಸಂಪನ್ಮೂಲಗಳನ್ನು ಪಡೆಯುವುದಕ್ಕೆ ಮತ್ತು ಸಂಪನ್ಮೂಲಗಳ ಮೇಲೆ ನೇರ ನಿಯಂತ್ರಣ ಹೊಂದುವುದಕ್ಕೆ ಅವಕಾಶ ಕಲ್ಪಿಸಿತು.

1.4: ಪಂಚಾಯತ್ ರಾಜ್‌ನಲ್ಲಿ ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆ: ಪುನರವಲೋಕನ

73 ನೇ ತಿದ್ದುಪಡಿಯ ಪೂರ್ವ ಅವಧಿ: ಪಂಚಾಯತ್‌ಗಳ ಪುನರ್ರಚನೆಗೆ ಸಂಬಂಧಿಸಿದಂತೆ ಬಲವಂತ್‌ರಾಯ್ ಮೆಹ್ತಾ ಕಮಿಟಿ–1957 ರಲ್ಲಿ ಮತ್ತು ಅಶೋಕ್ ಮೆಹ್ತಾ ಕಮಿಟಿ 1977ರ ವರದಿಗಳು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ನಿರ್ಲಕ್ಷಿಸಿತು. ಈ ವರದಿಗಳು ಕೇವಲ ಮಹಿಳೆಯ ಭಾಗವಹಿಸುವಿಕೆಯನ್ನು ಕೇವಲ ಮಹಿಳಾ ಮಂಡಲ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಗಳಿಗೆ ಮಾತ್ರ ಸೀಮಿತಗೊಳಿಸಿತು. ಇದೇ ಸಂದರ್ಭದಲ್ಲಿ 1980ರ ಪ್ರಾರಂಭದಲ್ಲಿ ದೇಶದ ಕೆಲವು ರಾಜ್ಯಗಳು ಕೆಳ ಮಟ್ಟದ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಬಗ್ಗೆ ಗಂಭೀರವಾಗಿ ಯೋಚಿಸಲು ಆರಂಭಿಸಿತು. ಒಟ್ಟಾರೆಯಾಗಿ ಈ ಅವಧಿಯಲ್ಲಿ ದೇಶದ ಬಹುಸಂಖ್ಯಾತ ಮತದಾರರಾಗಿದ್ದ ಮಹಿಳೆಯರಿಗೆ ರಾಜಕೀಯದ ನೇರ

ಭಾಗವಹಿಸುವಿಕೆಯನ್ನು ನಿಷೇಧಿಸಿತ್ತು. 1989ರ ಸಂವಿಧಾನದ 64ನೇ ತಿದ್ದುಪಡಿಯ ಮಹಿಳೆಯರಿಗೆ ಅಲ್ಪ ಪ್ರಮಾಣದ ಮೀಸಲಾತಿಯನ್ನು ನೀಡಿತು. ಅಶೋಕ ಮೆಹ್ತಾ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನದ ಸಮಯದಲ್ಲಿ ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದ ರಾಮಕೃಷ್ಣ ಹೆಗ್ಡೆ ಸರ್ಕಾರವು ಪ್ರಥಮ ಬಾರಿಗೆ ಮಹಿಳೆಯರಿಗೆ ಶೇ.25 ಸ್ಥಾನಗಳ ಮೀಸಲಾತಿ ನೀಡುವ ಮೂಲಕ ಮಹಿಳಾ ಸಬಲೀಕರಣದ ಹೊಸ ಯುಗಕ್ಕೆ ನಾಂದಿ ಹಾಡಿತು.

73ನೇ ತಿದ್ದುಪಡಿಯ ನಂತರ: 1993ರ ಸಂವಿಧಾನದ 73ನೇಯ ತಿದ್ದುಪಡಿಯು ಪ್ರಥಮ ಬಾರಿಗೆ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಸ್ಥಳೀಯ ಸಂಸ್ಥೆಗಳ ರಾಜಕೀಯದಲ್ಲಿ ಭಾಗವಹಿಸುವುದಕ್ಕೆ ಮತ್ತು ಅಧಿಕಾರದ ಚಲಾವಣೆಗೆ ಅಧಿಕಾರ ಕಲ್ಪಿಸಿಕೊಟ್ಟಿತು. ಈ ತಿದ್ದುಪಡಿಯು ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಮತ್ತು ರಾಜಕೀಯ ಸಶಕ್ತೀಕರಣಕ್ಕೆ ಪೂರಕವಾದ ತರಬೇತಿ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿತು. ಈ ಕಾಯ್ದೆಯನ್ನು ಅನುಷ್ಠಾನಗೊಳಿಸಿದ ಪ್ರಥಮ ರಾಜ್ಯವಾದ ಕರ್ನಾಟಕವು ಇತ್ತೀಚೆಗೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯ ಪ್ರಮಾಣವನ್ನು ಶೇ.50 ಕ್ಕೆ ಏರಿಸಿದೆ. ಸಮಾಜದ ತಳಸ್ತರದ ಮಹಿಳೆಯರು ಕೂಡ ರಾಜಕೀಯದಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗುವಂತೆ ಶೇ.1/3 ಭಾಗದಷ್ಟು ಮೀಸಲಾತಿಯನ್ನು ಒದಗಿಸಿದೆ. ಈ ತಿದ್ದುಪಡಿಯ ಮುಖಾಂತರ ಪುನರ್ರಚನೆಗೊಂಡ ಮೂರು ಸ್ತರದ ಪಂಚಾಯತ್‌ಗಳ ನಡುವೆ ಸಮನ್ವಯ ಸಾಧಿಸುವುದಕ್ಕೆ 1999 ರಲ್ಲಿ 87ನೇ ತಿದ್ದುಪಡಿ ಮಸೂದೆ ಜಾರಿಗೆ ಬಂತು. ಈ ತಿದ್ದುಪಡಿಯು ಮೂರು ವ್ಯವಸ್ಥೆಗಳ ಮಧ್ಯೆ ಸಂಪರ್ಕ ಅಭಿವೃದ್ಧಿಗೊಳಿಸಲು ಮತ್ತು ಗ್ರಾಮೀಣಾಭಿವೃದ್ದಿಯ ತೀವ್ರತೆಯನ್ನು ಹೆಚ್ಚಿಸಲು ಕಾರಣವಾಯ್ತು. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ದೊರೆತ ರಾಜಕೀಯ ಭಾಗವಹಿಸುವಿಕೆಯ ಅವಕಾಶಗಳು ಸಂಸತ್ತಿನಲ್ಲೂ ಪ್ರತಿಧ್ವನಿಸುತ್ತಿದೆ.

1.5: ಪಂಚಾಯಿತಿ ರಾಜ್ ಸಂಸ್ಥೆಗಳು – ಒಂದು ಹಿನ್ನೋಟ

ಸ್ಥಳೀಯ ಸ್ವಯಂ ಆಡಳಿತವು ಭಾರತದ ಉಪಖಂಡದಲ್ಲಿ ಒಂದಲ್ಲಾ ಒಂದು ರೂಪದಲ್ಲಿ ಅನೇಕ ಶತಮಾನದಿಂದ ಅಸ್ತಿತ್ವದಲ್ಲಿದೆ ಎಂದು ಇತಿಹಾಸವು ನಮಗೆ ತಿಳಿಸುತ್ತದೆ (ಅಸ್ಲಾಮ್.ಎಮ್, 2007). ಭಾರತದಲ್ಲಿ ಪಂಚಾಯಿತಿ ರಾಜ್ ವ್ಯವಸ್ಥೆಯ ವಿಕಾಸವನ್ನು ಮೂರು ಖಚಿತವಾದ ಅವಧಿಗಳ ಮೂಲಕ ಗುರುತಿಸಬಹುದು. 1. ಬ್ರಿಟಿಷ್ ಪೂರ್ವ ಅವಧಿ 2. ಬ್ರಿಟಿಷ್ ಅವಧಿ 3. ಸ್ವಾತಂತ್ರ್ಯೋತ್ತರ ಅವಧಿ. ಅದೇ ರೀತಿ ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆಯ ಬೆಳವಣಿಗೆಯನ್ನು ಕೂಡ ಕಾಣಬಹುದು.

ಬ್ರಿಟಿಷ್ ಪೂರ್ವ ಅವಧಿ: ಸ್ಥಳೀಯ ಸ್ವಯಂ ಆಡಳಿತದ ಮೂಲವನ್ನು ಮಧ್ಯಯುಗೀನ ಕಾಲದಲ್ಲಿ ಗುರುತಿಸಬಹುದು. ಅಲ್ಲಿ 'ಸಮುದಾಯಭಾವನೆ' ಪ್ರಧಾನವಾದಬಲವಾಗಿತ್ತು.ಇದು ಗ್ರಾಮೀಣ ಸಮುದಾಯಗಳನ್ನು ಒಗ್ಗಟ್ಟಾಗಿ ಇಡುವುದಲ್ಲದೆ ಸ್ಥಳೀಯ ವಿಧ್ಯಾಮಾನಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಅವರಿಗೆ ನೆರವಾಗುತ್ತಿತ್ತು. ವೇದಗಳಲ್ಲಿ ಗ್ರಾಮ ಸಭೆಗಳು ಮತ್ತು ಸಮಿತಿಗಳು ಹಾಗೂ ಗ್ರಾಮೀಣರ ಅಸ್ತಿತ್ವವಿದ್ದದಕ್ಕೆ ಖಚಿತ ಸಾಕ್ಷ್ಯಧಾರಗಳು ದೊರೆತಿದೆ. ಗ್ರಾಮೀಣ ಪ್ರಜಾಪ್ರಭುತ್ವದ ಈ ಪ್ರಾಚೀನ ವ್ಯವಸ್ಥೆಯ ಕಾಲಾನಂತರದಲ್ಲಿ ಸಾರ್ವಜನಿಕ ರಕ್ಷಣೆ ಮತ್ತು ನ್ಯಾಯಿಕ ಅಧಿಕಾರಗಳೊಡನೆ ಗ್ರಾಮದ ವಿದ್ಯಾಮಾನಗಳನ್ನು ನಿರ್ವಹಿಸುವ ಪಂಚಾಯತರ ರೂಪವನ್ನು ತಾಳಿತು. ಮಧ್ಯಯುಗದ ಅವಧಿಯಲ್ಲಿ ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಅನೇಕ ರಾಜಕೀಯ ಬದಲಾವಣೆಗಳು ಸಂಭವಿಸಿದ್ದರೂ ಗ್ರಾಮಗಳಲ್ಲಿನ ಪಂಚಾಯಿತಿ ವ್ಯವಸ್ಥೆಯು ಪ್ರಕ್ಷುಬ್ದಗೊಳ್ಳದೆ ಮುಂದುವರಿದಿತ್ತು. ಮೊಘಲರು ಆಳ್ವಿಕೆಯಲ್ಲಿ ಅವರ ನ್ಯಾಯ ನಿರ್ಣಯ ಅಧಿಕಾರ ಮೊಟಕುಗೊಂಡಿದ್ದರು, ಸ್ಥಳೀಯ ವಿದ್ಯಾಮಾನಗಳು ಮೇಲಿನವರಿಂದ ಅನಿಯಂತ್ರಿತವಾಗಿ ಉಳಿದಿದ್ದವು. ಗ್ರಾಮದ ಅಧಿಕಾರಿಗಳು ಮತ್ತು ಸೇವಕರು ಮೂಲತಃ ಪಂಚಾಯಿತಿಗಳಿಗೆ ಉತ್ತರಾಧಿಕಾರಿಗಳಾಗಿದ್ದರು.

1.6: ಬ್ರಿಟಿಷ್ ಪೂರ್ವದ ಅವಧಿಯಲ್ಲಿ ಕರ್ನಾಟಕದ ಪಂಚಾಯತ್ ರಾಜ್

ಗ್ರಾಮ ಸ್ವರಾಜ್ಯದ ಪರಿಕಲ್ಪನೆಯ ಆಳದ ಹೊರತಾಗಿ ಅರಿವಿನ ಹೊರತಾಗಿಯು ಕರ್ನಾಟಕದಲ್ಲಿ ಜನತೆಗೆ ಅಧಿಕಾರವನ್ನು ಕೊಡುವ ನಿಟ್ಟಿನಲ್ಲಿ ಹಲವು ಪ್ರಯತ್ನಗಳು ಬಹಳ ಹಿಂದಿನಿಂದಲೇ ನಡೆದುಕೊಂಡು ಬಂದಿದೆ. ಪಂಚಾಯತಿಯ ಗಟ್ಟಿಯಾದ ಬೇರುಗಳು ಬಹುಶ ಕರ್ನಾಟಕ ಮುಂದಿನ ದಿನಗಳಲ್ಲಿ ಬಲಶಾಲಿಯಾದ ಮತ್ತು ಮುಂಚೂಣಿಯ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಹೊಂದಲು ಆಧಾರವಾಯಿತು. ಐತಿಹಾಸಿಕವಾಗಿ ರಾಜ್ಯದ ಹಿಂದಿನ ಅನೇಕ ರಾಜ ಮನೆತನಗಳು ವಿಕೇಂದ್ರೀಕೃತ ಆಡಳಿತದ ಬಗ್ಗೆ ಕಾಳಜಿಯನ್ನು ಹೊಂದಿದ್ದವು ಎಂಬುದು ಬೆಳಕಿಗೆ ಬಂದ ಸತ್ಯ. ಉದಾಹರಣೆಗೆ ಶಾತವಾಹನ, ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ ಇವೇ ಮೊದಲಾದವರ ಆಡಳಿತ ಕೊಡುಗೆಗಳು ಗ್ರಾಮದ ಪರಿಕಲ್ಪನೆಗೆ ಒತ್ತು ನೀಡಿದ್ದವು. ನಾಡು, ವಿಷಯ, ಗ್ರಾಮ, ಅಗ್ರಹಾರ ಇತ್ಯಾದಿ ಆಡಳಿತಾತ್ಮಕ ಹೆಸರುಗಳು ಆಗ ಚಾಲ್ತಿಯಲ್ಲಿದ್ದವು. ಹೊಯ್ಸಳರ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದುದರ ಬಗ್ಗೆ ಇತಿಹಾಸದಲ್ಲಿ ಉಲ್ಲೇಖಗಳಿವೆ. ಇದು ವಿಜಯ ನಗರ ರಾಜರ ಆಡಳಿತದವರೆಗೆ ಮುಂದುವರಿದುಕೊಂಡು ಹೋಗಿತ್ತು. ಆದರೆ ಮೈಸೂರು ಒಡೆಯರ ಕಾಲದಲ್ಲಿ ಮತ್ತು ಹೈದರಾಲಿ ಹಾಗು ಟಿಪ್ಪುವಿನ ಕಾಲದಲ್ಲಿ ಪಂಚಾಯತಿಗಳ ಬಗ್ಗೆ ಮಹತ್ತರವಾದ ಬದಲಾವಣೆಗಳೇನು ಕಂಡು ಬಂದಿಲ್ಲ.

ಬ್ರಿಟಿಷ್ ಅವಧಿ: ಸ್ಥಳೀಯ ಸ್ವಯಮಾಡಳಿತದ ವಿಷಯವನ್ನು ಕುರಿತಂತೆ ಜನಪ್ರಿಯ, ಸಾರ್ವಜನಿಕ ಅಭಿಪ್ರಾಯವನ್ನು ಪಡೆಯುವ ಸಲುವಾಗಿ ಲಾರ್ಡ್ ರಿಪ್ಪನ್‌ನ ಸರ್ಕಾರವು ಪ್ರಾಂತೀಯ ಸರ್ಕಾರಗಳಿಗೆ ಸುತ್ತೋಲೆಗಳನ್ನು ಕಳುಹಿಸಿತು. ಈ ಸುತ್ತೋಲೆಯಲ್ಲಿ ಪ್ರಸ್ತಾವಿತವಾದ ಅಂಶಗಳು ಭಾರತ ಸರ್ಕಾರದ ನಿರ್ಣಯಕ್ಕೆ (1882) ಆಧಾರವಾದವು. ಆನಂತರ ಸ್ಥಳೀಯ ಮಂಡಲಿಗಳ ಕಾಯಿದೆ, 1885 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಸ್ಥಾಪನೆಗೆ

ಇದು ಆಧಾರವಾಯಿತು. ಬಹುತೇಕ ಎಲ್ಲಾ ಪ್ರಾಂತ್ಯಗಳಲ್ಲಿ ಗ್ರಾಮ ಪಂಚಾಯಿತಿಗಳು ಸ್ಥಾಪಿಸಲು ಸುಮಾರು ಕಾಯಿದೆಗಳನ್ನು ಮಂಜೂರು ಮಾಡಲಾಯಿತು. ಅವುಗಳಲ್ಲಿ 1919ರ ಬಂಗಾಳ ಗ್ರಾಮ ಸ್ವಯಮಾಡಳಿತ ಕಾಯಿದೆ, 1920ರ ಮದ್ರಾಸ್ ಬಾಂಬೆ ಮತ್ತು ಸಂಯುಕ್ತ ಪ್ರಾಂತ್ಯಗಳ ಗ್ರಾಮ ಪಂಚಾಯಿತಿ ಕಾಯಿದೆ, 1926ರ ಬಿಹಾರ್ ಮತ್ತು ಒರಿಸ್ಸಾ ಗ್ರಾಮ ಆಡಳಿತ ಕಾಯಿದೆ, ಅಸ್ಸಾಮ್ ಗ್ರಾಮೀಣ ಸ್ವಯಮಾಡಳಿತ ಕಾಯಿದೆ ಮತ್ತು ಪಂಜಾಬ್ ಗ್ರಾಮ ಪಂಚಾಯತ್ ಕಾಯಿದೆ, ಇತ್ಯಾದಿಗಳು. ಈ ಶಾಪ ಸೂಕ್ತ ಪಂಚಾಯಿತಿಗಳು ಪರಿಮಿತ ಸಂಖ್ಯೆಯ ಕಾರ್ಯ ಭಾರಗಳನ್ನು ಮಾತ್ರ ಹೊಂದಿದ್ದವು. ಈ ಮಂಡಳಿಗಳು ನಿಜವಾದ ಅರ್ಥದಲ್ಲಿ ಪ್ರಜಾಸತಾತ್ಮಕವಾಗಿರಲಿಲ್ಲ. ಅವುಗಳಲ್ಲಿ ಬಹುಪಾಲು ಸದಸ್ಯರು ಸರ್ಕಾರದಿಂದ ನಾಮಕರಣ ಮಾಡಿದವರಾಗಿದ್ದರು. ಕಳೆದ ಕೆಲವು ದಶಕಗಳಲ್ಲಿ ಗ್ರಾಮ ಪಂಚಾಯಿತಿಗಳನ್ನು ಸ್ಥಾಪಿಸಲು ಅಪಾರ ಸಂಖ್ಯೆಯ ರಾಜ್ಯಕಾಯಿದೆಗಳ ಮಂಜುರಾತಿಯನ್ನು ಬ್ರಿಟಿಷ್ ಆಡಳಿತವು ಗಮನಿಸಿದರೂ ಭಾರತವು ತನ್ನ ಸ್ವಾತಂತ್ರ್ಯವನ್ನು ಗಳಿಸುವವರೆಗೆ ಪರಿಸ್ಥಿತಿಯು ಹೆಚ್ಚು ಕಡಿಮೆ ಅದೇ ರೀತಿಯಲ್ಲಿ ಉಳಿದಿತ್ತು.

1.7: ಬ್ರಿಟಿಷ್ ಅವಧಿಯಲ್ಲಿ ಕರ್ನಾಟಕ ಪಂಚಾಯತ್ ರಾಜ್

ಬ್ರಿಟಷರ ವಸಹಾತು ಶಾಹಿ ಆಡಳಿತದಲ್ಲಿ ಕರ್ನಾಟಕದಲ್ಲಿ ಪಂಚಾಯತಗಳ ಬಗ್ಗೆ ಮಹತ್ತರವಾದ ಬದಲಾವಣೆಗಳಾದವು. 1874ರ ಹೊತ್ತಿಗೆ 'ಲೋಕಲ್ ಫಂಡ್ ಕಮಿಟಿ' ಯಂತಹ ಸಮಿತಿಗಳು ಪ್ರಾರಂಭವಾದವು. ಸ್ಥಳೀಯ ಸರಕಾರಗಳ ಬಗ್ಗೆ 1882ರಲ್ಲಿ ಲಾರ್ಡ ರಿಪ್ಪನ್ ತೆಗೆದುಕೊಂಡ ನಿರ್ಧಾರವು ಕರ್ನಾಟಕದ ಪಂಚಾಯತ್ ರಾಜ್ ಇತಿಹಾಸದಲ್ಲಿ ಪ್ರಮುಖ ಘಟ್ಟವಾಗಿ ಕಂಡು ಬಂತು. ಸ್ಥಳೀಯ ಮಟ್ಟದಲ್ಲಿ ಉದಾರವಾದಿ ಪ್ರಜಾಪ್ರಭುತ್ವವನ್ನು ಹೊರತರುವಲ್ಲಿ ಇದು ಪ್ರಯತ್ನಿಸಿತು. ಇದರ ಫಲವಾಗಿ 1902ರಲ್ಲಿ 'ಮೈಸೂರು ಲೋಕಲ್ ಬೋರ್ಡ ಆಕ್ಟ್' ರಚನೆಯಾಯಿತು.ಈ ಕಾಯ್ದೆಯು ಗ್ರಾಮ ಪಂಚಾಯತಗಳಿಗೆ ನಾಮ ನಿರ್ದೇಶಿತ ಅಧ್ಯಕ್ಷ, ತಾಲೂಕು ಬೋರ್ಡಗೆ ವಿಭಾಗಿಯಾಧಿಕಾರಿ ಮತ್ತು ಜಿಲ್ಲಾ ಬೋರ್ಡಗೆ ಡಿಸ್ಟ್ರಿಕ್ಟ್ ಕಲೆಕ್ಟರ್ ಅಧ್ಯಕ್ಷತೆಯ ಅವಕಾಶ ಒದಗಿಸಿತು. 1914ರ ಹೊತ್ತಿಗೆ ಎಮ್.ಕಾಂತರಾಜ್ ಅರಸ್ ಮತ್ತು ದಿವಾನ್ ಬಹದ್ದೂರ್. ಸಿ. ಶ್ರೀನಿವಾಸ್ ಅಯ್ಯಂಗಾರರ ನೇತೃತ್ವದಲ್ಲಿ

ಕ್ರಮವಾಗಿ 'ಲೋಕಲ್ ಸೆಲ್ಫ್ ಗರ್ವಮೆಂಟ್ ಕಮಿಟಿ' ಮತ್ತು 'ಲೋಕಲ್ ಫೈನಾನ್ಸ್ ಕಮಿಟಿ' ಅಸ್ತಿತ್ವಕ್ಕೆ ಬಂತು. ಈ ಸಮಿತಿಗಳು ಸ್ಥಳೀಯ ಘಟಕಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲು ಆಗಿನ ಮೈಸೂರು ಸರ್ಕಾರಕ್ಕೆ ಶಿಫಾರಸ್ಸು ಮಾಡಿದವು. ಚುನಾವಣೆ ಮೂಲಕ ಪ್ರತಿನಿಧಿಗಳನ್ನು ಆಯ್ಕೆಮಾಡಲು ಅನುವು ಮಾಡಿಕೊಟ್ಟಿತು.

ಈ ಮಧ್ಯೆ 1915ರ ವೇಳೆಗೆ ಮೈಸೂರು ಸಂಸ್ಥಾನದ ಹಿಂದಿನ ದಿವಾನರಾಗಿದ್ದ ಶ್ರೀ ಕೆ.ಪಿ.ಪುಟ್ಟಣ್ಣ ಸೆಟ್ಟಿಯವರ ನೇತೃತ್ವದಲ್ಲಿ ಪಂಚಾಯತ್ ಬಗ್ಗೆ ಸಮ್ಮೇಳನ ನಡೆಯಿತು. ಈ ಸಮ್ಮೇಳನ ಸ್ಥಳೀಯ ಸರ್ಕಾರವನ್ನು ಪರಿಣಾಮಕಾರಿಯಾಗಿರಿಸಬೇಕೆಂದು ಒತ್ತಿ ಹೇಳಿತು.ಇಲ್ಲಿಯೂ ಅಧಿಕಾರ, ಕಾಯ್ದೆಗಳ ಮೂಲಕ ಪಂಚಾಯತ್ ರಾಜ ಸಂಸ್ಥೆಗಳ ಸಬಲೀಕರಣಕ್ಕೆ ಒತ್ತು ನೀಡಿದ್ದನ್ನು ನಾವು ಕಾಣಬಹುದು. ಇವುಗಳ ಫಲಶ್ರುತಿ ಎಂಬಂತೆ ಅಂದಿನ ಮೈಸೂರು ಸರ್ಕಾರವು 'ಮೈಸೂರು ಲೋಕಲ್ ಬೋರ್ಡ್ ಮತ್ತು ವಿಲೇಜ್ ಪಂಚಾಯತ್ ರೆಗ್ಯುಲೇಷನ್ ಅಕ್ಟ್' ಅನ್ನು 1918ರಲ್ಲಿ ಜಾರಿಗೊಳಿಸಿತು ಇದು ಹಳ್ಳಿ ಪಂಚಾಯತನ್ನು ಹುಟ್ಟು ಹಾಕಿದ್ದಲ್ಲದೇ ಅದರ ಸದಸ್ಯರು ಚುನಾವಣೆಯ ಮೂಲಕ ಆಯ್ಕೆಯಾಗಬೇಕೆಂಬುದನ್ನು ಹೇಳಿತು. ಈ ಕಾಯ್ದೆ ಗ್ರಾಮೀಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಪೂರಕವಾಯಿತು ಎಂಬುದು ಮಾತ್ರ ಗಮನಾರ್ಹವಾದ ಬೆಳವಣಿಗೆ.

ಕರ್ನಾಟಕ ಪಂಚಾಯತ್ ರಾಜ್ ಇತಿಹಾಸದಲ್ಲಿ ೧೯೨೬ರ ಹೊತ್ತಿಗೆ ಮತ್ತೊಂದು ಮೈಲುಗಲ್ಲು ಪ್ರಾರಂಭವಾಯಿತು ಅದುವೇ 1926ರಲ್ಲಿ ಜಾರಿಗೆ ಬಂದ 'ಮೈಸೂರು ಡಿಸ್ಟ್ರಿಕ್ಟ್ ಮತ್ತು ಮೈಸೂರು ವಿಲೇಜ್ ಪಂಚಾಯತ್ ಅಕ್ಟ್'. ಅಂದಿನ ವಸಹಾತುಶಾಹಿ ಬ್ರಿಟಿಷರ ದೇಶದಲ್ಲಿ 1919 ಮತ್ತು 1948 ಇದರ ಅವಧಿಯಲ್ಲಿ ಸುಮಾರು 20 ಪ್ರಾಂತೀಯ ರಾಜ್ಯಗಳು ಪಂಚಾಯತ್ ರಾಜ್ ಸಂಸ್ಥೆಗಳ ರಚನೆಯ ಸಂಬಂಧ ಕಾಯ್ದೆಗಳನ್ನು ರಚಿಸಿಕೊಂಡಿದ್ದವು ಅದರಲ್ಲಿ ಮೈಸೂರು ರಾಜ್ಯವು ಒಂದಾಗಿತ್ತು. ಈ ಕಾಯ್ದೆಯ ಪ್ರಕಾರ 'ಜಿಲ್ಲಾ ಬೋರ್ಡ್',

'ತಾಲೂಕು ಬೋರ್ಡ' ಮತ್ತು 'ಗ್ರಾಮ ಪಂಚಾಯತ್' ಗಳ ರಚನೆಯಾಯಿತು. ಆದರೆ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಮಾತ್ರ ಮಹಿಳೆಯರಿಗೆ ಸ್ಪರ್ಧಿಸುವ ಅವಕಾಶವಿದ್ದಿರಲಿಲ್ಲ. 1952ರ ತನಕವು ಮಹಿಳೆಯರಿಗೆ ಚುನಾವಣೆಗೆ ಸ್ಪರ್ಧಿಸುವ ಅವಕಾಶ ದೊರಕಿರಲಿಲ್ಲ.

ಸ್ವಾತಂತ್ರ್ಯೋತ್ತರ ಅವಧಿ: ಭಾರತದ ರಾಷ್ಟ್ರೀಯ ಆಂದೋಲನದ ಭಾವನಾತ್ಮಕ ಚೌಕಟ್ಟಿನೊಳಗೆ ಗ್ರಾಮ ಪಂಚಾಯತಿಯು ಕೇಂದ್ರ ಬಿಂದುವಾಗಿತ್ತು. ನಮ್ಮ ಅನೇಕ ನಾಯಕರು, ಮುಖ್ಯವಾಗಿ ಮಹಾತ್ಮ ಗಾಂಧಿ, ಗ್ರಾಮ ಸ್ವರಾಜ್ಯದ ಕಲ್ಪನೆಗೆ ಕಟ್ಟುಬಿದ್ದಿದ್ದರು. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿಯೂ ಪ್ರಜಾಸತ್ತಾತ್ಮಕ ಪ್ರಕ್ರಿಯೆಯು ಕಾರ್ಯಪ್ರವೃತ್ತವಾಗಬೇಕು ಎನ್ನುವುದು ಉದ್ದೇಶವಾಗಿತ್ತು. ಜನರ ಪಾಲ್ಗೊಳ್ಳುವಿಕೆಯನ್ನು ತನ್ನ ಕೇಂದ್ರ ಕಾಳಜಿಯಾಗುಳ್ಳ ಸಮುದಾಯ ವಿಕಾಸ ಯೋಜನೆಗಳನ್ನು (ಸಿಡಿಪಿ) 1952 ರಲ್ಲಿ ಜಾರಿಗೆ ತರಲಾಯಿತು(ಅಸ್ಲಾಮ್.ಎಮ್, 2007). ಅದನ್ನು ಗ್ರಾಮ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ರೂಪಾಂತರಿಸುವ ಒಂದು ಸಾಧನವಾಗಿ ಕಲ್ಪಿಸಿಕೊಳ್ಳಲಾಯಿತು. ವಿವಿಧ ಸ್ಥಳೀಯ ಮತ್ತು ಕಾರ್ಯಚರಣೆಯ ಹಂತಗಳಲ್ಲಿ ಕಂಡು ಬರುವ ಬೆಳವಣಿಗೆ ಮತ್ತು ಅಭಿವೃದ್ಧಿಯ ಸಮಸ್ಯೆಗಳನ್ನು ಎದುರಿಸಲು ಸಿಡಿಪಿಗೆ ಬೆಂಬಲ ಕೊಡಲು ರಾಷ್ಟ್ರೀಯ ವಿಸ್ತರಣಾ ಸೇವೆಯನ್ನು ಸೇರಿಸಲಾಯಿತು. ಇದೂ ಕೂಡ ಸಾಂಕೇತಿಕವಾಗಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯನ್ನು ಪ್ರಚೋದಿಸಲಷ್ಟೆ ಸಮರ್ಥವಾಗಿರುವುದು ಕಂಡುಬರುತ್ತದೆ.

1.8: ಸ್ವತಂತ್ರ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ

ಸಮುದಾಯ ಯೋಜನೆಗಳು ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಯನ್ನು ಕುರಿತಂತೆ ಅಧ್ಯಯನ ತಂಡವನ್ನು ಬಲವಂತರಾಯ್ ಮೆಹ್ತಾ ನೇತೃತ್ವದಲ್ಲಿ 1957 ರ ಜನವರಿಯಲ್ಲಿ ನೇಮಿಸಲಾಯಿತು. ಈ ಅಧ್ಯಯನ ತಂಡ ಶಿಫಾರಸ್ಸು ಮಾಡಿದಂತೆ ಪಂಚಾಯತಿಗಳ ಮೂಲಕ ಜನರ ಪಾಲ್ಗೊಳ್ಳುವಿಕೆಯನ್ನು ಪ್ರಚೋದಿಸುವುದನ್ನು ಆಧರಿಸಿದ ಅಭಿವೃದ್ಧಿಯ ಕಾರ್ಯ ತಂತ್ರವು ಮಾತ್ರ ಅಭಿವೃದ್ಧಿಯ ಪ್ರಯತ್ನಗಳನ್ನು ಫಲಪ್ರಧಾನವನ್ನಾಗಿಸುತ್ತದೆ. ಸ್ವಾತಂತ್ರ್ಯೋತ್ತರ ಪಂಚಾಯತ್ ರಾಜ್ ವ್ಯವಸ್ಥೆಯು ಎರಡು ಮೂಲಭೂತ ಉದ್ದೇಶಗಳೊಡನೆ ಔಪಚಾರಿಕವಾಗಿ 1959 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಯಾವುವೆಂದರೆ ಅ) ಪ್ರಜಾಪ್ರಭುತ್ವದ ವಿಕೇಂದ್ರೀಕರಣ ಮತ್ತು ಆ) ಯೋಜಿತ ಕಾರ್ಯಕ್ರಮಗಳಲ್ಲಿ ಸ್ಥಳೀಯವಾಗಿ ಪಾಲ್ಗೊಳ್ಳುವಿಕೆ. ಬಲವಂತ ರಾಯ್ ಮೆಹ್ತಾ ಸಮಿತಿಯು ಜಿಲ್ಲಾ ಪರಿಷತ್, ಬ್ಲಾಕ್ ಸಮಿತಿ ಹಾಗೂ ಗ್ರಾಮ ಪಂಚಾಯತಿ ಎಂಬ ಮೂರು ಹಂತದ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿತು. ಅಭಿವೃದ್ಧಿ ಕಾರ್ಯಕ್ರಮಗಳಿಗೆ ತಕ್ಕಷ್ಟು ಅಧಿಕಾರಗಳು ಮತ್ತು ಸಂಪನ್ಮೂಲಗಳೊಡನೆ ಚುನಾಯಿತ ಪ್ರತಿನಿಧಿಗಳ ವಿಭಾಗ ಮಟ್ಟದ ಸಮಿತಿಗಳನ್ನು ಸ್ಥಾಪಿಸಬೇಕೆಂದು ಸಮಿತಿಯು ಸಲಹೆ ಮಾಡಿತ್ತು. ರಾಜಸ್ಥಾನ್ ಮತ್ತು ಆಂಧ್ರ ಪ್ರದೇಶ ರಾಜ್ಯಗಳುಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅವಳಡಿಸಿಕೊಂಡ ಪ್ರಥಮ ರಾಜ್ಯಗಳಾದವು. 1959 ಅಕ್ಟೋಬರ್ 2 ರಂದು ರಾಜಸ್ಥಾನದ ನಾಗೌರ್‌ನ್ನು ಪಂಡಿತ ಜವಾಹರಲಾಲ್ ನೆಹರೂ ರಾಷ್ಟ್ರ ಮಟ್ಟದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು(ಅಸ್ಲಾಮ್.ಎಮ್, 2007).

ದುರದೃಷ್ಟವಶಾತ್ ಈ ಉತ್ಸಾಹವನ್ನು ಅಗತ್ಯ ಪ್ರಜಾಸತ್ತಾತ್ಮಕ ಆವೇಗ'ವನ್ನು ಬೆಳೆಸಿಕೊಳ್ಳಲಾಗದಿದ್ದುದರಿಂದ ಮತ್ತು ಗ್ರಾಮೀಣ ಅಭಿವೃದ್ಧಿಯ ಅಗತ್ಯಗಳನ್ನು ಪೂರೈಸಲು ವಿಫಲವಾದ್ದರಿಂದ ಉಳಿಸಿಕೊಂಡು ಬರಲಾಗಲಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆ 1965 ರಿಂದ 1977 ರವರೆಗೆ ಸ್ಥಗಿತತೆ ಮತ್ತು ಇಳಿತವನ್ನು ಕಾಣಲಾರಂಭಿಸಿತು.

ಮಹಾರಾಷ್ಟ್ರ, ಗುಜರಾತ್ ಕರ್ನಾಟಕ ಮತ್ತು ಪಶ್ಚಿಮ ಬಂಗಾಳವನ್ನು ಹೊರತು ಪಡಿಸಿದರೆ ಬೇರೆಡೆ ಈ ಸಂಸ್ಥೆಗಳು ರದ್ದಾದವು ಅಥವಾ ಕಾರ್ಯ ನಿರ್ವಹಿಸಲು ಅತ್ಯಂತ ಕನಿಷ್ಟ ಸ್ವಾತಂತ್ರ್ಯವನ್ನು ಪಡೆದವು.

ಅಶೋಕ್ ಮೆಹ್ತಾ ಸಮಿತಿ –1977: 1977ರಲ್ಲಿ ರಾಷ್ಟ್ರ ಮಟ್ಟದಲ್ಲಿ ಸರ್ಕಾರದ ಬದಲಾವಣೆಯಾದ ಮೇಲೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಹೊಸ ದೃಷ್ಟಿಯಿಂದ ಪರಿಶೀಲಿಸಲು ಅಶೋಕ ಮೆಹ್ತಾ ಸಮಿತಿಯನ್ನು ರಚಿಸಲಾಯಿತು. ಸಮಿತಿಯು ತನ್ನ ವರದಿಯಲ್ಲಿ ಪಂಚಾಯತ್ ರಾಜ್‌ನ ಇಳಿತಕ್ಕೆ ಅನೇಕ ಅಂಶಗಳನ್ನು ಪಟ್ಟಿ ಮಾಡಿದೆ ಅವು ಈ ಕೆಳಗಿನಂತಿದೆ, ಅ) ಪಂಚಾಯತ್ ರಾಜ್ ಒಡನೆ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆ,

ಆ) ಅಧಿಕಾರಿ ಶಾಹಿಯ ಪಾತ್ರ,

ಇ) ಕಲ್ಪನೆಯ ಸ್ಪಷ್ಟತೆಯಲ್ಲಿ ಕೊರತೆ ಮತ್ತು

ಈ) ರಾಜಕೀಯ ಸಂಕಲ್ಪದ ಕೊರತೆ.

ಸಮಿತಿಯ ಶಿಫಾರಸ್ಸುಗಳು: ಸಮಿತಿಯು ನಡೆಸಿದ ಪರಿಶೀಲನೆಯ ನಂತರ ಪಂಚಾಯತ್ ಸುಧಾರಣೆಗೆ ಕೆಲವು ಶಿಫಾರಸ್ಸುಗಳನ್ನು ಮಾಡಲಾಯಿತು. ಅವು ಯಾವುವೆಂದರೆ, ಎರಡು ಸ್ತರಗಳು ಪಂಚಾಯತ್ ರಾಜ್ ವ್ಯವಸ್ಥೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ 20 ರಿಂದ 30 ಸಾವಿರ ಜನಸಂಖ್ಯೆಗೆ ಒಂದು ಮಂಡಲ ಪಂಚಾಯತ್, ಎರಡು ಹಂತಗಳ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳಿಗೆ ಮಾನ್ಯತೆ ಹಾಗೂ ಹೆಚ್ಚಿನ ಅಧಿಕಾರ ಹೆಚ್ಚು ಸಂಪನ್ಮೂಲ.

ಜಿ. ವಿ. ಕೆ. ರಾವ್ ಸಮಿತಿ : ಯೋಜನಾ ಆಯೋಗವು 1985 ರಲ್ಲಿ ಜಿ. ವಿ. ಕೆ.ರಾವ್ ಸಮಿತಿಯನ್ನು ನೇಮಿಸಿತು. ಗ್ರಾಮೀಣ ಅಭಿವೃದ್ಧಿಗೆ ಆಗ ಅಸ್ತಿತ್ವದಲ್ಲಿದ್ದ ಆಡಳಿತಾತ್ಮಕ ಏರ್ಪಾಡುಗಳು ಮತ್ತು ಬಡತನ ಪರಿಹಾರ ಕಾರ್ಯಕ್ರಮಗಳನ್ನು ಪರಿಶೀಲಿಸುವುದು ಹಾಗೂ ಸಂಯೋಜಿತ ಕ್ರಮದಲ್ಲಿ ಅವುಗಳನ್ನು ಯೋಜಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದನ್ನು ಖಾತ್ರಿ ಪಡಿಸಿಕೊಳ್ಳುವುದು ಇದರ ಉದ್ದೇಶವಾಗಿತ್ತು.

ಡಾ. ಎಲ್.ಎಮ್.ಸಿಂಘ್ವಿ ಸಮಿತಿ: ಜೂನ್ 1986ರಲ್ಲಿ ಅಂದಿನ ಪ್ರಧಾನಮಂತ್ರಿ ರಾಜೀವ ಗಾಂಧಿ ಅವರು ಪಂಚಾಯತ್ ರಾಜ್ ಸಂಸ್ಥೆಗಳ ಪುನರುಜ್ಜೀವನಕ್ಕೆ ಸಂಬಂಧಿಸಿದಂತೆ ಪರಿಕಲ್ಪನೆಯ ಅಧ್ಯಯನಕ್ಕೆ ಡಾ. ಎಲ್.ಎಮ್.ಸಿಂಘ್ವಿ ನೇತೃತ್ವದಲ್ಲಿ ಸಮಿತಿಯನ್ನು ನೇಮಿಸಿದರು.

ಸಮಿತಿಯ ಶಿಫಾರಸ್ಸುಗಳು: ಡಾ. ಎಲ್.ಎಮ್. ಸಿಂಘ್ವಿ ನೇತೃತ್ವದ ಸಮಿತಿಯ ಶಿಫಾರಸ್ಸುಗಳು ಈ ಮುಂದಿನಂತಿವೆ, ಸ್ವಯಂ ಆಡಳಿತ ಸಂಸ್ಥೆಗಳಿಗೆ ಸಂವಿಧಾನಬದ್ಧ ಮಾನ್ಯತೆ ಸಿಗಬೇಕು, ಎಲ್ಲಾ ಸ್ತರಗಳ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಕಾಲದಲ್ಲಿ ಚುನಾವಣೆ ನಡೆಸುವುದನ್ನು ಸಂವಿಧಾನ ತಿದ್ದುಪಡಿ ಮೂಲಕ ಕಡ್ಡಾಯಗೊಳಿಸಬೇಕು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಯನ್ನು ಚುನಾವಣಾ ಆಯೋಗದ ಮೂಲಕ ನಡೆಸಬೇಕು.

ಇತರ ಸಮಿತಿಗಳು: ಸರ್ಕಾರಿಯಾ ಆಯೋಗವು ಮೂಲತಃ ಕೇಂದ್ರ ರಾಜ್ಯವನ್ನು ಕುರಿತದ್ದಾದರೂ ಸ್ಥಳೀಯ ಸಂಸ್ಥೆಗಳನ್ನು ಆರ್ಥಿಕವಾಗಿಯೂ ಕಾರ್ಯಭಾರದ ದೃಷ್ಟಿಯಿಂದಲೂ ಬಲಪಡಿಸಬೇಕೆಂದು ಶಿಫಾರಸ್ಸು ಮಾಡಿದೆ.1988 ರ ಕೊನೆಯ ವೇಳೆಗೆ ಪಿ.ಕೆ.ತುಂಗನ್ ಅಧ್ಯಕ್ಷತೆಯನ್ನು ಲೋಕ ಸಭೆಯ ಸಲಹಾ ಸಮಿತಿಯ ಒಂದು ಉಪ ಸಮಿತಿಯು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನ್ಮಕ ಮನ್ನಣೆ ದೊರೆಯಬೇಕೆಂದು ಶಿಫಾರಸ್ಸು ಮಾಡಿತು. ವಿ ಎನ್. ಗಾಡ್ಗೀಳ್ ನೇತೃತ್ವದ ಸಮಿತಿಯ 1989 ರಲ್ಲಿ ಮೂರು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆ, ಐದು ವರ್ಷಗಳ ನಿಗಧಿತ ಅವಧಿ ಪರಿಶಿಷ್ಟ ಜಾತಿ/ಪಂಗಡ ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ಶಿಫಾರಸ್ಸು ಮಾಡಿತ್ತು.

1.9: 1947ರ ನಂತರದ ಕರ್ನಾಟಕ ಪಂಚಾಯತ್ ರಾಜ್ ಅವಧಿ

ಗಾಂಧಿಯ ಗ್ರಾಮ ಸ್ವರಾಜ್ಯ ಕಲ್ಪನೆಯ ಹಿನ್ನಲೆಯಲ್ಲಿ ಗ್ರಾಮಗಳು ತಮ್ಮಷ್ಟಕ್ಕೆ ತಾವು ಸ್ವತಂತ್ರ ಘಟಕಗಳು ಮತ್ತು ಗಣತಂತ್ರಗಳು ಎನ್ನುವ ಪರಿಕಲ್ಪನೆಯ ಪ್ರಭಾವ, ಪರಿಣಾಮಗಳೆರಡೂ ಕರ್ನಾಟಕದ ಮೇಲೆ ಆಗಿತ್ತು.ಅಂದಿನ ಮೈಸೂರು ರಾಜ್ಯ (1973ರ ನಂತರದ ಕರ್ನಾಟಕ) 1949ರ ಹೊತ್ತಿಗೆ ವಿ.ವೆಂಕಟಪ್ಪರವರ ನೇತೃತ್ವದಲ್ಲಿ ಒಂದು

ಸಮಿತಿಯನ್ನು ರಚಿಸಿ ಸ್ಥಳೀಯ ಸರ್ಕಾರದ ಬಗ್ಗೆ ತರಬಹುದಾದ ಬದಲಾವಣೆಗಳನ್ನು ಕೇಳಿತು. 1950ರಲ್ಲಿ ಈ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿತು. ಎರಡು ಸ್ತರದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬೆಂಬಲಿಸಿತು. ಅವುಗಳೆಂದರೆ, ಜಿಲ್ಲಾ ಮಟ್ಟದಲ್ಲಿ 'ಜಿಲ್ಲಾ ಸಮಿತಿ' ಮತ್ತು ತಳ ಮಟ್ಟದಲ್ಲಿ 'ಗ್ರಾಮ ಪಂಚಾಯತಿ'. ಅಲ್ಲದೇ ಈ ಸಮಿತಿಯ ಶಿಫಾರಸ್ಸಿನ ಪರಿಣಾಮವಾಗಿ 1952ರಲ್ಲಿ 'ಮೈಸೂರು ವಿಲೇಜ್ ಪಂಚಾಯತ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ಸ್ ಆಕ್ಟ್' ಜಾರಿಗೊಳಿಸಲಾಯಿತು. ಆದರೆ ಇದು ನಿರೀಕ್ಷಿತ ಫಲವನ್ನು ಮಾತ್ರ ನೀಡಲಿಲ್ಲ. 1953ರಲ್ಲಿ ಡಿ. ಹೆಚ್.ಚಂದ್ರಶೇಖರಯ್ಯ ಸಮಿತಿ ರಚನೆಯಾಯಿತು. 1954ರಲ್ಲಿ ಈ ಸಮಿತಿಯು ಸರಕಾರಕ್ಕೆ ತನ್ನ ವರದಿಯನ್ನು ನೀಡಿತು.ಇದು ತ್ರೀ ಸ್ತರದ ವ್ಯವಸ್ಥೆಗೆ ಒತ್ತು ನೀಡಿತು. ಹಿಂದಿನ ವ್ಯವಸ್ಥೆಗೆ ಪೂರಕವಾಗಿ ಮಧ್ಯಂತರ ವ್ಯವಸ್ಥೆಯಾಗಿ 'ತಾಲೂಕು ಬೋರ್ಡ' ರಚನೆಯಾಯಿತು. ಉಳಿದ ಯಾವುದೇ ತೆರನಾದ ಬದಲಾವಣೆಗಳು ಸ್ಥಳೀಯ ಸಂಸ್ಥೆಗಳ ಸಾಂಸ್ಥಿಕ ರಚನೆಯಲ್ಲಿ ಕಂಡುಬಂದಿಲ್ಲ.

1957ರಲಿ ಕೇಂದ್ರದಲ್ಲಿ ರಚನೆಯಾಗಿದ್ದ ಬಲವಂತ ರಾಯ ಮೆಹ್ತಾ ತಂಡ ಮತ್ತು ಆದರ ಶಿಫಾರಸ್ಸಿನ ಪ್ರಭಾವ ಕರ್ನಾಟಕದ ಮೇಲೂ ಬೀರಿತು. ಇದರ ಆಧಾರದಲ್ಲಿ 'ಮೈಸೂರು ವಿಲೇಜ್ ಪಂಚಾಯತ್ ಮತ್ತು ಲೋಕಲ್ ಬೋರ್ಡ್ಸ್ ಆಕ್ಟ್, 1959' ರಚನೆಯಾಯಿತು. ಇದರ ಪ್ರಕಾರ ಪಂಚಾಯತ್ ರಾಜ್ ವ್ಯವಸ್ಥೆ ತ್ರಿಸ್ತರದ ವ್ಯವಸ್ಥೆಯಾಗಿ ರೂಪುಗೊಂಡಿತು. ಕೆಲವು ಗ್ರಾಮಗಳ ಗುಂಪುಗಳನ್ನು ಸೇರಿಸಿ ಗ್ರಾಮ ಪಂಚಾಯತಿ ರಚನೆ, ಚುನಾವಣೆಗಳ ಮೂಲಕ ಜನಪ್ರತಿನಿಧಿಗಳ ನೇರ ಆಯ್ಕೆ; ತಾಲೂಕು ಮಟ್ಟದಲ್ಲಿ ಜನರಿಂದ ಆರಿಸಲ್ಪಟ್ಟ ತಾಲೂಕು ಡೆವಲಪ್‌ಮೆಂಟ್ ಬೋರ್ಡ; ಎರಡೂ ಸ್ತರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ, ಎರಡು ಸ್ಥಾನಗಳು ಮಹಿಳೆಯರಿಗೆ ಮೀಸಲು. ಇದೇ ಮೊದಲಾದ ಮಹತ್ತರ ಸಾಂಸ್ಥಿಕ ರಚನೆಗಳು ಜಾರಿಗೊಂಡವು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಡೆವಲಪ್‌ಮೆಂಟ್ ಬೋರ್ಡ್ಸ್‌ನ ಅಧ್ಯಕ್ಷರು, ಪರಿಶಿಷ್ಟ ಜಾತಿ ಮತ್ತು ಮಹಿಳಾ ಸದಸ್ಯರು

ಒಳಗೊಳ್ಳಬೇಕಾದ ಪ್ರಕ್ರಿಯೆ ಉತ್ತಮವಾಗಿ ರೂಪುಗೊಂಡಿತು. ಇದು ಪಂಚಾಯತಿ ರಾಜ್ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಲು ಸಹಕಾರಿಯಾಯಿತು.

1959ರ ಕಾಯಿದೆಯು ನಿರೀಕ್ಷಿತ ಪರಿಣಾಮವನ್ನು ಬೀರದೆ ಲೋಪವಾದ ನಂತರ 1963ರಲ್ಲಿ ಕೊಂಡಜ್ಜ ಬಸಪ್ಪರವರ ನೇತೃತ್ವದಲ್ಲಿ ಹೊಸ ಸಮಿತಿ ರಚನೆಯಾಯಿತು. ಜಿಲ್ಲಾ ಸಮಿತಿಗೆ ಕಾರ್ಯಕಾರಿ ಸಮಿತಿ, ತಾಲ್ಲೂಕು ಬೋರ್ಡ್‌ಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕೆಂದು ಈ ಸಮಿತಿಯ ಪ್ರಮುಖ ಶಿಫಾರಸ್ಸುಗಳು. ಜಿಲ್ಲಾ ಮಟ್ಟದಲ್ಲಿ ಸಂಸದರು ಮತ್ತು ಶಾಸಕರುಗಳ ಭಾಗವಹಿಸುವಿಕೆಯನ್ನು ಈ ಸಮಿತಿಯು ರದ್ದುಪಡಿಸಿತು. ಈ ಶಿಫಾರಸ್ಸಿನಂತೆ 'ಮೈಸೂರು ಪಂಚಾಯತಿ ರಾಜ್ ಬಿಲ್ 1964'ನ್ನು ಜಾರಿಗೊಳಿಸಲಾಯಿತು. ಆದರೆ ರಾಜಕೀಯ ಕಾರಣಗಳಿಂದ ಆ ಮುಸೂದೆಯು ಬಿದ್ದು ಹೋಯಿತು.

1983ರಲ್ಲಿ ರಚನೆಯಾದ 'ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತಿ ಸಮಿತಿ, ಮಂಡಲ ಪಂಚಾಯತಿ ಮತ್ತು ನ್ಯಾಯ ಪಂಚಾಯತಿ ಆಕ್ಟ್' ಕರ್ನಾಟಕ ಪಂಚಾಯತಿ ರಾಜ್ ಇತಿಹಾಸದಲ್ಲಿ ಒಂದು ಮಹತ್ತರ ದಿಕ್ಸೂಚಿ. ರಾಜ್ಯದಲ್ಲಿ ಪ್ರಥಮ ಬಾರಿಗೆ ಕಾಂಗ್ರೇಸ್ ಅಧಿಕಾರ ಕಳೆದುಕೊಂಡು ಜನತಾಪಕ್ಷ ಅಧಿಕಾರಕ್ಕೆ ಬಂದು. ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಮತ್ತು ಗ್ರಾಮೀಣಭಿವೃದ್ಧಿ ಸಚಿವ ಅಬ್ದುಲ್ ನಜೀರ್ ಸಾಬ್ ಜನಗಳಿಗೆ ಅಧಿಕಾರ'ವನ್ನು ಹಸ್ತಾಂತರಿಸಲು ಕಟಿಬದ್ದರಾಗಿ, ಆ ನಿಟ್ಟಿನಲ್ಲಿ ಚಿಂತನೆ ನಡೆಸಿದ್ದರು. ಆ ಹೊತ್ತಿಗೆ ಸರಿಯಾಗಿ ರಾಜ್ಯದಲ್ಲಿಯೂ ಅಶೋಕ್ ಮೆಹ್ತಾ ಸಮಿತಿಯ ಶಿಫಾರಸ್ಸಿನ ಪ್ರಭಾವ ಕಂಡುಬಂತು. 1983ರಲ್ಲಿ ಜನತಾ ಸರಕಾರ ಈ ಮಸೂದೆಯನ್ನು ರಾಜ್ಯ ಸದನದಲ್ಲಿ ಮಂಡಿಸಿ ನಿಜವಾದ ಶಕ್ತಿಯನ್ನು ಪಂಚಾಯತ್ ರಾಜ್ ವ್ಯವಸ್ಥೆಗಳಿಗೆ ನೀಡಿತು. ಈ ಹೊಸ ಕಾಯಿದೆಯ ಪ್ರಕಾರ, ಪ್ರತೀ ಕಂದಾಯ ಜಿಲ್ಲೆಯಲ್ಲಿ 'ಜಿಲ್ಲಾ ಪರಿಷತ್', ತಾಲೂಕು ಮಟ್ಟದಲ್ಲಿ 'ತಾಲ್ಲೂಕು

ಪಂಚಾಯತಿ ಸಮಿತಿ', ಗ್ರಾಮ ಅಥವಾ ಗ್ರಾಮಗಳ ಗುಂಪು ಮಟ್ಟದಲ್ಲಿ 'ಮಂಡಲ ಪಂಚಾಯತಿ' ಸ್ಥಾಪನೆಗೊಂಡಿತು. ಮಂಡಲ ಮತ್ತು ಜಿಲ್ಲಾ ಪರಿಷತ್‌ಗಳು ಗ್ರಾಮೀಣ ಅಭಿವೃದ್ಧಿಯ ಸ್ಪಷ್ಟ ಉದ್ದೇಶವನ್ನು ಅನುಷ್ಠಾನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು. 1983ರಲ್ಲಿ ಈ ಮಸೂದೆಯು ಕಾಯಿದೆಯಾಗಿ 1987ರಲ್ಲಿ ಜಾರಿಯಾಯಿತು. ದೇಶದಲ್ಲಿಯೆ ಪ್ರಥಮವಾಗಿ ಮಹಿಳೆಯರಿಗೆ 25% ಮೀಸಲಾತಿಯನ್ನು, ಪರಿಶಿಷ್ಟ ಜಾತಿ ಮತ್ತ ಪಂಗಡದ ಮಹಿಳೆಯರು ಮತ್ತು ಇತರ ವರ್ಗದ ಮಹಿಳೆಯರಿಗೆ ಶೇ.18 ಮೀಸಲಾತಿಯನ್ನು ಸ್ಥಳೀಯ ಸರ್ಕಾರದಲ್ಲಿ ನೀಡಿದ ಕಾಯಿದೆಯಾಗಿ ಇದು ರೂಪುಗೊಂಡಿತು.

1.10: ಸಂವಿಧಾನದ 73 ನೇ ತಿದ್ದುಪಡಿ–1993

ಕಳೆದ ನಾಲ್ಕು ದಶಕಗಳಿಂದ ಬೇರೆ ಬೇರೆ ಘಟ್ಟಗಳ ಬೇರೆ ಬೇರೆ ಸ್ವರೂಪದಲ್ಲಿ ಅಸ್ತಿತ್ವದಲ್ಲಿದ್ದು ಸ್ಥಳೀಯ ಸಂಸ್ಥೆಗಳಿಗೆ ಒಂದು ರೂಪ ದೊರೆತಿದ್ದು 1993ರಲ್ಲಿ ಸಂವಿಧಾನಕ್ಕೆ 73ನೇ ತಿದ್ದುಪಡಿಯನ್ನು ತರುವ ಮೂಲಕ ಅಂದರೆ, ಸಂವಿಧಾನದ 9ನೇ ಅಧ್ಯಾಯದಲ್ಲಿ ಈ ತಿದ್ದುಪಡಿಯನ್ನು ಅಳವಡಿಸುವುದರೊಂದಿಗೆ ಈ ಸಂಸ್ಥೆಗಳ ಸದಸ್ಯರ ಪ್ರಾತಿನಿಧ್ಯವನ್ನು ಹೆಚ್ಚಿಸುವುದು ದೇಶದಲ್ಲಿ ಏಕರೂಪದ ವ್ಯವಸ್ಥೆ ಜಾರಿಗೆ ಬಂದಿದೆ. ಈ ತಿದ್ದುಪಡಿಯು ಪಂಚಾಯತ್ ಸಂಸ್ಥೆಗಳ ರಚನೆ, ಚುನಾವಣೆ ನಡೆಸುವ ಬಗ್ಗೆ ಅವಧಿ, ಅಧಿಕಾರ ಸಂಪನ್ಮೂಲಗಳು ಹಾಗೂ ಸ್ಥಳೀಯ ಸರ್ಕಾರಗಳಾಗಿ ಅವುಗಳಿಗೆ ಇರುವ ಸ್ವಾಯತ್ತತೆ, ಇತ್ಯಾದಿ ವಿಷಯಗಳನ್ನು ಒಳಗೊಂಡಿದೆ. 73ನೇ ತಿದ್ದುಪಡಿ ಕಾಯಿದೆಯು ಎಪ್ರಿಲ್ 24, 1993 ರಿಂದ ಜಾರಿಗೆ ಬಂದಿತ್ತು.

1.11: ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ– 1993

ಕೇಂದ್ರದಲ್ಲಿ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ರಚನೆಗೆ ಸಂಬಂಧಿಸಿದಂತೆ ಜಾರಿಯಾದ ಸಂವಿಧಾನದ 243ನೇ ಪರಿಚ್ಛೇದಕ್ಕೆ ಮಾಡಲ್ಪಟ್ಟ 73ನೇ ಮತ್ತು 74ನೇ ತಿದ್ದುಪಡಿಯು ಕರ್ನಾಟಕದ ಮೇಲೆ ತತ್‌ಕ್ಷಣದ ಪ್ರಭಾವವನ್ನು ಬೀರಿ, ಆ ನಿಟ್ಟಿನಲ್ಲಿ ಅಂದಿನ ಸರಕಾರ ಕ್ರಿಯಾಶೀಲವಾಯಿತು. ಈ ಸಂವಿಧಾನ ತಿದ್ದುಪಡಿಯ ಆಧಾರದಲ್ಲಿ ರಾಜ್ಯದಲ್ಲಿ ಕರ್ನಾಟಕ ಪಂಚಾಯಿತಿ ರಾಜ್ ಕಾಯಿದೆ – 1993 ಜಾರಿಯಾಯಿತು.ಆಡಳಿತಾತ್ಮಕ, ರಾಜಕೀಯ, ಹಣಕಾಸಿನ ವಿಕೇಂದ್ರಿಕರಣವನ್ನು ಪಂಚಾಯಿತಿ ರಾಜ್‌ಗಳಲ್ಲಿ ತಂದ ಮೊತ್ತ ಮೊದಲ 'ಸಾಂವಿಧಾನಿಕಸ್ಥಾನಮಾನ'ದ ಈ ಕಾಯಿದೆ ಗ್ರಾಮೀಣ ರಾಜಕೀಯ ಸಂರಚನೆಗಳನ್ನು ರಾಜ್ಯದಲ್ಲಿ ಹುಟ್ಟು ಹಾಕಿತು.ಎಪ್ರಿಲ್ 1, 1993 ರಂದು ಎರಡೂ ಸದನಗಳಲ್ಲಿ ಬಹುಮತ ಪಡೆದ ಈ ಕಾಯ್ದೆ ಮೇ 10, 1993 ರಲ್ಲಿ ಅಧಿಕೃತವಾಗಿ ರಾಜ್ಯದಲ್ಲಿ ಜಾರಿಯಾಯಿತು.

ಸಂವಿಧಾನಕ್ಕೆ ಮಾಡಲ್ಪಟ್ಟ ಈ ತಿದ್ದುಪಡಿಯ ಆಧಾರದಲ್ಲಿ ಜಿಲ್ಲಾ ಮಟ್ಟದಲ್ಲಿ 'ಜಿಲ್ಲಾಪಂಚಾಯಿತಿ' ಮಧ್ಯಂತರ ಮಟ್ಟದಲ್ಲಿ 'ತಾಲ್ಲೂಕು ಪಂಚಾಯಿತಿ' ಮತ್ತು ಗ್ರಾಮಮಟ್ಟದಲ್ಲಿ 'ಗ್ರಾಮಪಂಚಾಯಿತಿ'ಯ ಸ್ಥಾಪನೆಯಾಯಿತು. ಮೂರನೇ ಒಂದರಷ್ಟು ಸ್ಥಾನಗಳು ಮಹಿಳೆಯರಿಗೆ ಅಂದರೆ ಶೇ 33.3 ಮೀಸಲಾತಿಯನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಹಿಳೆಯರು ಹಾಗೂ ಇತರೇ ಸಾಮಾನ್ಯ ವರ್ಗದ ಮಹಿಳೆಯರಿಗೆ ನೀಡಲಾಯಿತು. ಗ್ರಾಮ ಮತ್ತು ವಾರ್ಡ್ ಸಭೆಗಳು ಇಲ್ಲಿ ಮಹತ್ವ ಪಡೆದುಕೊಂಡವು ಮತ್ತು ಎಲ್ಲಾ ಸ್ತರಗಳಲ್ಲಿಯೂ ಸಮಿತಿ – ಉಪ ಸಮಿತಿಗಳು ಕಾರ್ಯಾಚರಿಸಿದವು. ಗ್ರಾಮ ಅಥವಾ ಹಳ್ಳಿಗಳಲ್ಲಿ ಸ್ವತಂತ್ರ ಸ್ವಾಯತ್ತತೆಯ ಆಧಾರದಲ್ಲಿ ರೂಪಿಸಬೇಕಾಗಿದ್ದ ಚರ್ಚೆಯು ಕನಿಷ್ಟ ಪಂಚಾಯಿತಿ ರಾಜ್ಯ ಸಂಸ್ಥೆಗಳಿಗೆ ಸಾಂವಿಧಾನಿಕ ಸ್ಥಾನಮಾನ ನೀಡುವ ಮೂಲಕ ದೇಶದ ಸಂವಿಧಾನದ ಭಾಗವಾಗಿ ರೂಪಿತವಾಗುವಂತೆ ಮಾಡಿದ ಪ್ರಕ್ರಿಯೆ ಮಹತ್ವಪೂರ್ಣವಾಗಿದೆ.

1.12: ಗ್ರಾಮ ಸಭೆ

ಸ್ಥಳೀಯಾಡಳಿತ ವ್ಯವಸ್ಥೆಯಲ್ಲಿ ಅತ್ಯಂತ ತಳಸ್ತರದಲ್ಲಿರುವ ಗ್ರಾಮಸ್ಥರ ಸಭೆಯೇ ಗ್ರಾಮ ಸಭೆ.ಗ್ರಾಮ ಮಟ್ಟದ ಅಭಿವೃದ್ಧಿಗೆ ಸಲಹೆ ಮತ್ತು ಸೂಚನೆಗಳನ್ನು ಈ ಸಭೆ ನೀಡಬಹುದಾಗಿದೆ. ಇಂತಹ ಸಭೆಗೆ ಯಾವ ರೀತಿಯ ಅಧಿಕಾರ ಹಾಗು ಜವಾಬ್ದಾರಿಯನ್ನು ಕೊಡಬೇಕೆಂಬುದನ್ನು ತೀರ್ಮಾನಿಸುವ ಅಧಿಕಾರವನ್ನು ರಾಜ್ಯಗಳ ಶಾಸನ ಸಭೆಗಳಿಗೆ ನೀಡಲಾಗಿದೆ. ಗ್ರಾಮ ಸಭೆಗಳು ಮುಖ್ಯವಾಗಿ ಈ ಮುಂದಿನ ಅಂಶಗಳನ್ನು ಚರ್ಚಿಸಬೇಕಾದ ಆವಶ್ಯಕತೆಯಿದೆ –

ಅ) ಲೆಕ್ಕ ಪತ್ರಗಳ ವಾರ್ಷಿಕ ತಃಖ್ತೆ ಮತ್ತು ವರದಿಯ ಪರಿಶೋಧನೆ.

ಆ) ಹಿಂದಿನ ವರ್ಷದ ಆಡಳಿತಾತ್ಮಕ ವರದಿ.

ಇ) ಹೊಸ ತೆರಿಗೆಗಳ ಪ್ರಸ್ತಾವ ಮತ್ತು ಇರುವ ತೆರಿಗೆಗಳ ಹೆಚ್ಚಳ ಮತ್ತು

ಈ) ಯೋಜನೆಗಳು, ಫಲಾನುಭವಿಗಳು ಮತ್ತು ಸ್ಥಳಗಳ ಆಯ್ಕೆ.

ನೇರ ಪ್ರಜಾಪ್ರಭುತ್ವದ ಸಂಕೇತವಾಗಿ ಮತ್ತು ಸಂವಿಧಾನದ ಘಟಕವಾದ 'ಗ್ರಾಮಸಭೆ' ಇಂದು ಜನಸಹಭಾಗಿತ್ವದ ಕೊರತೆಯಿಂದ ಬಳಲುತ್ತಿದೆ. ಗಾಂಧಿಯು 'ಗ್ರಾಮಸ್ವರಾಜ್ಯ' ಕಲ್ಪನೆಯಿಂದ ಪ್ರೇರಿತವಾಗಿ ಹುಟ್ಟಿಕೊಂಡ ಈ ಘಟಕಕ್ಕೆ ನಮ್ಮ ಸಂವಿಧಾನ ಮಾನ್ಯತೆಯನ್ನೂ ನೀಡಿದೆ. ಆದರೆ ಆದರ ನೈಜ ಆಶಯ ಈಡೇರುತ್ತಿಲ್ಲ. ರಾಜಕೀಯ ನೇತಾರರು ಮತ್ತು ಜನ ಪ್ರತಿನಿಧಿಗಳ ಆಸೆ – ಆಕಾಂಕ್ಷೆಗಳ ನೆಪಕ್ಕೆ ಗ್ರಾಮ ಸಭೆಗಳು ಇಂದು ಬಲಿಯಾಗುತ್ತಿವೆ. ಗ್ರಾಮಸಭೆಗಿಂತಲೂ ತಳ ಹಂತದ 'ವಾರ್ಡ್‌ಸಭೆಗಳು' ಅಸ್ತಿತ್ವದಲ್ಲಿದೆ.ಗ್ರಾಮಸಭೆ ಎಂಬುದು ತಳಮಟ್ಟದ ನೈಜ ಪ್ರಜಾಪ್ರಭುತ್ವವೇದಿಕೆ ಎಂದು ಸ್ಥಾಪಿಸಲಾಗಿದೆ. ಆದರೆ ಆದರ ಹಕ್ಕು ಅಥವಾ ಅಧಿಕಾರಗಳನ್ನು

ಇಂದು ಕಸಿಯ ತೊಡಗಿದ್ದಾರೆ. ಗ್ರಾಮಾಭಿವೃದ್ಧಿ ಯೋಜನೆಗಳಲ್ಲಿ ಬರುವ ಫಲಾನುಭವಿಗಳ ಆಯ್ಕೆ ರಾಜಕೀಯ ಕಾರಣಗಳಿಂದ ಆಗುತ್ತಿಲ್ಲ. ಪಂಚಾಯಿತಿ ವ್ಯಾಪ್ತಿಯಲ್ಲಿನ ಕನಿಷ್ಟ ಆರು ತಿಂಗಳಿಗೊಮ್ಮೆ ನಡೆಯಬೇಕಾಗಿರುವ ಗ್ರಾಮ ಸಭೆ ಮತ್ತು ಅದಕ್ಕೆ ಪೂರ್ವದಲ್ಲಿ ನಡೆಯುವ ವಾರ್ಡ್ ಸಭೆಗಳು ಸಮರ್ಪಕವಾಗಿ ನಡೆದು ಜನರ ಹಾಗು ಪಂಚಾಯತ್ ರಾಜ್ ವ್ಯವಸ್ಥೆಯ ಆಶೋತ್ತರಗಳನ್ನು ಪೂರೈಸುವುದು ಅವಶ್ಯಕವಾಗಿದೆ.

ಪಂಚಾಯತ್ ರಚನೆ

- ಸಂವಿಧಾನದ 73ನೇ ತಿದ್ದುಪಡಿಯು ಎಲ್ಲಾ ರಾಜ್ಯಗಳ ಗ್ರಾಮೀಣ ಭಾಗದಲ್ಲಿ ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ.
- ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತ್, ಗ್ರಾಮ ಹಾಗು ಜಿಲ್ಲೆಗಳ ಮಧ್ಯದ ಹಂತದಲ್ಲಿ ಮಧ್ಯಂತರ ಪಂಚಾಯತ್/ತಾಲೂಕು ಪಂಚಾಯತ್ ಹಾಗು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್.
- ಯಾವ ರಾಜ್ಯಗಳಲ್ಲಿ ಜನಸಂಖ್ಯೆ 20 ಲಕ್ಷಗಳಿಗಿಂತ ಕಡಿಮೆಯಿದೆಯೋ ಅಲ್ಲಿ ಎರಡು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯಿರಬೇಕು. ಅಂತಹ ರಾಜ್ಯಗಳಲ್ಲಿ ಮಧ್ಯಂತರ ಪಂಚಾಯತನ್ನು ರಚಿಸುವ ಅಗತ್ಯವಿಲ್ಲ. (ಉದಾ: ಸಿಕ್ಕಿಂ, ನಾಗಾಲ್ಯಾಂಡ್)

ಪಂಚಾಯತ್ ಸ್ವರೂಪ

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಆಯ್ಕೆಯಾಗುವ ಪ್ರತಿನಿಧಿಗಳು ನಿಗದಿಪಡಿಸಿದ ಚುನಾವಣಾ ಕ್ಷೇತ್ರದಿಂದ ನೇರವಾಗಿ ಮತದಾರರಿಂಲೇ ಆಯ್ಕೆಯಾಗಬೇಕು ತಿದ್ದುಪಡಿಯು ತಿಳಿಸುತ್ತದೆ.ಈ ಪ್ರಕ್ರಿಯೆಯಲ್ಲಿ, ನಾಮ ನಿರ್ದೇಶನಕ್ಕಾಗಲೀ ಅಥವಾ ಸೇರ್ಪಡೆಗೆ ಅವಕಾಶವಿಲ್ಲ. ಕೆಳಗಿನ ಹಂತಗಳ ಪಂಚಾಯತ್ ಅಧ್ಯಕ್ಷರುಗಳು ಮೇಲಿನ ಹಂತಗಳಲ್ಲಿ ಪ್ರಾತಿನಿಧಿಕ ಸದಸ್ಯರಾಗಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಅಂದರೆ, ಗ್ರಾಮ ಪಂಚಾಯತ್

ಅಧ್ಯಕ್ಷರುಗಳು ಮಧ್ಯಂತರ ಹಂತದ ಪಂಚಾಯತ್‌ನಲ್ಲಿ, ಹಾಗು ಮಧ್ಯಂತರ ಹಂತದ ಪಂಚಾಯತ್ ಅಧ್ಯಕ್ಷರುಗಳು ಜಿಲ್ಲಾ ಪಂಚಾಯತ್‌ನ ಸಭೆಗಳಲ್ಲಿ ಪ್ರಾತಿನಿಧಿಕ ಸದಸ್ಯರಾಗಿ ಭಾಗವಹಿಸಬಹುದು. ಗ್ರಾಮ ಪಂಚಾಯತನ್ನು ಹೊರತುಪಡಿಸಿ ಉಳಿದ ಹಂತಗಳಿಗೆ ವಿಧಾನ ಸಭಾ ಸದಸ್ಯರು/ ಸಂಸತ್ ಸದಸ್ಯರು ಪಾಲ್ಗೊಳ್ಳಬಹುದು. ಸ್ಥಳೀಯ ಸಂಸ್ಥೆಯಾದ ಗ್ರಾಮ ಪಂಚಾಯತ್‌ಗೆ ಅಧ್ಯಕ್ಷರನ್ನು ನೇರವಾಗಿ ಮತದಾರರಿಂದ ಅಥವಾ ಪಂಚಾಯತ್‌ಗೆ ಆಯ್ಕೆಯಾಗಿರು'ವ ಚುನಾಯಿತ ಪ್ರತಿನಿಧಿಗಳಿಂದ ಆಯ್ಕೆ ಮಾಡುವುದರ ಮೂಲಕವಾಗಲೀ ಆರಿಸಲು ಅವಕಾಶ ಕಲ್ಪಿಸಲಾಗಿದೆ. ಇದನ್ನು ರಾಜ್ಯ ಸರ್ಕಾರ ತಾನು ರಚಿಸಿದ ಕಾಯ್ದೆಯ ಮೂಲಕ ಮಾಡಬೇಕಿರುತ್ತದೆ. ಮೇಲ್ಹಂತಗಳಾದ ಮಧ್ಯಂತರ ಪಂಚಾಯತ್ ಹಾಗು ಜಿಲ್ಲಾ ಪಂಚಾಯತ್‌ಗಳಿಗೆ ಅಧ್ಯಕ್ಷರನ್ನು ಆ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ ಮೂಲಕವೇ ಆಯ್ಕೆ ಮಾಡಬೇಕಿದೆ.

<u>ಸ್ಥಾನಗಳಿಗೆ ಮೀಸಲಾತಿ</u>

1993 ರ ಕಾಯಿದೆ ಹಿಂದುಳಿದವರಿಗೆ, ಮಹಿಳೆಯರಿಗೆ ಮತ್ತು ದಲಿತರಿಗೆ ಮೀಸಲಾತಿ ವ್ಯವಸ್ಥೆಯನ್ನು ಕಲ್ಪಿಸಿ, ಈ ವರ್ಗಗಳನ್ನು ರಾಜಕೀಯ, ಸಾಮಾಜಿಕ, ಆರ್ಥಿಕವಾಗಿ ಸಬಲೀಕರಣದತ್ತ ಕೊಂಡೊಯ್ಯಿತು. 73ನೇ ತಿದ್ದುಪಡಿಯ 243 ಡಿ ಸೆಕ್ಷನ್ ಈ ವರ್ಗಗಳ ಮೀಸಲಾತಿ ಬಗ್ಗೆ ಹೇಳುತ್ತದೆ.

- ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ವರ್ಗದವರಿಗೆ ಅವರ ಜನಸಂಖ್ಯೆಯ ಅನುಪಾತದಲಿ ಸದಸ್ಯ ಸ್ಥಾನದಲ್ಲಿ ಮೀಸಲಾತಿ ಕಲ್ಪಿಸಲಾಗಿದೆ.
- ಮೀಸಲಿಟ್ಟ ಹಾಗು ಮೀಸಲಿರಿಸದ ಒಟ್ಟು ಸ್ಥಾನಗಳ 1/3ಕ್ಕಿಂತ ಕಡಿಮೆಯಿಲ್ಲದ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು.
- ಹಿಂದುಳಿದ ವರ್ಗಗಳಿಗೆ ಸ್ಥಾನಗಳನ್ನು ಮೀಸಲಿಡುವುದನ್ನು ಆಯಾ ರಾಜ್ಯಗಳ ವಿವೇಚನೆಗೆ ಬಿಡಲಾಗಿದೆ.
- ಮೇಲೆ ತಿಳಿಸಿದ ಮೀಸಲಾತಿ ಸ್ಥಾನಗಳು ಅಧ್ಯಕ್ಷ / ಉಪಾಧ್ಯಕ್ಷ ಹುದ್ದೆಗಳಿಗೆ ಸಹ ಅನ್ವಯಿಸುತ್ತದೆ.

- ಆವರ್ತನ ರೀತಿಯಲ್ಲಿ ಕಾಲಕಾಲಕ್ಕೆ ಈ ಹುದ್ದೆಗಳು ಬದಲಾಗುತ್ತದೆ.

ಮೇಲ್ವರ್ಗದ ಜನತೆಮತ್ತು ಜನಪ್ರತಿನಿಧಿಗಳು ಮೀಸಲಾತಿಯಿಂದ ಬಂದ ಈ ವರ್ಗಗಳ ಜನ ಪ್ರತಿನಿಧಿಗಳಿಗೆ ಶಿಕ್ಷಣವಿಲ್ಲವೆಂಬ ಆಧಾರದಲ್ಲಿ ಅವರನ್ನು ಮುಖ್ಯ ವಾಹಿನಿಗೆ ಬರುವಲ್ಲಿ ತಡೆಯುತ್ತಿರುವುದು ಕಂಡುಬರುತ್ತಿದೆ. ಹಾಗೆಯೇ ಕೆಲವು ಕಡೆಗಳಲ್ಲಿ ಶಿಕ್ಷಣದ ಕೊರತೆಯಿಂದಾಗಿ ಪ್ರಾಕ್ಸಿ ಅಥವಾ 'ಬದಲಿಪ್ರಾತಿನಿಧಿತ್ವ'ದಮೂಲಕ ಈ ವರ್ಗದ ಜನತೆಯು ಕಾರ್ಯನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಇದು ಮೀಸಲಾತಿಯ ಋಣಾತ್ಮಕ ಬೆಳವಣಿಗೆ.ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಅವರ ಕ್ರಿಯಾಶೀಲ ಭಾಗವಹಿಸುವಿಕೆ ಮಾತ್ರ ಸಮ್ಮಿಶ್ರವಾಗಿದೆ. ಮೀಸಲಾತಿಯಿಂದ ಬಂದ ಪ್ರತಿನಿಧಿಗಳಿಗೆ, ಸತತ ತರಬೇತಿಯ ಹೊರತಾಗಿಯೂ, ಸರಕಾರದ ಹಲವು ಯೋಜನೆಗಳು, ಪಂಚಾಯಿತಿ ರಾಜ್ ಕಾಯಿದೆ, ಆರ್ಥಿಕ ಸಂಪನ್ಮೂಲ ಮತ್ತು ಬಜೆಟ್ ಇವೇ ಮೊದಲಾದ ಮೂಲಭೂತ ವಿಷಯಗಳ ಬಗ್ಗೆ ಅರಿವಿಲ್ಲದಿರುವುದು 'ಮೀಸಲಾತಿ' ಬೇಡ ಎಂಬ ಬಗ್ಗೆ ಗುಲ್ಲೆಬ್ಬಿಸುವವರಿಗೆ ಪೂರಕವಾಗಿದೆ.

<u>ಪಂಚಾಯತ್ ಸಂಸ್ಥೆಗಳ ಕಾಲಾವಧಿ</u>

ಸಂವಿಧಾನದ 73ನೇ ತಿದ್ದುಪಡಿಯು ಪಂಚಾಯತ್ ಸಂಸ್ಥೆಗಳ ಕಾಲಾವಧಿಯ ಬಗ್ಗೆ ಈ ಮುಂದಿನಂತೆ ತಿಳಿಸುತ್ತದೆ.

- ಪ್ರತೀ ಪಂಚಾಯತ್‌ನ ಕಾಲಾವಧಿ ಐದು ವರ್ಷಗಳು. ಈ ಅವಧಿ ಚುನಾಯಿತ ಪ್ರತಿನಿಧಿಗಳ ಮೊದಲ ಸಭೆಯಿಂದ ಪ್ರಾರಂಭವಾಗುತ್ತದೆ. ಆದರೆ, ಈ ಹಿಂದೆ ರಾಜ್ಯ ಸರ್ಕಾರಗಳು ಮಾಡುತ್ತಿದ್ದಂತೆ ಯಾವುದೇ ಕಾರಣಕ್ಕೂ ಈ ಅವಧಿಯನ್ನು ಹೆಚ್ಚಿಸುವ ಹಾಗಿಲ್ಲ ಮತ್ತು ಚುನಾವಣೆಯನ್ನು ಮುಂದೂಡುವ ಸಲುವಾಗಿ ಈ ಸಂಸ್ಥೆಗಳ ಅವಧಿಯನ್ನು ವಿಸ್ತರಿಸಲು ಅವಕಾಶವಿಲ್ಲ.

- ಪಂಚಾಯತಿಗಳಿಗೆ ಚುನಾವಣೆಯನ್ನು ಅವುಗಳ ಅವಧಿ ಮುಗಿಯುವ ಮುನ್ನ ನಡೇಸಬೇಕು. ಅಥವಾ ಪಂಚಾಯತ್‌ಗಳು ವಿಸರ್ಜನೆಹೊಂದಿದಲ್ಲಿ, ವಿಸರ್ಜನೆ ಹೊಂದಿದ ಆರು ತಿಂಗಳೊಳಗೆ ಚುನಾವಣೆ ನಡೆಸಬೇಕು.
- ಒಂದು ವೇಳೆ ವಿಸರ್ಜನೆಗೊಂಡ ಪಂಚಾಯತ್ ಉಳಿದ ಅವಧಿ ಆರು ತಿಂಗಳಿಗಿಂತ ಕಡಿಮೆ ಇದ್ದಲ್ಲಿ ಆ ಅವಧಿಗೆ ಮಧ್ಯಂತರ ಚುನಾವಣೆ ನಡೆಸುವ ಅಗತ್ಯವಿಲ್ಲ.
- ಅವಧಿ ಮುಗಿಯುವ ಮುನ್ನ ಪಂಚಾಯತ್‌ಗಳು ವಿಸರ್ಜನೆಗೊಂಡು ಪುನಃ ರಚಿತವಾದರೆ, ಪಂಚಾಯತ್‌ಗಳು ವಿಸರ್ಜನೆಗೊಳ್ಳದಿದ್ದಲ್ಲಿ, ಎಷ್ಟು ಅವಧಿಗೆ ಮುಂದುವರಿಯುತ್ತಿತ್ತೋ ಅಷ್ಟು ಅವಧಿಗೆ ಮಾತ್ರ ಮುಂದುವರಿಯುತ್ತದೆ.

<u>ಸದಸ್ಯತ್ವದ ಅನರ್ಹತೆ</u>

1993ರ ಪಂಚಾಯತ್ ರಾಜ್ ಸಂಸ್ಥೆಗಳ ತಿದ್ದುಪಡಿಯು ಪಂಚಾಯತಗಳ ಸದಸ್ಯತ್ವದ ಅನರ್ಹತೆಯ ಬಗ್ಗೆ ಈ ಮುಂದಿನಂತೆ ತಿಳಿಸುತ್ತದೆ.

- ರಾಜ್ಯ ವಿಧಾನಮಂಡಲಕ್ಕೆ ನಡೆಯುವ ಚುನಾವಣೆಗಳ ಉದ್ದೇಶಗಳಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ ಯಾರು ಅನರ್ಹರಾಗುತ್ತಾರೋ, ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕೂಡ ಅನರ್ಹರಾಗುತ್ತಾನೆ. ಆದರೆ, ವ್ಯಕ್ತಿಯ ವಯಸ್ಸು 21 ವರ್ಷಗಳಾಗಿದ್ದಲ್ಲಿ, ಆ ವ್ಯಕ್ತಿ 25 ವರ್ಷಗಳಿಗಿಂತಲೂ ಕಡಿಮೆ ವಯಸ್ಸಿನವರೆಂಬ ಕಾರಣಕ್ಕಾಗಿ ಅನರ್ಹರಾಗುವುದಿಲ್ಲ.
- ರಾಜ್ಯ ವಿಧಾನ ಮಂಡಲದಿಂದ ರಚಿತವಾದ ಕಾನುನಿನಿಂದ ಅನರ್ಹನಾಗಿದ್ದರೆ, ಚುನಾವಣೆಗೆ ನಿಲ್ಲಲು ಅನರ್ಹನಾಗುತ್ತಾನೆ.

- ಅನರ್ಹತೆಯ ಬಗ್ಗೆ ಪ್ರಶ್ನೆ ಉದ್ಭವಿಸಿದಾಗ ಅದನ್ನು ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರ ನೇಮಿಸಿದ ಪ್ರಾದಿಕಾರಕ್ಕೆ ವಹಿಸುವುದು.

1.13: ಆಡಳಿತಾತ್ಮಕ ವಿಕೇಂದ್ರೀಕರಣ

1993ರ ಕಾಯಿದೆ ಆಡಳಿತಾತ್ಮಕವಾದ ವಿಕೇಂದ್ರೀಕೃತ ವ್ಯವಸ್ಥೆಯನ್ನು ಮೂರು ಸ್ತರಗಳಲ್ಲಿಯೂ ಪ್ರತ್ಯೇಕವಾಗಿ ರೂಪಿಸಿದೆ.ಅದಕ್ಕೆ ಪೂರಕವಾಗಿ ನೌಕರ ವರ್ಗವನ್ನು ನೇಮಿಸಿಕೊಂಡಿದೆ. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ತಾಲೂಕು ಪಂಚಾಯತ್‌ಗೆ ಕಾರ್ಯನಿರ್ವಾಹಣಾಧಿಕಾರಿ ಹಾಗು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಯನ್ನು ಸರಕಾರ ನೇಮಿಸಿದೆ. ನೌಕರ ವರ್ಗದ ಅನೇಕರು ಬೇರೆ ಬೇರೆ ಇಲಾಖೆಗಳಿಂದ ವರ್ಗಾವಣೆಯಾಗಿ 'ಪಂಚಾಯಿತಿ ರಾಜ್‌ಮತ್ತು ಗ್ರಾಮೀಣಾಭಿವೃದ್ಧಿ' ಇಲಾಖೆಗೆ ಬಂದವರು. ಯೋಜನೆಗಳನ್ನು ರೂಪಿಸುವಲ್ಲಿ ಅಥವಾ ಸಮುದಾಯಾಧಾರಿತ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಇಂತಹ ಅಧಿಕಾರಿಗಳು ಸೋತು ಹೋಗುತ್ತಾರೆ. ಈ ಕೊರತೆಯನ್ನು ನೀಗಿಸುವ ಸಣ್ಣ ಪ್ರಯತ್ನ ಇತ್ತೀಚೆಗೆ ಪ್ರಾರಂಭವಾದ 'ಪಂಚಾಯಿತಿ ಅಭಿವೃದ್ಧಿ ಅಧಿಕಾರಿ' ನೇಮಕಾತಿ. ಆದರೆ ಈ ವ್ಯವಸ್ಥೆಯು ಸಾಂಸ್ಥಿಕ ಸಂರಚನೆ ಮತ್ತು ರಾಜಕೀಯ ಕಾರಣಗಳಿಂದಾಗಿ ನಿರಾಶಾದಾಯಕ ಪ್ರತಿಫಲವನ್ನು ನೀಡುತ್ತಿವೆ. ಈ ನಿಟ್ಟಿನಲ್ಲಿ ಆಮೂಲಾಗ್ರ ಚಿಂತನೆಯು ಹುಟ್ಟಿ ಕೊಳ್ಳಬೇಕಿದೆ (ಕುದ್ಕೋಳಿ.ಎಸ್, 2011).

1.14: ಹಣಕಾಸಿನ ವಿಕೇಂದ್ರಿಕರಣ

ಪಂಚಾಯತ್ ರಾಜ್ ಸಂಸ್ಥೆಗಳು, ಯೋಜನೆಗಳ ಅನುಷ್ಠಾನದಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ ವ್ಯವಹರಿಸಿದ ಹಣಕಾಸಿನ ಯೋಜನೆಗಳಲ್ಲಿಯೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸ ಬೇಕಾಗುತ್ತದೆ. ರಾಜಕೀಯ ವಿಕೇಂದ್ರಿಕರಣದೊಡನೆ ಆರ್ಥಿಕವಾದ ವಿಕೇಂದ್ರಿಕರಣಕ್ಕೂ 1993 ರ ಕಾಯಿದೆ ಅವಕಾಶ ಮಾಡಿಕೊಟ್ಟಿದೆ.

ಉದಾಹರಣೆಗೆ ಗ್ರಾಮ ಪಂಚಾಯಿತಿಗಳು ತೆರಿಗೆಗಳನ್ನು ಹಾಕುವ ಮತ್ತು ಕಲೆ ಹಾಕುವ ಅಧಿಕಾರವನ್ನು ಇಂದು ಚಲಾಯಿಸುತ್ತಿವೆ. ಆದರೆ ಹಣಕಾಸಿನ ನಿರ್ವಹಣೆಗಳು ಈ ಸ್ಥಳೀಯ ಸಂಸ್ಥೆಗಳಲ್ಲಿ ಸರಿಯಾಗಿ ಆಗುತ್ತಿಲ್ಲ. ಇದರ ಸಮರ್ಪಕ ನಿರ್ವಹಣೆಗೆ 'ಪಂಚಾಯಿತಿ ಜಮಾಬಂದಿ' ಅಥವಾ 'ಸೋಶಿಯಲ್ ಆಡಿಟ್' ಎನ್ನುವ ಹೊಸ ಆಯಾಮವನ್ನು ನೀಡಿದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಕಡ್ಡಾಯ ನೀತಿ ನಿಯಮಗಳಿಂದ ಯೋಜನೆಯಲ್ಲಿರಿಸಿದ ಹಣಕಾಸನ್ನು ಸೂಕ್ತವಾಗಿ ಅಂದರೆ ನೈಜ ಫಲಾನುಭವಿಗಾಗಿ ಖರ್ಚು ಮಾಡಲೂ ಸಾಧ್ಯವಾಗುತ್ತಿಲ್ಲ. ರಾಜ್ಯ ಹಣಕಾಸು ಆಯೋಗ ಈ ನಿಟ್ಟಿನಲ್ಲಿ ಚಿಂತಿಸಬೇಕಾಗಿದೆ. ಜೊತೆಗೆ ನೀತಿ ನಿರೂಪಕರು ಇದನ್ನು ಪರಿಗಣಿಸಬೇಕಾಗಿದೆ.

1.15: ಜಿಲ್ಲಾ ಯೋಜನಾ ಸಮಿತಿಗಳ ಪಾತ್ರ

ಗ್ರಾಮಕ್ಕೆ ಬೇಕಾದ ಯೋಜನೆ ಅಥವಾ ಜನರ ಬೇಡಿಕೆಗಳನ್ನಾಧರಿಸಿದ ಯೋಜನೆಗಳನ್ನು ರೂಪಿಸುವ ಜವಾಬ್ದಾರಿಯನ್ನು ಸ್ಥಳೀಯ ಘಟಕಗಳಿಗೆ ಮೀಸಲಿಡಬೇಕು ಎಂಬುದು ಕಾಯಿದೆಯ ಮೂಲ ಆಶಯ. ಆದರೆ ಅಂತಹ ಯೋಜನೆ, ಬೇಡಿಕೆಗಳನ್ನು ಕ್ರೋಢೀಕರಿಸಿ, ರಾಜ್ಯ ಹಣಕಾಸು ಆಯೋಗದ ಮೂಲಕ ಆರ್ಥಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಕಾರ್ಯವನ್ನು 'ಜಿಲ್ಲಾ ಯೋಜನಾಸಮಿತಿಗಳು' ನಿರ್ವಹಿಸಬೇಕಾಗುತ್ತದೆ. ಹಲವು ಜಿಲ್ಲೆಗಳಲ್ಲಿ ಇಂದಿಗೂ ಈ ವಿಭಾಗ ನಿಷ್ಕ್ರಿಯವಾಗಿಯೇ ಇದೆ ಎಂದರೆ ತಪ್ಪಾಗಲಾರದು. ಈ ಸಮಿತಿಗಳು ಜಿಲ್ಲೆಗೆ ಬೇಕಾದ ಅಗತ್ಯ ಯೋಜನೆಗಳ ಪಟ್ಟಿಯನ್ನೂ ಮಾಡಬೇಕಾಗುತ್ತದೆ. ಸಾಮಾಜಿಕ, ಆರ್ಥಿಕ, ಭೌತಿಕವಾದ ಯೋಜನೆಗಳ ವಿಶಾಲ ಪರಿಕಲ್ಪನೆಯು ಹೊಂದುವ ಅವಶ್ಯಕತೆಇದೆ. ಹಾಗಾಗಿ ವಿಕೇಂದ್ರಿಕೃತ ಯೋಜನೆಗಳಿಗೆ ಜಿಲ್ಲಾ ಯೋಜನಾ ಸಮಿತಿಗಳು ಹೆಚ್ಚಿನ ಮಹತ್ವವನ್ನು ನೀಡಬೇಕಾಗಿದೆ.

1.16: ಪಂಚಾಯತ್‌ಗಳ ಅಧಿಕಾರ ಹಾಗು ಜವಾಬ್ದಾರಿಗಳು

ಸಂವಿಧಾನದ 11ನೇ ಶೆಡ್ಯೂಲ್‌ನ 243ನೇ ಪರಿಚ್ಛೇದದ 'ಜ' ಪಂಚಾಯಿತಿ ರಾಜ್‌ಸಂಸ್ಥೆಗಳ ಅಧಿಕಾರ ಹಂಚಿಕೆಯ ಬಗ್ಗೆ ವಿವರಿಸುತ್ತದೆ. ಒಟ್ಟಾಗಿ ಈ ಸಂಸ್ಥೆಗಳಿಗೆ 29 ಕಾರ್ಯಕ್ರಮಗಳನ್ನು ನೀಡಲಾಗಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ರೂಪಿಸುವ ಯಾವುದೇ ಯೋಜನೆಗಳು ಈ ಸ್ಥಳೀಯ ಸಂಸ್ಥೆಗಳ ಮೂಲಕವೇ ಜನರಿಗೆ ತಲುಪಿಸುವ ಕಾರ್ಯವನ್ನು ಮಾಡಬೇಕಾಗಿದೆ. ಅವುಗಳ ಅಸಮರ್ಪಕ ಅನುಷ್ಠಾನದಿಂದ ಸಮುದಾಯಾಧಾರಿತ ಯೋಜನೆಗಳು ಇಂದು ನಿರೀಕ್ಷಿತ ಫಲವನ್ನು ಕೊಡುತ್ತಿಲ್ಲ. ಪಂಚಾಯತ್ ರಾಜ್ ಸಂಸ್ಥೆಗಳು ಸ್ಥಳೀಯ ಸರ್ಕಾರಗಳ ರೀತಿಯಲ್ಲಿ ಕಾರ್‍ಯನಿರ್ವಹಿಸಲು ಸಾಧ್ಯವಾಗುವಂತೆ ಆ ಸಂಸ್ಥೆಗಳಿಗೆ ಬಲ ಹಾಗು ಅಧಿಕಾರವನ್ನು ನೀಡಬೇಕು. ಸ್ಥಳಿಯ ಸಂಸ್ಥೆಗಳು ಈ ಅಧಿಕಾರವನ್ನು ಪಡೆಯುವುದರ ಮೂಲಕ ಆರ್ಥಿಕ ಅಭಿವೃದ್ಧಿ ಸಾಧಿಸುವ ಹಾಗು ಸಾಮಾಜಿಕ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಬೇಕು. ಇದರೊಂದಿಗೆ ಷೆಡ್ಯೂಲ್ 11 ರಲ್ಲಿರುವ ಎಲ್ಲಾ ಅಧಿಕಾರಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ವ್ಯಾಪ್ತಿಗೆ ತಂದಿದ್ದು, ಅದನ್ನು ಸಹ ಅನುಷ್ಠಾನಗೊಳಿಸಲು ಅಧಿಕಾರ ನೀಡಲಾಗಿದೆ.

1. ಕೃಷಿ ವಿಸ್ತರಣೆ ಸೇರಿದಂತೆ ಕೃಷಿ ಕಾರ್‍ಯಕ್ರಮ
2. ಭೂ ಸುಧಾರಣೆ, ಭೂ ಸಾರ ಸಂರಕ್ಷಣೆ ಕಾರ್‍ಯಕ್ರಮಗಳು
3. ಸಣ್ಣ ನೀರಾವರಿ, ಜಲ ನಿರ್ವಹಣೆ ಮತ್ತು ಜಲಾನಯನ ಅಭಿವೃದ್ಧಿ
4. ಪಶು ಸಂಗೋಪನೆ, ಹೈನುಗಾರಿಕೆ ಮತ್ತ ಕೋಳಿ ಸಾಕಣೆ
5. ಮೀನುಗಾರಿಕೆ
6. ಸಾಮಾಜಿಕ ಅರಣ್ಯ ಮತ್ತು ನೆಡುತೋಪು
7. ಕಿರು ಅರಣ್ಯ ಉತ್ಪನ್ನ
8. ಆಹಾರ ಸಂಸ್ಕರಣೆ ಕೈಗಾರಿಕೆಯೂ ಸೇರಿದಂತೆ ಸಣ್ಣ ಪ್ರಮಾಣದ ಕೈಗಾರಿಕೆಗಳು.

ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನಗಳು ಹಾಗು ತೆರಿಗೆ ವಿಧಿಸಲು ಇರುವ ಅಧಿಕಾರ

- ರಾಜ್ಯ ಸರ್ಕಾರವು ವಿಧಾನ ಸಭೆಯಲ್ಲಿ ಕಾನೂನನ್ನು ಅಂಗೀಕರಿಸುವ ಮೂಲಕ, ಪಂಚಾಯತ್ ಸಂಸ್ಥೆಗಳು ನಿಯಮಗಳಿಗೆ ಅನುಸಾರವಾಗಿ ತೆರಿಗೆ ಮತ್ತು ಶುಲ್ಕಗಳನ್ನು ವಿಧಿಸಲು ಮತ್ತು ಸಂಗ್ರಹಿಸಲು ಅಧಿಕಾರ ನೀಡಬಹುದು. ಇದನ್ನು ಪಂಚಾಯತ್‌ಗಳಿಗೆ ವಹಿಸುವ ಮುಖಾಂತರ ಅಥವಾ ರಾಜ್ಯ ಸರ್ಕಾರ ತಾನು ಸಂಗ್ರಹಿಸಿರುವುದನ್ನು ನೀಡುವುದರ ಮೂಲಕ ಮಾಡಬಹುದು.
- ರಾಜ್ಯ ಸಂಚಿತ ನಿಧಿ (State Consolidated Fund) ಯಿಂದ ನೀಡಲು ಅವಕಾಶ ಮಾಡಿಕೊಳ್ಳಬಹುದು.

1.17: ಹಣಕಾಸಿನ ಸ್ಥಿತಿ ಪರಿಶಿಲನೆಗೆ ಹಣಕಾಸು ಆಯೋಗದ ರಚನೆ

1993ರ ಪಂಚಾಯತ್ ರಾಜ್ ಕಾಯ್ದೆಯು ಹಣಕಾಸಿನ ಸ್ಥಿತಿಗತಿಗಳನ್ನು ಪರಿಶೀಲಿಸಲು ಹಣಕಾಸು ಆಯೋಗದ ಅವಕಾಶವನ್ನು ಮಾಡಿಕೊಟ್ಟಿದೆ, ಇದು ಹಣಕಾಸಿನ ಸಮರ್ಪಕ ನಿರ್ವಹಣೆಗೆ ಸಹಕಾರಿಯಾಗಿದೆ.

- 73ನೇ ತಿದ್ದುಪಡಿಯ ಅನುಷ್ಠಾನದ ಒಂದು ವರ್ಷದೊಳಗೆ ಹಾಗು ಅಲ್ಲಿಂದ ಪ್ರತಿ ಐದು ವರ್ಷದ ಅಂತ್ಯದೊಳಗೆ ಪಂಚಾಯತ್‌ನ ಹಣಕಾಸಿನ ಸ್ಥಿತಿ ಪರಿಶೀಲಿಸಿ ಸಲಹೆ ನೀಡುವ ಸಲುವಾಗಿ ಹಣಕಾಸು ಆಯೋಗವನ್ನು ರಚಿಸಬೇಕು.

ಪಂಚಾಯತ್‌ಗಳ ಹಣಕಾಸಿನ ಲೆಕ್ಕ ಪರಿಶೋಧನೆ

- ಪಂಚಾಯತ್‌ಗಳು ನಿರ್ವಹಿಸಬೇಕಾದ ಹಣಕಾಸಿನ ನಿರ್ವಹಣೆ ಹಾಗು ನಡೆಸಬೇಕಾದ ಲೆಕ್ಕ ಪರಿಶೋಧನೆ ಕುರಿತು ಸರ್ಕಾರ ಶಾಸನ ರೂಪಿಸಬೇಕಿದೆ.

1.18: ಪಂಚಾಯತ್‌ಗಳ ಚುನಾವಣೆ

1993ರ ಪಂಚಾಯಿತಿ ರಾಜ್ ಕಾಯಿದೆ ಪ್ರತಿ ಐದು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಪಂಚಾಯತಿಗಳಿಗೆ ಚುನಾವಣೆ ನಡೆಯಬೇಕು ಮತ್ತು ಆ ಮೂಲಕ ಜನ ಪ್ರತಿನಿಧಿಗಳು ಆಯ್ಕೆಯಾಗಿ ಬರಬೇಕು ಎಂಬುದನ್ನು ವಿವರಿಸುತ್ತದೆ. ಇದು ಜನತೆಯನ್ನು ರಾಜಕೀಯ ಕ್ಷೇತ್ರದೆಡೆಗೆ ಆಕರ್ಷಿಸುವಲ್ಲಿ ಸಹಕಾರಿಯಾಯಿತು. ಸಾಮಾಜಿಕವಾಗಿ ಹಿಂದುಳಿದ ಅಥವಾ ರಾಜಕೀಯವಾಗಿ ಹಿಂದುಳಿದ ಅನೇಕ ವರ್ಗಗಳು ಸಮಾಜದ ಮುಖ್ಯ ವಾಹಿನಿಯಲ್ಲಿ ಸೇರ್ಪಡೆಯಾದವು. ಜೊತೆಗೆ ಹಲವು ಮಂದಿ ರಾಜಕೀಯ ಕ್ಷೇತ್ರದೆಡೆಗೆ ಆಕರ್ಷಿತರಾದರು. ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಆಯ್ಕೆಯಲ್ಲಿ ಮಹಿಳೆಯರಿಗೆ ಶೇ.50 ರಷ್ಟು ಮೀಸಲಾತಿ ನೀಡಿರುವುದು ಮಹಿಳಾ ಸಬಲೀಕರಣಕ್ಕೆ ನಾಂದಿಯನ್ನು ಹಾಡಿದೆ. ಇದರಿಂದ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಲು ಸಹಕಾರಿಯಾಗಿದೆ. ಮತದಾರರ ಪಟ್ಟಿ ಸಿದ್ಧಪಡಿಸಿ, ಚುನಾವಣೆ ನಡೆಸುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ತಾನು ರಚಿಸಿರುವ ಚುನಾವಣಾ ಆಯೋಗದ ಮೂಲಕ ನಡೆಸಬೇಕು. ಚುನಾವಣಾ ಆಯೋಗದ ಮುಖ್ಯಸ್ಥರಾಗಿ ಚುನಾವಣಾ ಆಯುಕ್ತರಿರಯತ್ತಾರೆ. ಚುನಾವಣಾ ಆಯೋಗದ ಅವಧಿ, ಸೇವೆಯ ನಿಬಂಧನೆಗಳು ಇತ್ಯಾದಿ ರಾಜ್ಯ ಸರ್ಕಾರ ಕಾನೂನಿನ ಮೂಲಕ ಅಂಗೀಕರಿಸಬೇಕು.

1.19: ಮಹಿಳೆಯರ ರಾಜಕೀಯ ಸಬಲೀಕರಣ, ವಿಶ್ವಸಂಸ್ಥೆಯ ವರದಿ.

ಮಹಿಳೆಯರ ರಾಜಕೀಯ ಸಬಲೀಕರಣ ವಿಚಾರದಲ್ಲಿ ಭಾರತದ ಪ್ರಗತಿ ನಿರಾಶಾದಾಯಕ ಎಂದು ವಿಶ್ವಸಂಸ್ಥೆಯ 'ಸಹಸ್ರಮಾನದ ಅಭಿವೃದ್ಧಿಯ ಗರಿಗಳು' (ಎಂಡಿಜ) – 2012ರ ವರದಿ ಹೇಳಿದೆ. ಅಸಮಾನತೆ ಹೋಗಲಾಡಿಸಲು ಕೋಟಾ ಪದ್ಧತಿ ಆಧಾರದಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವುದು ಸೂಕ್ತ ಪರಿಹಾರ ಕ್ರಮ ವಾಗಬಹುದು ಎಂದೂ ವರದಿ ಶಿಪಾರಸು ಮಾಡಿದೆ. ಮಹಿಳೆಯರಿಗೆ ರಾಜಕೀಯದಲ್ಲಿರುವ ಪ್ರಾತಿನಿಧ್ಯವನ್ನು ಸಂಸತ್‌ನಲ್ಲಿರುವ ಮಹಿಳಾ ಸದಸ್ಯರ ಸಂಖ್ಯೆಯನ್ನು ಆಧರಿಸಿ ವಿಶ್ವಸಂಸ್ಥೆಯ ಎಂಡಿಜ ಸಮೀಕ್ಷೆ ನಡೆಸಿದೆ.ಭಾರತದ

ಸಂಸತ್‌ನಲ್ಲಿ ಶೇ.11ರಷ್ಟು ಮಾತ್ರ ಮಹಿಳೆಯರ ಪ್ರಾತಿನಿಧ್ಯ ಇದೆ. ಇದು ಸಹರಾ ಮರುಭೂಮಿಯನ್ನು ಒಳಗೊಂಡಿರುವ ಆಫ್ರಿಕಾ ಉಪಖಂಡದ (ಸಬ್ ಸಹರಾನ್) ರಾಷ್ಟ್ರಗಳಿಗಿಂತಲೂ ಕಡಿಮೆ ಎಂದು ವರದಿ ಬೊಟ್ಟು ಮಾಡಿದೆ. ಜಾಗತಿಕವಾಗಿಯೂ ಮಹಿಳೆಯರ ರಾಜಕೀಯ ಸಬಲೀಕರಣ ಪ್ರಮಾಣ ಕಡಿಮೆಯೇ ಇದೆ. ಕಳೆದ ಜನವರಿ ಹೊತ್ತಿಗೆ ವಿಶ್ವದ ವಿವಿಧ ಸಂಸತ್‌ಗಳಲ್ಲಿ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಶೇ 19.7ರಷ್ಟಿದೆ.ಈ ಹಿಂದಿನ ಅಂಕಿಅಂಶಕ್ಕೆ (ಶೇ.11.3) ಹೋಲಿಸಿದರೆ 2012ರ ಆರಂಭದ ವೇಳೆಗೆ ಸಂಸತ್‌ಗಳಲ್ಲಿ ಮಹಿಳೆಯರ ಪ್ರಾತಿನಿಧ್ಯದ ಪ್ರಮಾಣ ಶೇ.75 ರಷ್ಟು ಹೆಚ್ಚಳವಾಗಿದೆ ಎಂದು ವರದಿ ಹೇಳಿದೆ.

ಮುಂದುವರಿದ ದೇಶಗಳಲ್ಲೂ ಮಹಿಳೆಯರ ರಾಜಕೀಯ ಸಬಲೀಕರಣದ ಪ್ರಮಾಣ (ಶೇ.23) ಹೆಚ್ಚೇನೂ ಇಲ್ಲ. ಆದರೆ, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೋಲಿಸಿದರೆ (ಶೇ.18) ಮುಂದುವರಿದ ದೇಶಗಳ ಅಂಕಿ ಅಂಶ ಆಶಾದಾಯಕವಾಗಿದೆ. ಮುಂದುವರಿದ ದೇಶಗಳಲ್ಲಿ ಲ್ಯಾಟಿನ್ ಅಮೇರಿಕ, ಕೆರೇಬಿಯನ್ ದ್ವೀಪದ ದೇಶಗಳು ಮಹಿಳೆಯರ ರಾಜಕೀಯ ಸಬಲೀಕರಣಕ್ಕೆ (ಸರಾಸರಿ ಶೇ.23) ಒತ್ತು ನೀಡಿವೆ. ಸಹರಾ ಮರುಭೂಮಿ ಸುತ್ತಲಿನ ರಾಷ್ಟ್ರಗಳು (ಶೇ.20) ನಂತರದ ಸ್ಥಾನದಲ್ಲಿವೆ. ಈ ದೇಶಗಳಲ್ಲಿ ಮಹಿಳೆಯರ ರಾಜಕೀಯ ಸಬಲೀಕರಣಕ್ಕಾಗಿ ರಾಷ್ಟ್ರಗಳು ಕೊಟಾ ಪದ್ಧತಿಯಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಬೇಕಾದ ಅವಶ್ಯಕತೆ ಇದೆ.

ಅಧ್ಯಾಯ–2

ಸಾಹಿತ್ಯ ವಿಮರ್ಶೆ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಭಾಗವಹಿಸುವಿಕೆಯ ವಿವಿಧ ಆಯಾಮಗಳ ಬಗ್ಗೆ ರಾಷ್ಟ್ರದ್ಯಂತ ಹಲವಾರು ಅಧ್ಯಯನ ಮತ್ತು ಸಂಶೋಧನೆಗಳು ನಡೆದಿದೆ. ಈ ಎಲ್ಲಾ ಸಂಶೋಧನೆಗಳು ಮಹಿಳೆಯರ ಭಾಗವಹಿಸುವಿಕೆಗೆ ಸಂಬಂಧಪಟ್ಟಂತಹ ವಿವಿಧ ವಿಚಾರಗಳನ್ನು ಹೊರ ಜಗತ್ತಿಗೆ ತಿಳಿಸಿದೆ, ಜೊತೆಗೆ ವರ್ತಮಾನದ ಸ್ಥಿತಿಗಳನ್ನು ಸೈದ್ಧಾಂತಿಕ ನೆಲೆಯೊಂದಿಗೆ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿದೆ. ಈ ಅಧ್ಯಾಯದಲ್ಲಿ ಈ ವರೆಗೆ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಅದರಲ್ಲೂ ವಿಶೇಷವಾಗಿ ಸ್ಥಳಿಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ವಿಸ್ತೃತವಾವಾದ ಚರ್ಚೆಯನ್ನು ಮಾಡಲಾಗಿದೆ.

ಶಶಿ ಕೌಲ್ ಮತ್ತು ಶ್ರದ್ಧಾ ಶಾನಿ (2009), ಜಮ್ಮು ಕಾಶ್ಮೀರದ ಜಮ್ಮು ಮತ್ತು ಕಾತುವ ಜಿಲ್ಲೆಯಲ್ಲಿ ನಡೆಸಿದ ಅಧ್ಯಯನದಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸಿ ಸಂಬಂಧಪಟ್ಟಂತೆ ಬಹಳಷ್ಟು ಮಾಹಿತಿಯನ್ನು ತಿಳಿಸಿದ್ದಾರೆ. ಅವರ ಪ್ರಕಾರ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವ ಕುರಿತಾದ ಪುರುಷರ ನಕರಾತ್ಮಕ ಧೋರಣೆ ಇನ್ನೂ ಬದಲಾಗಲಿಲ್ಲ. ಈ ಧೋರಣೆಯನ್ನು ಕೇವಲ ಕಾನೂನು ಮತ್ತು ನೀತಿಗಳ ಮೂಲಕ ತರಲು ಸಾಧ್ಯವಿಲ್ಲ ಬದಲಾಗಿ ಪುರುಷ ಮತ್ತು ಮಹಿಳೆಯರಲ್ಲಿನ 'ಪರಸ್ಪರ ನಕರಾತ್ಮಕತೆಯನ್ನು' ಮಾನಸಿಕ ಬದಲಾವಣೆಯ ಜೊತೆಗೆ ಸಾಧಿಸ ಬೇಕಾಗಿದೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. ಗ್ರಾಮೀಣ ಮಹಿಳೆಯರು ಶಿಕ್ಷಿತ ಮಹಿಳೆಯರ ಜೊತೆ ನಿರಂತರ ಸಂವಹನ ಸಾಧಿಸುವುದರ ಜೊತೆಗೆ ನೈಜ ಸಶಕ್ತೀಕರಣ ಸಾಧಿಸಲು ಸಾಧ್ಯವಿದೆ ಎಂದಿದ್ದಾರೆ.

ರೂಪಾಶ್ರೀ ಸಿನ್ಹಾ ಮತ್ತು ಇತರರು (2002), ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಆರೋಗ್ಯ ವ್ಯವಸ್ಥೆಯ ಸುಧಾರಣೆ ಬಗ್ಗೆ ಉತ್ತರ ಪ್ರದೇಶದಲ್ಲಿ ಅಧ್ಯಯನ ನಡೆಸಿದ್ದು, ಇವರ ಫಲಿತಗಳ ಪ್ರಕಾರ ಮಹಿಳೆಯರು ರಾಜಕೀಯ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ನೇರವಾಗಿ ಭಾಗವಹಿಸುವುದರ ಪರಿಣಾಮವಾಗಿ ಅವರ ಮತ್ತು ಒಟ್ಟು ಮಹಿಳಾ ಸಮಾಜದ ಅಭಿವೃದ್ಧಿಯಾಗಲು ಸಾಧ್ಯವಿದೆ. ಮುಂದುವರಿದು, ಮಹಿಳೆಯರ ಸಶಕ್ತೀಕರಣಕ್ಕೆ ವಿವಿಧ ಆಯಾಮಗಳಿದ್ದು ಅವು ಒಂದಕ್ಕೊಂದು ಆಂತರಿಕ

ಸಂಬಂಧವನ್ನು ಹೊಂದಿದೆ. ಆವರ ಜೀವನದ ಪ್ರಮುಖ ವಿಷಯಕ್ಕೆ ಸಂಬಂಧಪಟ್ಟಂತೆ ಅವರು ಸಶಕ್ತರಾದರೆ ಉಳಿದ ಆಯಾಮಗಳಲ್ಲಿ ಯಾವುದೇ ಪ್ರಯತ್ನವಿಲ್ಲದೆ ಗಣನೀಯ ಬದಲಾವಣೆಯನ್ನು ಕಾಣಲು ಸಾಧ್ಯವೆಂದು ಕಂಡುಕೊಂಡಿದ್ದಾರೆ. ಈ ಅಧ್ಯಯನದಲ್ಲಿ ಇವರು ಮಹಿಳಾ ಆರೋಗ್ಯ ಮಟ್ಟವನ್ನು ಸುಧಾರಿಸುವಲ್ಲಿ ಗ್ರಾಮ ಪಂಚಾಯತ್ ವ್ಯವಸ್ಥೆಯ ಬಗ್ಗೆ ವಿಸ್ತೃತವಾದ ಅಧ್ಯಯನವನ್ನು ನಡೆಸಿದ್ದಾರೆ. ಇವರು ಹೇಳುವಂತೆ ಗ್ರಾಮ ಪಂಚಾಯತ್‌ನಲ್ಲಿ ಮಹಿಳೆಯರು ಪರಿಣಾಮಕಾರಿಯಾಗಿ ಭಾಗವಹಿಸುವುದರಿಂದ ಅವರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಅಥವಾ ಒಟ್ಟು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಮಹಿಳೆಯರ ಆರೋಗ್ಯವನ್ನು ಸುಧಾರಿಸಲು ಪೂರಕವಾದ ಯೋಜನೆ,ನೀತಿ ನಿರೂಪಣೆಯನ್ನು ಮಾಡಲು ಸಾಧ್ಯವೆಂದಿದ್ದಾರೆ.

ಮಿನ್ನಿ ಥಾಕೂರು (2010), ಒರಿಸ್ಸಾ ರಾಜ್ಯದ 'ಸಮಸ್ತಿಪುರ್' ಜಿಲ್ಲೆಯಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಬಗ್ಗೆ ಅಧ್ಯಯನವನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ನಡೆಸಿದ್ದಾರೆ. ಈ ಅಧ್ಯಯನದಲ್ಲಿ ಅವರು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಗೆ ತೊಡಕಾಗಿರುವ ಸಾಮಾಜಿಕ-ಸಾಂಸ್ಕೃತಿಕ, ಆರ್ಥಿಕ ಮತ್ತು ಕೌಟುಂಬಿಕ ಅಂಶಗಳನ್ನು ತೀಕ್ಷ್ಣ ದೃಷ್ಟಿಯಿಂದ ವಿಶ್ಲೇಷಣೆಯ ಜೊತೆಗೆ ಅವುಗಳ ನಿವಾರಣೆಗೆ ಕೈಗೊಳ್ಳಬೇಕಾದ ಯೋಜನೆ, ನೀತಿ ಮತ್ತು ತಂತ್ರಗಳ ಬಗ್ಗೆ ತಿಳಿಸಿದ್ದಾರೆ. ಇವರು ಕಂಡು ಕೊಂಡಂತೆ ಮಹಿಳೆಯರ ಅಶಕ್ತತೆ ಅಥವಾ ದುರ್ಬಲತೆಯೊಂದೆ ಮಹಿಳೆಯರ ಹಿಂದುಳಿಯುವಿಕೆಗೆ ಕಾರಣವಲ್ಲ ಬದಲಾಗಿ ಮಹಿಳೆಯರ ಕುರಿತಾಗಿ ಸಮಾಜದ ದೃಷ್ಟಿ ಮತ್ತು ಮಹಿಳೆಯರು ಆದಕ್ಕೆ ಪ್ರತಿಕ್ರಿಯಿಸುವ ಶೈಲಿಯು ಪ್ರಮುಖ ಕಾರಣವೆಂದು ಹೇಳಿದ್ದಾರೆ. ಇವರು ಪ್ರತಿಪಾದಿಸಿದ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಗೆ ಸಂಬಂಧ ಪಟ್ಟಂತೆ ಪ್ರತಿಪಾದಿಸಿದ ಸೂಕ್ಷ್ಮ ವಿಶ್ಲೇಷಣೆಯಲ್ಲಿ ಸಮಾಜದ ಮೂಲ ಸಂಸ್ಥೆಯಾಗಿರುವ ಕುಟುಂಬವು ಮಹಿಳೆಯರ ಒಟ್ಟು ಜೀವನಕ್ಕೆ ಸಂಬಂಧಪಟ್ಟ ನಿರ್ಧಾರ ತೆಗೆದುಕೊಳ್ಳುವುದರಿಂದ ಮಹಿಳೆಯರ್ ಪಾತ್ರ 'ನಿರ್ಧರಿಸುವಿಕೆಯ' ಹಂತದಲ್ಲಿ ಗೌಣವಾಗಿರುತ್ತದೆ. ಮುಂದುವರಿದು, ಸಂವಿಧಾನದ 73 ನೇ ಭಾರತದಾದ್ಯಂತ ಅನುಷ್ಠಾನಗೊಂಡರು, ಅದರ ಸಾಮಾಜಿಕ ಕಳಕಳಿ ಮತ್ತು

ಆಶಯ ಇನ್ನೂ ಜಾರಿಗೊಂಡಿಲ್ಲ ಎನ್ನಬಹುದು. ಮಹಿಳೇಯರು ಇಂದಿಗೂ ಪಿತೃಪ್ರಧಾನವಾದ ಕುಟುಂಬದ ಪುರುಷ ಆಸಕ್ತಿಯನ್ನು ಉಳಿಸುವ ದೃಷ್ಟಿಯಿಂದ ಅಥವಾ ಚುನಾವಣೆ ಕ್ಷೇತ್ರವನ್ನು ತನ್ನ ಕುಟುಂಬದ ಪುರುಷರನ್ನು ರಕ್ಷಿಸುವ ಸಲುವಾಗಿ ಸ್ಪರ್ಧಿಸುತ್ತಾರೆಂದು ಅಭಿಪ್ರಾಯ ಪಟ್ಟಿದ್ದಾರೆ. ಇದರ ಜೊತೆಗೆ ಸ್ಥಳಿಯ ಮಟ್ಟದ ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚುಗೊಳಿಸಲು ಮತ್ತು ಸದೃಢ ಗ್ರಾಮ ಸ್ವರಾಜ್ಯವನ್ನು ನಿರ್ಮಿಸಲು ಪೂರಕವಾಗಿ ಸರ್ಕಾರಗಳು ಕೂಡ ಮಹಿಳಾ-ಪರವಾದ ನೀತಿ ನಿರೂಪಣೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದ್ದಾರೆ.

ಅಶ್ವಿನಿ ಕುಮಾರ್ (2012), ಜಮ್ಮು ಕಾಶ್ಮೀರದ ಜಮ್ಮು ಜಿಲ್ಲೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ದುರ್ಬಲ ವರ್ಗಗಳ ಭಾಗವಹಿಸುವಿಕೆಯ ಬಗ್ಗೆ ಸುದೀರ್ಘ ಅಧ್ಯಯನ ನಡೆಸಿದ್ದಾರೆ. ಈ ಅಧ್ಯಯನದಲ್ಲಿ ಕೇವಲ ದುರ್ಬಲ ವರ್ಗಗಳಾದ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಬಗ್ಗೆ ಮಾತ್ರ ಕೇಂದ್ರೀಕರಿಸದೆ ಮಹಿಳೆಯರನ್ನು ದುರ್ಬಲ ವರ್ಗದ ಪರಿಧಿಯಲ್ಲಿ ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ಈ ಅಧ್ಯಯನವು ದುರ್ಬಲ ವರ್ಗದವರು ರಾಜಕೀಯದ ಭಾಗವಹಿಸುವಿಕೆಗೆ ಕೇವಲ ಸಾಮಾಜಿಕ ಸಂರಚನೆಗಳು ಕಾರಣವಲ್ಲ, ಬದಲಾಗಿ ರಾಜಕೀಯದ ಚಲನಶೀಲತೆ ಮತ್ತು ಸಮಷ್ಠಿಯ ಮಾನಸಿಕತೆಯು ಪ್ರಮುಖ ಕಾರಣವೆಂಬುದನ್ನು ಕಂಡು ಕೊಂಡಿದ್ದಾರೆ. ಈ ಅಧ್ಯಯನದಲ್ಲಿ ಮುಖ್ಯವಾಗಿ ದುರ್ಬಲ ವರ್ಗದವರು ಪಂಚಾಯತ್‌ನ ಮುಖ್ಯಸ್ಥರಾಗುವ ಕುರಿತಾದ ಅಂಕಿ-ಅಂಶಗಳನ್ನು ಕಲೆ ಹಾಕಿದ್ದು, ಸೂಚನದಾರರ ಪೈಕಿ ಬಹುತೇಕರು ನಕಾರಾತ್ಮಕ ಅಭಿಪ್ರಾಯವನ್ನು ಹೊಂದಿರುವುದು ಕಂಡು ಬಂದಿದೆ. ಆದುದರಿಂದ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಕೇವಲ ರಾಜಕೀಯ ಅಥವಾ ಶಾಸನೀಯ ಕಾರ್ಯಸೂಚಿಯಲ್ಲ ಬದಲಾಗಿ ಇದು ಈಗಾಗಲೇ ಸಮಾಜದಲ್ಲಿ ಹುದುಗಿರುವ ಸಾಮಾಜಿಕ ಸಂರಚನೆಯ ಹೊಸ ಆಯಾಮವೆಂದಿದ್ದಾರೆ.

ಕೆ.ಸಿ ವಿದ್ಯಾ (1994) ರವರು ಮಹಿಳೇ ಮತ್ತು ಪಂಚಾಯತ್ ರಾಜ್; ಕರ್ನಾಟಕದ ಅನುಭವದ ಬಗ್ಗೆ ಅಧ್ಯಯನ ನಡೆಸಿದ್ದು ಇದರಲ್ಲಿ ಕರ್ನಾಟಕದ ಆಯ್ದ ಒಂದು ಜಿಲ್ಲೆಯ ಸೂಕ್ಷ್ಮ ಅಧ್ಯಯನವನ್ನು ನಡೆಸಿದ್ದಾರೆ. ಈ

ಅಧ್ಯಯನವು ಸಂವಿಧಾನದ 73 ನೇ ತಿದ್ದು ಪಡಿಯ ಪ್ರಾರಂಭದ ದಿನಗಳಲ್ಲಿ ಮತ್ತು ಆದರ ಮುಂಚಿತವಾಗಿ ನಡೆದಿರುವುದರಿಂದ ತಿದ್ದುಪಡಿ ಪೂರ್ವದ ಮಹಿಳಾ ಸ್ಥಿತಿಗತಿಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಈ ಅಧ್ಯಯನದ ಫಲಿತಗಳು ಕೂಡ ಮಹಿಳೆಯರ ಕ್ಷೀಣ ರಾಜಕೀಯ ಭಾಗವಹಿಸುವಿಕೆಯನ್ನು ಎತ್ತಿ ತೋರಿಸುತ್ತದೆ. ಆದರಲ್ಲೂ ವಿಶೇಷವಾಗಿ ದುರ್ಬಲ ವರ್ಗದ ಮಹಿಳೆಯರು ಗ್ರಾಮೀಣ ರಾಜಕೀಯ ಶಕ್ತಿ ಕೇಂದ್ರದಿಂದ ಬಹಳಷ್ಟು ದೂರ ಉಳಿದಿದ್ದಾರೆ ಮತ್ತು ಅವರನ್ನು ಶಕ್ತಿ ಕೇಂದ್ರದ ಮಧ್ಯ ಭಾಗಕ್ಕೆ ತರುವ ಕಾರ್ಯಕ್ರಮಗಳು ಮತ್ತು ನೀತಿಗಳು ತಕ್ಷಣಕ್ಕೆ ಜಾರಿಯಾಗಬೇಕಿದೆ ಎಂದಿದ್ದಾರೆ.

ಸುಜಿತ್ ಕುಮಾರ್ ದತ್ತ ಮತ್ತು ದಿಲೀಪ್ ಕುಮಾರ್ ಘೋಶ್ ರವರ ಎಂಪವರಿಂಗ್ ರುರಲ್ ವುಮೆನ್ ಇನ್ ಪಂಚಾಯತ್ ರಾಜ್ ಅಧ್ಯಯನದಲ್ಲಿ ಸಂವಿಧಾನದ 73 ಮತ್ತು 74 ನೇ ತಿದ್ದುಪಡಿಯು ಮಹಿಳೆಯರು ಗ್ರಾಮ ಪಂಚಾಯತ್‌ನ ವಿವಿಧ ಹಂತಗಳಲ್ಲಿ ಭಾಗವಹಿಸಲು ಅನುಕೂಲವಾಗಿದೆ. ಇವರು ಪಶ್ಚಿಮ ಬಂಗಾಳದಲ್ಲಿ ನಡೆಸಿದ ಕ್ಷೇತ್ರ ಕಾರ್ಯದಲ್ಲಿ ಕಂಡು ಕೊಂಡಂತೆ ಸುಮಾರು ಎರಡು ವರ್ಷಗಳ ನಂತರವು ಹೆಚ್ಚಿನ ಮಹಿಳೆಯರಿಗೆ ಯೋಜನೆ, ನಿರ್ವಹಣೆ ಮತ್ತು ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲದಿರುವುದು ಕಂಡು ಬಂತು. ಇದರಿಂದಾಗಿ ಮಹಿಳಾ ಪ್ರತಿನಿಧಿಗಳು ಎಲ್ಲಾ ಕೆಲಸಗಳಿಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತಾಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಅನಿವಾರ್ಯವಾಗಿ ಅವಲಂಬಿಸ ಬೇಕಾಗಿರುವುದು ಕಂಡು ಬಂದಿದೆ. ಆದುದರಿಂದ ಮಹಿಳಾ ಸಬಲೀಕರಣವೆಂದರೆ ಮಹಿಳೆಯರೆ ಆಡಳಿತ ಯಂತ್ರವನ್ನು ಮುನ್ನಡೆಸುವುದು ಅಥವಾ ಅವರೇ ಒಟ್ಟು ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ಸಂಚಲಿಸುವುದು ಎನ್ನಬಹುದು.

ಜೆ.ಮಿನಾಕ್ಷಿ ಯವರ ವುಮೆನ್ ಇನ್ ಪಂಚಾಯತ್ ರಾಜ್ ಎಂಬ ಅಧ್ಯಯನದಲ್ಲಿ ಸ್ಥಳಿಯ ಆಡಳಿತದಲ್ಲಿ ಮಹಿಳೆಯರು ಕ್ರಿಯಾತ್ಮಕವಾಗಿ ಭಾಗವಹಿಸುವುದರಿಂದ ಸಮಾಜವು ಮಹಿಳೆಯರನ್ನು ನೋಡುವ ದೃಷ್ಟಿಕೋನದಲ್ಲಿ ಬದಲಾವಣೆಯಾಗಲು ಸಾಧ್ಯವಿದೆ. ಸಾಮಾಜಿಕ ಮೌಲ್ಯ ಮತ್ತು ನಿಯಮಗಳ ಮೂಲಕ ಮಹಿಳೆಯರ ಮೇಲೆ

ಹೇರಲಾದ ಕಠಿನ ತಡೆಯನ್ನು ರಾತ್ರಿ ಬೆಳಕಾಗುವುದರೊಳಗೆ ತೆಗೆದು ಹಾಕುವುದು ಕಷ್ಟ ಸಾಧ್ಯ. ಆದರೂ ನಿರಂತರ ಸಂವಹನ, ಶಾಸನೀಯ ಮಾರ್ಗ ಮತ್ತು ಸಂಘ ಸಂಸ್ಥೆಗಳ ನೆರವಿನಿಂದ ಇದನ್ನು ಸಾಧಿಸಬಹುದಾಗಿದೆ.

ಕವಿತಾ ಮಿಶ್ರರವರ ವುಮೆನ್ಸ್ ರೋಲ್ ಇನ್ ಪಾಲಿಟಿಕ್ಸ್ ಇನ್ ಮಾಡರ್ನ್ ವರ್ಲ್ಡ್ ಎಂಬ ಪುಸ್ತಕದಲ್ಲಿ ಮಹಿಳೆಯರು ಸ್ಥಳಿಯ ಆಡಳಿತ ಸಂಸ್ಥೆಗಳಲ್ಲಿ ಭಾಗವಹಿಸುವುದು ಸಕಾರತ್ಮಕ ಬೆಳವಣಿಗೆಯಾಗಿದೆ ಮತ್ತು ಈ ಪ್ರಕ್ರಿಯೆ ಒಟ್ಟು ಮಹಿಳಾ ಸಮುದಾಯ ಮೇಲ್ಮುಖವಾಗಿ ಚಲಿಸುವುದನ್ನು ಪ್ರತಿಬಿಂಬಿಸುತ್ತದೆ. ಇದರ ನಡುವೆಯೂ ಪುರುಷ ಶಕ್ತಿಗಳು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ನಿರಂತರವಾಗಿ ವಿರೋಧಿಸುವ ಮತ್ತು ನಿರಾಕರಿಸುವ ಪ್ರಯತ್ನವನ್ನು ಮಾಡುತ್ತಿದೆ. ಇದಕ್ಕೆ ಇಅವರು ನೀಡುವ ಕಾರಣ ಮಹಿಳಾ ಭಾಗವಹಿಸುವಿಕೆ ಕುಟುಂಬದ ಐಕ್ಯತೆಗೆ ದಕ್ಕೆ ತರುತ್ತದೆ. ಆದರೆ ಈ ವಾದದ ಹಿಂದಿರುವ ಕುಹಕವೆಂದರೆ 'ಪುರುಷ ಕಾರ್ಯಸೂಚಿ'. ಮಹಿಳೆಯರು ರಾಜಕೀಯದ ಮೂಲಕ ಸಾಮಾಜಕ ನಾಯಕತ್ವ ವಹಿಸುವುದು ಪುರುಷರಿಗೆ ಬೇಕಾಗಿಲ್ಲ.

ಬಾಲ್ ಸರಾ ಸೈರಾಜ್ ರವರು ಮಹಿಳಾ ಸಂಘಟನೆಗಳು ಮತ್ತು ಸ್ತ್ರಿವಾದಿ ಚಿಂತಕರು ಪಕ್ಷರಹಿತ ರಾಜಕೀಯವೆಂಬ ಕಾರ್ಯಸೂಚಿಯೊಂದಿಗೆ ಹೋರಾಟ ಮಾಡುತ್ತಿದ್ದಾರೆ. ಆದರೆ ಅವರ ಈ ಉಪಕ್ರಮ ಮಹಿಳಾ ಸಬಲೀಕರಣಕ್ಕೆ ಹೇತುವಾದುದು. ಯಾಕೆಂದರೆ ಪ್ರಜಾಪ್ರಭುತ್ವ ದೇಶದಲ್ಲಿ ಚುನಾವಣೆ ಕೇವಲ ರಾಜಕೀಯ ಪ್ರಕ್ರಿಯೆಯಾಗಿ ಉಳಿದಿಲ್ಲ ಬದಲಾಗಿ ಒಂದು ದೇಶದ ನೈಜ ದೃಢತೆಯನ್ನು ತೋರಿಸುವ ಪ್ರಕ್ರಿಯೆಯಾಗಿದೆ. ಇಲ್ಲಿ ಸ್ತ್ರಿ-ವಾದಿಗಳು ತಮ್ಮ ಆಲೋಚನಾ ಲಹರಿಯನ್ನು ಬದಲಾಯಿಸಬೇಕಾಗಿದೆ, ಚುನಾವಣೆ ಸ್ಪರ್ಧೆಯೆಂದರೆ ಕೇವಲ ಗೆಲುವು ಅಲ್ಲ ಬದಲಾಗಿ ಉಮೇದುವಾರಿಕೆಯ ಮೂಲಕ ತಮ್ಮ ಅಸ್ತಿತ್ವವನ್ನು ರುಜುವಾತು ಪಡಿಸಬೇಕಾಗಿದೆ.

ರಾಮ್ ಕಲಾಲ್ ರವರ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ದಲಿತಾ ಮಹಿಳಾ ಪ್ರತಿನಿಧಿಕರಣ ಎಂಬ ಅಧ್ಯಯನದಲ್ಲಿ ಕಂಡು ಕೊಂಡಂತೆ ಮಹಿಳೆಯರ ಭಾಗವಹಿಸುವಿಕೆಯು ಪರಿಮಾಣಾತ್ಮಕವಾಗಿ ಹೆಚ್ಚಾಗಿದೆ ಆದರೆ ಸಮುದಾಯ ಅಭಿವೃದ್ಧಿಯ ದೃಷ್ಟಿಯಿಂದ ಗಣನೀಯವಾಗಿ ಬದಲಾಗಿಲ್ಲವೆಂದು ಅಭಿಪ್ರಾಯ ಪಟ್ಟರು. ಆದರಲ್ಲೂ

ದುರ್ಬಲ ವರ್ಗದವರು ಮತ್ತು ದಲಿತರು ನಿರಂತರವಾಗಿ ಮೇಲ್ಜಾತಿ ಸದಸ್ಯರಿಂದ ಮತ್ತು ಪುರುಷರಿಂದ ತೊಂದರೆಯನ್ನು ಅನುಭವಿಸುವ ಸಾಧ್ಯತೆ ದಟ್ಟವಾಗಿದೆ.

ವೀಣಾ ಪೂನಚ್ಛ(2007) ರವರು ಗುಜರಾತ್ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಕುರಿತು ತಿಳಿಸಿದ್ದಾರೆ. ಇವರ ಅಧ್ಯಯನದಲ್ಲಿ ಕಂಡುಕೊಂಡಂತೆ ಹೊಸದಾಗಿ ಆಯ್ಕೆಯಾದ ಮಹಿಳಾ ಸದಸ್ಯರ ಬಹುತೇಕ ಜವಾಬ್ದಾರಿಯನ್ನು ಅವರ ಗಂಡದಿರು ನಿರ್ವಹಿಸುವುದು ಕಂಡು ಬಂದಿತ್ತು. ಇಂತಹ ಸಾಧ್ಯತೆಯನ್ನು ನಿರಾಕರಿಸುವಂತಿಲ್ಲ. ಮಹಿಳೆಯರ ಪ್ರಾರಂಭಿಕ ರಾಜಕೀಯ ಚಟುವಟಿಕೆಗಳಾಲ್ಲಿ ಅವ್ರ ಗಂಡದಿರ ಅಥವಾ ಕುಟುಂಬದ ಪುರುಷರ ಪ್ರಾಬಲ್ಯ ದಟ್ಟವಾಗಿ ಕಂಡು ಬರುತ್ತದೆ. ಮಹಿಳೆಯರಿಗೆ ಸರಿಯಾದ ಮಾಹಿತಿ ಮತ್ತು ಪಂಚಾಯತ್ ಆಡಳಿತ ನಿರ್ವಹಣೆಯಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಳ್ಳುವುದರ ಮೂಲಕ ಈ ಸಮಸ್ಯೆಯನ್ನು ನಿವಾರಿಸಬಹುದಾಗಿದೆ.

ಲಕ್ಷ್ಮೀ ದೇವಿ ಅಲ್ಕೋಡ್ ರವರ ಸ್ಥಾನಿಕ ಸರಕಾರಿ ಸಂಸ್ಥೆಗಳಲ್ಲಿ ಮಹಿಳೆಯರು ಎಂಬ ಅಧ್ಯಯನದಲ್ಲಿ ಮಹಿಳೆಯರ ಶೋಷಣೆ ಮತ್ತು ಹಿಂದುಳಿಯುವಿಕೆಗೆ ಐತಿಹಾಸಿಕ ಕಾರಣಗಳನ್ನು ಕಂಡು ಕೊಳ್ಳಲು ಪ್ರಯತ್ನಿಸಿದ್ದಾರೆ. ಅಧುನಿಕ ಕಾಲಘಟ್ಟದ ಬಹುತೇಕ ವಿಚಾರಗಳಲ್ಲಿ ಮಹಿಳೆಯು ಮುಂದುವರಿದಿದ್ದು ಆಂತರಿಕವಾಗಿ ಇನ್ನೂ ಹೊರಗೆ ಉಳಿದಿರುವುದು ವೇದ್ಯವಾಗುತ್ತದೆ. ಸರಕಾರದ ಬಹುತೇಕ ಕಾರ್ಯಕ್ರಮಗಳು ಮಹಿಳೆಯರನ್ನು ಪರಿಣಾಮಕಾರಿಯಾಗಿ ಮುಟ್ಟಲು ಮತ್ತು ಆ ಮೂಲಕ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ಸೇರಿಸಲು ವಿಫಲವಾಗಿರುವುದು ಕಾಣಬಹುದಾಗಿದೆ. ಈ ನಿಟ್ಟಿನಲ್ಲಿ ನೀತಿ ನಿರೂಪಕರು ಐತಿಹಾಸಿಕ ಮತ್ತು ಪ್ರಾದೇಶಿಕ ಭಿನ್ನತೆಯನ್ನು ಗಮನಿಸಿ ಮಹಿಳಾ ಸಬಲೀಕರಣದ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗಿದೆ.

ಒಟ್ಟಿನಲ್ಲಿ ಈ ಮೇಲಿನ ಎಲ್ಲಾ ಸಾಹಿತ್ಯಗಳನ್ನು ವಿಮರ್ಶೆ ಮಾಡಿದಾಗ ಬಹುತೇಕ ಅಂಶಗಳಲ್ಲಿ ಸಾಮ್ಯತೆಯಿರುವುದನ್ನು ಕಾಣಬಹುದಾಗಿದೆ. ಭಾರತದಲ್ಲಿ ಸ್ವಾತಂತ್ರ್ಯ ನಂತರ ಲೆಕ್ಕವಿಲ್ಲದಷ್ಟು ಸರಕಾರಿ ಮತ್ತು

ಸರಕಾರೇತರ ಕಾರ್ಯಕ್ರಮಗಳು ಅನುಷ್ಠಾನಗೊಂಡರು ಮಹಿಳೆಯರ ಸ್ಥಿತಿಗತಿಯಲ್ಲಿ ಮಹತ್ತರ ಬದಲಾವಣೆ ಕಂಡು ಬಂದಿಲ್ಲವೆನ್ನಬಹುದಾಗಿದೆ. ಮಹಿಳೆಯರ ಸಬಲೀಕರಣ ಕೇವಲ ಸಾಂಕೇತಿಕ ಮತ್ತು ಪ್ರಮಾಣತ್ಮಕ ಏರಿಕೆಯನ್ನು ಕಾಣುವುದು ಮಾತ್ರವಲ್ಲ ಬದಲಾಗಿ ಸಕರಾತ್ಮಕ ಮುನ್ನಡೆಯನ್ನು ಸಾಧಿಸುವುದಾಗಿದೆ. ಈ ನಿಟ್ಟಿನಲ್ಲಿ ಈ ಸಾಹಿತ್ಯ ವಿಮರ್ಶೆಯು ಅಧ್ಯಯನ ವಿಷಯದ ತಾತ್ವಿಕ ನೆಲೆಗಟ್ಟನ್ನು ಅರ್ಥೈಸಿ ಕೊಳ್ಳಲು ಮತ್ತು ಈ ಅಧ್ಯಯನಕ್ಕೆ ನಿಖರವಾದ ಸೈದ್ಧಾಂತಿಕ ಚೌಕಟ್ಟನ್ನು ರೂಪಿಸಲು ಹಾಗೂ ಅಧ್ಯನಕ್ಕೆ ವಿಸ್ತಾರವಾದ ನೆಲೆಯನ್ನು ಕಲ್ಪಿಸಿಕೊಳ್ಳಲು ಅನುಕೂಲವಾಗಿದೆ.

ಅಧ್ಯಯನ ವಿಧಾನ

ಅಧ್ಯಯನ ವಿಧಾನವು ಯಾವುದೇ ಸಂಶೋಧನೆಯಲ್ಲಿ ಪ್ರಮುಖ ಭಾಗವಾಗಿದ್ದು ಇದು ಅಧ್ಯಯನವು ಒಳಗೊಂಡಿರುವ ಮತ್ತು ಅಳವಡಿಸಿರುವ ವಿಧಾನಗಳ ಬಗಗೆ ಪೂರ್ಣ ಮಾಹಿತಿಯನ್ನು ನೀಡುತ್ತದೆ.

ಸಮಸ್ಯೆಯ ಹೇಳಿಕೆ ಮತ್ತು ಮಹತ್ವ

ರಾಜಕೀಯ ಅಧಿಕಾರದ ವಿಕೇಂದ್ರಿಕರಣ, ಜನರ ಪಾಲ್ಗೊಳ್ಳುವಿಕೆ, ಮಹಿಳಾ ಮೀಸಲಾತಿಯ ಅಗತ್ಯಗಳು, ಕೊರತೆಗಳು ಮುಂತಾದ ವಿಚಾರಗಳನ್ನು ಕುರಿತಂತೆ ಆನೇಕ ಚಿಂತಕರು ಅಧ್ಯಯನಗಳನ್ನು ನಡೆಸಿರುತ್ತಾರೆ. ಗ್ರಾಮ ಪಂಚಾಯತ್ ವ್ಯವಸ್ಥೆಯ ಸಾಧಕ ಬಾಧಕಗಳು, ಸಮಸ್ಯೆಗಳು, ಇತ್ಯಾದಿ ವಿಷಯಗಳಿಗೆ ಸಂಬಂದಿಸಿದಂತೆ ಸಂಶೋಧನೆಗಳು ಈ ಕ್ಷೇತ್ರದಲ್ಲಿ ನಡೆದಿವೆ. ಇಂತಹ ಅಧ್ಯಯನಗಳಿಂದ ಹೊರ ಬಂದಿರುವ ವಿಚಾರಗಳು, ಸಂಶೋಧನಾ ಲೇಖನಗಳು ಹಾಗು ಅಧ್ಯಯನಗಳನ್ನು ಪಾರಾಮರ್ಶಿಸಿದಲ್ಲಿ, ಕೈಗೊಂಡಿರುವ ಪ್ರಸ್ತುತ ಸಂಶೋಧನೆಗೆ ಅಗತ್ಯವಾದ ಶೈಕ್ಷಣಿಕ ಹಿನ್ನಲೆ ಮಾಹಿತಿ ಹಾಗೂ ಪರಿಕರಗಳು ದೊರೆಯುತ್ತದೆ. ರಾಜಕೀಯದಲ್ಲಿ ಮಹಿಳಾ ಭಾಗವಹಿಸುವಿಕೆಯನ್ನು ಕುರಿತಂತೆ ಈಗಾಗಲೇ ಸಾಕಷ್ಟು ಸಂಶೋಧನ ಮಾಹಿತಿಗಳು, ಲೇಖನಗಳು ಹೊರ ಬಂದಿವೆಯಾದವರು ಒಂದು ನಿರ್ದಿಷ್ಟ ಕ್ಷೇತ್ರ ಅಧ್ಯಯನವನ್ನು ಕುರಿತಂತೆ ಸಂಶೋಧನ ಅಧ್ಯಯನವು ಹೊರ ಬಂದಿಲ್ಲವಾದ ಕಾರಣ, ರಾಜಕೀಯ ಅರಿವು ಇರುವ ದಕ್ಷಿಣ ಕನ್ನಡದ ಬಂಟ್ವಾಳ ತಾಲೂಕಿನ ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳೆಯರ ಪಾತ್ರವನ್ನು ಕುರಿತಂತೆ ಈವರೆಗೆ ಸಂಶೋಧನ ಅಧ್ಯಯನಗಳು ನಡೆದಿಲ್ಲವಾದ ಕಾರಣ ಪ್ರಸ್ತುತ ಸಂಶೋಧನೆಯನ್ನು ಕೈಗೊಳ್ಳಲಾಗಿದೆ ಎನ್ನುವುದು ಸಂಶೋಧಕನ ಸಮರ್ಥನೆಯಾಗಿದೆ.

ಅಧ್ಯಾಯ–3

ಅಧ್ಯಯನ ವಿಧಾನ

ಅಧ್ಯಯನದ ವ್ಯಾಪ್ತಿ

ಈ ಅಧ್ಯಯನವನ್ನು ಕರ್ನಾಟಕ ರಾಜ್ಯದ ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಆಯ್ದ ಗ್ರಾಮ ಪಂಚಾಯತ್ ಮಹಿಳಾ ಚುನಾಯಿತ ಪ್ರತಿನಿಧಿಗಳನ್ನು ಗುರಿಯಾಗಿಸಿ ಅಧ್ಯಯನ ಮಾಡಲಾಗಿದೆ. ಬಂಟ್ವಾಳ ತಾಲೂಕು 47 ಗ್ರಾಮ ಪಂಚಾಯತ್‌ಗಳನ್ನು ಹೊಂದಿದ್ದು 81 ಗ್ರಾಮಗಳಿವೆ. ಬಂಟ್ವಾಳ ತಾಲೂಕಿನ ಜನಸಂಖ್ಯೆ 36,829 (ಜನಗಣತಿ, 2001). ಒಟ್ಟು ಜನಸಂಖ್ಯೆಯ ಅರ್ಧದಷ್ಟು ಮಹಿಳಾ ಜನಸಂಖ್ಯೆಯಿದೆ.

<u>ಬಂಟ್ವಾಳ ತಾಲೂಕಿನ ಗ್ರಾಮ ಪಂಚಾಯತ್ಗಳ ವಿವರ</u>

ಕ್ರ.ಸಂ	ಗ್ರಾಮ ಪಂಚಾಯತ್	ಕ್ರ.ಸಂ	ಗ್ರಾಮ ಪಂಚಾಯತ್
1	ಅಳಿಕೆ	17	ಕಾವಳ ಪಡೂರು
2	ಅಮ್ಟಾಡಿ	18	ಕೆದಿಲ
3	ಅನಂತಾಡಿ	19	ಕೇಪು
4	ಬಡಗಬೆಳ್ಳೂರು	20	ಕೊಳ್ನಾಡು
5	ಬಡಗಕಜೆಕಾರು	21	ಕುಕ್ಕಿಪಾಡಿ
6	ಬಾಳೆಪುಣಿ	22	ಕುರ್ನಾಡು
7	ಬಾಳ್ತಿಲಾ	23	ಮಂಚಿ
8	ಚೆನ್ನೈತ್ತೋಡಿ	24	ಮಾಣಿ
9	ಗೋಳ್ತಮಜಲು	25	ಮೇರಮಜಲು
10	ಇಡ್ಕಿದು	26	ನರಿಕೊಂಬು
11	ಇರಾ	27	ನರಿಂಗಾಣ
12	ಕಡೇಶ್ವಾಲ್ಯ	28	ನಾವೂರು
13	ಕನ್ಯಾನ	29	ಪಜೀರು
14	ಕರಿಯಂಗಳ	30	ಪಂಜಿಕಲ್ಲು
15	ಕರೋಪಾಡಿ	31	ಪೆರ್ನೆ
16	ಕಾವಳ ಮೂಡೂರು	32	ಪೆರುವಾಯಿ

P.T.O

33	ಪಿಲಾತಬೆಟ್ಟು	41	ರಾಯಿ
34	ಪುದು	42	ಸಜಿಪ ಮೂಡ
35	ಪುಣಚ	43	ಸಜಿಪ ಮುನ್ನೂರು
36	ತುಂಬೆ	44	ಸಜಿಪ ನಡು
37	ಉಳಿ	45	ಸಂಗಬೆಟ್ಟು
38	ವೀರಕಂಭ	46	ಸರಪಾಡಿ
39	ವಿಟ್ಲ	47	ವಿಟ್ಲ ಮುಡ್ನೂರು
40	ವಿಟ್ಲ ಪಡ್ನೂರು		

ಸಂಶೋಧನಾ ಉದ್ದೇಶಗಳು:

1. ಗ್ರಾಮ ಪಂಚಾಯತ್‌ನಲ್ಲಿ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳ ಮೂಲ ಮಾಹಿತಿಯನ್ನು ತಿಳಿದುಕೊಳ್ಳುವುದು.
2. ಗ್ರಾಮ ಪಂಚಾಯತಿನಲ್ಲಿ ಮಹಿಳಾ ಭಾಗವಹಿಸುವಿಕೆಯ ಸ್ವರೂಪ ಮತ್ತು ಪರಿಣಾಮಕಾರಿತ್ವವನ್ನು ತಿಳಿದುಕೊಳ್ಳುವುದು.
3. ಚುನಾಯಿತ ಮಹಿಳಾ ಸದಸ್ಯರಲ್ಲಿ ಹಕ್ಕು ಮತ್ತು ಕರ್ತವ್ಯಗಳ ಜಾಗೃತಿಯನ್ನು ತಿಳಿದುಕೊಳ್ಳುವುದು.
4. ಚುನಾಯಿತ ಮಹಿಳಾ ಸದಸ್ಯರಕುರಿತಾದ ಸಾರ್ವಜನಿಕಅಭಿಪ್ರಾಯವನ್ನು ತಿಳಿದುಕೊಳ್ಳುವುದು.
5. ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಪ್ರಭಾವ ಬೀರುವ ಸಾಮಾಜಿಕ, ಆರ್ಥಿಕ, ಕೌಟುಂಬಿಕ, ಸಾಂಸ್ಕೃತಿಕ, ರಾಜಕೀಯ, ರಚನಾತ್ಮಕ ಅಂಶಗಳ ಕುರಿತು ಮಾಹಿತಿ ಸಂಗ್ರಹಿಸುವುದು.
6. ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳಾ ಪ್ರಾತಿನಿಧ್ಯೆ‌ಗೆ ಎದುರಾಗುವ ತೊಡಕುಗಳ ಬಗ್ಗೆ ವಿಶ್ಲೇಷಣೆ ಮಾಡುವುದು.

ಅಧ್ಯಯನದ ವಿಧಾನಗಳು:

ಸಂದರ್ಶನಗಳು, ಗ್ರಂಥ ಪರಾಮರ್ಶನ, ಪ್ರಶ್ನಾವಳಿಗಳು, ಇತ್ತೀಚಿನಗ್ರಾಮ ಪಂಚಾಯತಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಸಂಬಂಧಿಸಿದ ವಿಚಾರಗಳನ್ನು ತಿಳಿಯಲು ವೆಬ್‌ಸೈಟ್‌ಗಳು, ಇತ್ಯಾದಿ.

ಸಂಶೋಧನಾ ವಿನ್ಯಾಸ :

ಈ ಸಂಶೋಧನೆಯಲ್ಲಿ ಸರಳ ಯಾದೃಚ್ಛಿಕ ನಮೂನೆಯನ್ನು ಬಳಸಿ 47 ಗ್ರಾಮ ಪಂಚಾಯತ್‌ಗಳ 50 ಮಹಿಳಾ ಸದಸ್ಯರನ್ನು ಆಯ್ಕೆ ಮಾಡಲಾಗಿದೆ. ನಂತರ ವಿಭಾಗಿತ ಸರಳ ಯಾದೃಚ್ಛಿಕ ನಮೂನೆ ಮುಖಾಂತರ ವಯಸ್ಸು, ಶಿಕ್ಷಣ ಮತ್ತು ಜಾತಿ ಆಧಾರದ ಮೇಲೆ ವಿಭಾಗಿಸಿ ಮಾಹಿತಿಯನ್ನು ಸಂದರ್ಶನ ಅನುಸೂಚಿಯ ಸಹಾಯದಿಂದ ವೈಯಕ್ತಿಕ ಸಂದರ್ಶನ ಮತ್ತು ಅವಲೋಕನದಂತಹ ತಂತ್ರ–ಸಾಧನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಪ್ರಾಥಮಿಕ ಆಕರಗಳು :

ಸಂದರ್ಶನ ಅನುಸೂಚಿಯನ್ನು ಸಿದ್ಧಪಡಿಸಿ ಅದನ್ನು ಪೂರ್ವ ಪರೀಕ್ಷೆಗೆ ಒಳಪಡಿಸಿದ ನಂತರ ಕಂಡು ಬಂದ ದೋಷಗಳನ್ನು ಸರಿಪಡಿಸಿಕೊಂಡು 50 ಚುನಾಯಿತ ಗ್ರಾಮ ಪಂಚಾಯತ್ ಮಹಿಳಾ ಪ್ರತಿನಿಧಿಗಳನ್ನು ವಿಭಾಗಿತ ಸರಳ ಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಆಯ್ಕೆ ಮಾಡಿಕೊಂಡು ಅವರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಮಾಹಿತಿ ಸಂಗ್ರಹಣೆಗಾಗಿ ಸಂದರ್ಶನದ ಜೊತೆಗೆ ಸಂಶೋಧಕನು ಸಹಭಾಗಿ ಅವಲೋಕನ ಮೂಲಕ ಮಾಹಿತಿಯನ್ನು ಸಂಗ್ರಹಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅನುಷಂಗಿಕ ಆಕರಗಳು :

ಈ ಅಧ್ಯಯನಕ್ಕೆ ಬೇಕಾದ ಅನುಷಂಗಿಕ ಮಾಹಿತಿಗಳನ್ನು ಸರ್ಕಾರಿ ಇಲಾಖಾ ದಾಖಲಾತಿಗಳು, ಸರ್ಕಾರಿ ಕೈಪಿಡಿಗಳು, ಗ್ರಾಮ ಪಂಚಾಯತ್ ದಾಖಲೆಗಳು, ರಾಜ್ಯ ಪತ್ರಗಳು, ನಿಯತಕಾಲಿಕಗಳು, ರಾಜ್ಯಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿಯತಕಾಲಿಕಗಳು, ಸವೀಕ್ಷಾ ಗ್ರಂಥಗಳು, ವಿಶ್ವಕೇಶಗಳು ಮತ್ತುಅಂತರ್ಜಲ ಮಾಧ್ಯಮಗಳ ಮುಖಾಂತರ ಸಂಗ್ರಹಿಸಲಾಗುತ್ತದೆ.

ಮಾಹಿತಿ ವಿಶ್ಲೇಷಣೆ :

ಈಗಾಗಲೇ ತಿಳಿಸಿದ ಸಂಶೋಧನಾ ವಿಧಾನಗಳ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ಪಟ್ಟಿ ಮಾಡುವಿಕೆ, ಸೂಚೀಕರಣ ಮತ್ತು ಸಂಖ್ಯಾಶಾಸ್ತ್ರೀಯ ವಿಧಾನಗಳ ಬಳಕೆಯ ಮೂಲಕ ಸಮಾಜಶಾಸ್ತ್ರಿಯ ಚೌಕಟ್ಟಿನಲ್ಲಿ ವಿಶ್ಲೇಷಿಸಿ ವರದಿ ತಯಾರಿಸಲಾಗಿದೆ.

ಅಧ್ಯಯನದ ಇತಿಮಿತಿಗಳು:

ಸಂಶೋಧಕನ ಅನುಭವದ ಪ್ರಕಾರ, ಕೈಗೊಂಡಿರುವ ಅಧ್ಯಯನಕ್ಕೆ ಕೆಲವು ಇತಿಮಿಗಳಿವೆ. ಅಧ್ಯಯನವು ವಿಷಯ ನಿರ್ದಿಷ್ಟತೆ ಹಾಗು ಪ್ರಾದೇಶಿಕ ನಿರ್ದಿಷ್ಟತೆಯನ್ನು ಒಳಗೊಂಡಿರುತ್ತದೆ.

1) ಗ್ರಾಮ ಪಂಚಾಯತನಲ್ಲಿ ಮಹಿಳೆಯರ ಭಾಗವಹಿಸುವಿಕೆಯುಅಧ್ಯಯನದ ವ್ಯಾಪ್ತಿಯನ್ನು ಕೇವಲ ದ.ಕ.ಜಲ್ಲೆಯು ವ್ಯಾಪ್ತಿಗೊಳಪಡುವ ಬಂಟ್ವಾಳ ತಾಲೂಕಿಗಷ್ಟೇ ಸೀಮಿತಗೊಳಿಸಲಾಗಿದೆ.

2) ಮಹಿಳಾ ರಾಜಕೀಯ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸುವುದು ಈ ಕ್ಷೇತ್ರದ ವ್ಯಾಪ್ತಿಗೆ ಮಾತ್ರ ಸೀಮಿತವಾಗಿರುವುದರಿಂದ ಇತರಗ್ರಾಮ ಪಂಚಾಯತದಮಹಿಳಾ ಪಾಲ್ಗೊಳ್ಳುವಿಕೆಗಿಂತಲೂ ಭಿನ್ನವಾಗಿರಬಹುದು ಅಥವಾ ವಿಷಯಗಳನ್ನು ಸಾಮಾನ್ಯೀಕರಣಗೊಳಿಸುವಲ್ಲಿ ಟೀಕೆಗಳು ಎದುರಾಗ ಬಹುದು.

3) ಮಾಹಿತಿಗಳನ್ನು ಪಡೆಯುವಲ್ಲಿ ಪ್ರಾಮಾಣಿಕವಾಗಿರುವ ಅಂಕಿ ಅಂಶಗಳು ಮಹಿಳೆಯರ ಅಭಿಪ್ರಾಯಗಳು ಅಧ್ಯಯನಕ್ಕೆ ಪೂರಕವಾಗಿ ಲಭಿಸುತ್ತದೆಯೇಎನ್ನುವ ಸಂಶಯಗಳು.

4) ಗ್ರಾಮ ಪಂಚಾಯತದಲ್ಲಿ ಮಹಿಳೆಯ ಭಾಗವಹಿಸುವಿಕೆಗೆ ಅಡ್ಡಿಯಾಗಬಹುದಾದ ಅಂಶಗಳು ಸಬಲೀಕರಣದ ಕೊರತೆಗಳು ಇನ್ನಿತರ ಸಮಸ್ಯೆಗಳ ಕುರಿತಂತೆ ಮಾತ್ರವೇ ಅಧ್ಯಯನದ ಚೌಕಟ್ಟನ್ನು ರೂಪಿಸಲಾಗಿದೆ.

ಅಧ್ಯಯನದ ಮುನ್ನೋಟ:

1. ಮೊದಲ ಅಧ್ಯಾಯವು ಪ್ರಜಾಪ್ರಭುತ್ವ ಪರಿಕಲ್ಪನೆ, ಸ್ಥಳೀಯ ಆಡಳಿತ ಕುರಿತಾದ ಮಾಹಿತಿಗಳು, ಮಹಿಳಾ ಪ್ರಾತಿನಿಧ್ಯದ ಮಾಹಿತಿಗಳು, 73ನೇ ತಿದ್ದುಪಡಿಯ ಪಕ್ಷಿನೋಟ, ಅಧ್ಯಯನದ ಉದ್ದೇಶಗಳು, ಇತಿ–ಮಿತಿಗಳು, ಗ್ರಂಥ ವಿಮರ್ಶೆಗಳು ಇತ್ಯಾದಿಗಳನ್ನು ಒಳಗೊಂಡಿರುತ್ತದೆ.
2. ಎರಡನೇ ಅಧ್ಯಾಯವು ಕುರಿತಂತೆ ಸಮಗ್ರವಾಗಿ ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯತೆ ಕುರಿತಂತೆ ಅವಲೋಕನ ಮಾಡಲಾಗುತ್ತದೆ.
3. ಮೂರನೇಯ ಅಧ್ಯಾಯವು ರಾಜಕೀಯದಲ್ಲಿ ಮೀಸಲಾತಿಯನ್ನು ಕುರಿತಾದ ಅಗತ್ಯತೆ ಮೀಸಲಾತಿಗೆ ಎದುರಾಗುವ ಸವಾಲುಗಳು, ಮಹಿಳಾ ಮೀಸಲಾತಿ, ಸಾಧಕ ಬಾಧಕಗಳು ಕುರಿತಂತೆ ಚರ್ಚಿಸುತ್ತದೆ.
4. ಅಧ್ಯಾಯ ನಾಲ್ಕರಲಿ ಕ್ಷೇತ್ರ ಕಾರ್ಯಗಳನ್ನು, ಸಂದರ್ಶನಗಳನ್ನು ನಡೆಸಿ ಗ್ರಾಮ ಪಂಚಾಯತಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ವಿಚಾರಗಳನ್ನು ಕುರಿತು, ಅವಲೋಕನ, ವಿಶ್ಲೇಷಣೆಗಳನ್ನು ಮಾಡಲಾಗುತ್ತದೆ.
5. ಕೊನೆಯ ಅಧ್ಯಾಯವು ಅಧ್ಯಯನದ ಒಟ್ಟು ಫಲಶ್ರುತಿಗಳನ್ನು ದಾಖಲಿಸುತ್ತದೆ.

ಕೊನೆ ಟಿಪ್ಪಣಿಗಳು:

ಈ ವಿಭಾಗದಲ್ಲಿ ಪ್ರಂಬಂಧದ ಪ್ರಮುಖ ಅಧ್ಯಾಯದಲ್ಲಿ ಸೇರಿಸಲಾಗದ ವಿಷಯಗಳ ಕುರಿತಾದ ಮಾಹಿತಿಯನ್ನು ನೀಡಲಾಗಿದೆ. ಈ ಸಂಶೋಧನೆಯು ಒಳಗೊಂಡಿರುವ ಚಲನಶೀಲತೆ, ಪ್ರಕ್ರಿಯೆ ಮತ್ತು ಈ ಸಂಶೋಧನೆಗೆ ಬಳಸಲಾದ ಎಲ್ಲ ಪಠ್ಯಗಳಮೂಲದ ಕುರಿತಾದ ವಿಸ್ತೃತ ಮಾಹಿತಿಯನ್ನು ನೀಡಲಾಗಿದೆ. ಇವುಗಳ ಜೊತೆಗೆ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಬಳಸಲಾದ ಸಂದರ್ಶನ ಅನುಸೂಚಿಯನ್ನು ನೀಡಲಾಗಿದೆ. ಈ ಮಾಹಿತಿಯು ಮುಂದಿನ ಸಂಶೋಧನೆಗೆ ದಾರಿ ದೀಪವಾಗುತ್ತದೆ.

ಅಧ್ಯಾಯ-4

ದತ್ತಾಂಶ ವಿಶ್ಲೇಷಣೆ

ಸೂಚನದಾರರ ವೈಯುಕ್ತಿಕ ಮಾಹಿತಿ

ಯಾವುದೇ ಒಬ್ಬ ವ್ಯಕ್ತಿ ಸಮಾಜದಿಂದ ಹೊರತಾದ ಬದುಕನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆತನ/ಅಕೆಯ ಬದುಕಿನ ಪ್ರತಿ ಹಂತದಲ್ಲೂ ಸಮಾಜ ಮತ್ತು ಸಮಾಜದಲ್ಲಿ ನೆಲೆಯೂರಿರುವ ಸಾಮಾಜಿಕ ಮೌಲ್ಯ, ಕಟ್ಟು ಕಟ್ಟಳೆ ಮತ್ತು ಸಾಮಾಜಿಕ ಸಂಸ್ಥೆಗಳ ನಡುವಿನ ಅಂತ:ಕ್ರಿಯೆಗಳು ಗಾಢವಾಗಿ ಪರಿಣಾಮ ಬೀರುವುದನ್ನು ಕಾಣಬಹುದಾಗಿ. ಅಂತಿಮವಾಗಿ ಇದು ಆಕೆಯ ಅಥವಾ ಅತನ ಒಟ್ಟು ವ್ಯಕ್ತಿತ್ವ ನಿರ್ಮಾಣ ಮಾಡುವಲ್ಲಿ ಮತ್ತು ಅವರ ಸಾಮಾಜಿಕ ಬೆರೆಯುವಿಕೆಗೆ ಮತ್ತು ಭಾಗವಹಿಸುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಅಧ್ಯಯನದಲ್ಲೂ, ಸೂಚನದಾರರ ವೈಯಕ್ತ್ಕಿಕ ಮಾಹಿತಿಯನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. ಜೊತೆಗೆ ವಿವಿಧ ಮಾಹಿತಿಗಳ ಒಳಸಂಬಧವನ್ನು ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನವನ್ನು ಮಾಡಲಾಗಿದೆ. ಸೂಚನಾದಾರರ ವೈಯುಕ್ತಿಕ ಮಾಹಿತಿ ಆಧಾರದಲ್ಲಿ ಸಂಶೋಧಕರು ಪರಸ್ಪರ ಪೂರಕ ಸಂಬಂಧವನ್ನು ಕಂಡುಕೊಂಡಂತೆ ಇವರ ವಯಸ್ಸು, ಜಾತಿ, ಶಿಕ್ಷಣ, ವೈವಾಹಿಕ ಸ್ಥಿತಿಗತಿ, ಉದ್ಯೋಗ ಹಾಗು ಆದಾಯಗಳು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಭಾಗವಹಿಸುವಿಕೆಯನ್ನು ನಿರ್ಧರಿಸುವಲ್ಲಿ ಹೆಚ್ಚಿನ ಪ್ರಭಾವವನ್ನು ಕಾಣಬಹುದು.

ಕೋಷ್ಟಕ 4.01: ಸೂಚನದಾರರ ವೈಯುಕ್ತಿಕ ಮಾಹಿತಿ

ವಯಸ್ಸು	**18-28**	**29-39**	**40-50**	**51-61**
	5 (10%)	18 (36%)	21 (42%)	6 (12%)
ಜಾತಿ	**ಪ.ಜಾತಿ**	**ಪ.ಪಂ**	**ಹಿಂ.ವರ್ಗ**	**ಸಾಮಾನ್ಯ**
	13 (26%)	10 (20%)	14 (27%)	13 (26%)
ಶಿಕ್ಷಣ	**ಅನಕ್ಷರಸ್ಥೆ**	**ಪ್ರಾಥಮಿಕ**	**ಪ್ರೌಢ**	**ಪದವಿಪೂರ್ವ**
	5 (10%)	19 (38%)	18 (36%)	8 (16%)

ವೈವಾಹಿಕ ಸ್ಥಿತಿಗತಿ	ವಿವಾಹಿತೆ	ಅವಿವಾಹಿತೆ	ವಿಚ್ಛೇದಿತೆ	ವಿಧವೆ
	37 (74%)	8 (16%)	0	5 (10%)
ಉದ್ಯೋಗ	ಕೂಲಿ	ಕೃಷಿ ಸಂಬಂಧಿ	ಸ್ವ ಉದ್ಯೋಗ	ಬೀಡಿ/ಇತರ ಕಾರ್ಮಿಕೆ
	4 (8%)	18 (36%)	8 (16%)	20 (40%)
ಆದಾಯ	**< 12000**	**13000 -23000**	**24000-34000**	**>34000**
	23 (46%)	10 (20%)	9 (18%)	8 (16%)

ವಯಸ್ಸು: ಒಟ್ಟು 50 ಸೂಚನದಾರರ ಪೈಕಿ 5(10%) ಜನ 18-28 ವಯೋಮಾನಕ್ಕೆ ಸೇರಿದವರು, 18 ಸೂಚನದಾರರು 29-39 ವಯೋ ಗುಂಪಿಗೆ ಸೇರಿದವರು, ಹೆಚ್ಚಿನ ಸೂಚನದಾರರು (21) 40-50 ರ ವಯೋ ಗುಂಪಿಗೆ ಸೇರಿದವರು, ಕಡಿಮೆ ಸಂಖ್ಯೆಯ ಅಂದರೆ 6(12%) ಸೂಚನದಾರರು 51-60 ರ ವಯೋಮಾನಕ್ಕೆ ಸೇರಿದವರಾಗಿದ್ದಾರೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಈ ಅಧ್ಯಯನವು ಹೆಚ್ಚಿನ ಸೂಚನಾದಾರರು ಮಧ್ಯಮ ವಯಸ್ಸಿನ ಗುಂಪಿಗೆ ಸೇರಿದವರೆಂದು ತಿಳಿದು ಬರುತ್ತದೆ.

ಜಾತಿ: ಸೂಚನದಾರರ ಜಾತಿವಾರು ಹಂಚಿಕೆಯ ವಿವರವನ್ನು ಗಮನಿಸಿದಾಗ 13(26%) ಜನ ಪರಿಶಿಷ್ಟ ಜಾತಿ, 10(20%) ಸೂಚನದಾರರು ಪರಿಶಿಷ್ಟ ಪಂಗಡಕ್ಕೆ, 14(28%) ಜನ ಹಿಂದುಳಿದ ವರ್ಗಕ್ಕೆ ಮತ್ತು ಉಳಿದ 13(26%) ಸೂಚನದಾರರು ಸಾಮಾನ್ಯ ವರ್ಗಕ್ಕೆ ಸೇರಿದ ಮಹಿಳೆಯರಾಗಿದ್ದಾರೆ. ಒಟ್ಟಾರೆಯಾಗಿ ಹೆಚ್ಚಿನ ಸಂಖ್ಯೆಯ ಸೂಚನದಾರರು ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳೆಯರೆಂದು ತಿಳಿದು ಬರುತ್ತದೆ.

ಶಿಕ್ಷಣ: ಶಿಕ್ಷಣವು ಅಭಿವೃದ್ಧಿ ಮತ್ತು ಭಾಗವಹಿಸುವಿಕೆಯನ್ನು ನಿರ್ಧರಿಸುವ ಪ್ರಮುಖ ಮಾನದಂಡವಾಗಿದೆ.ಈ ಸಂಶೋಧನೆಯಲ್ಲಿ ಭಾಗವಹಿಸಿದ ಸೂಚನದಾರರ ಶಿಕ್ಷಣ ಮಟ್ಟವನ್ನು ಅವಲೋಕಿಸಿದಾಗ ಒಟ್ಟು 19(38%) ಸೂಚನದಾರರು ಪ್ರಾಥಮಿಕ ಶಿಕ್ಷಣವನ್ನು ಆಂಶಿಕವಾಗಿ ಅಥವಾ ಸಂಪೂರ್ಣವಾಗಿ ಪೂರೈಸಿದವರಾಗಿರುತ್ತಾರೆ.

18(36%) ಸೂಚನದಾರರು ಪ್ರೌಢಶಾಲಾ ಶಿಕ್ಷಣವನ್ನು, 8(16%) ಜನ ಪದವಿಪೂರ್ವ ಶಿಕ್ಷಣವನ್ನು ಮತ್ತು 5 (10%) ಜನ ಸೂಚನದಾರರು ಅನಕ್ಷರಸ್ಥರೆಂದು ತಿಳಿದು ಬಂದಿದೆ.ಈ ಎಲ್ಲಾ ಅಂಕಿ ಅಂಶಗಳಿಂದ ಬಹುತೇಕ ಸೂಚನದಾರರು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಪೂರೈಸಿದವರಾಗಿದ್ದು, ಅತೀ ಕಡಿಮೆ ಸಂಖ್ಯೆಯ ಸೂಚನದಾರರು ಅನಕ್ಷರಸ್ಥರಾಗಿರುತ್ತಾರೆ.ಅನಕ್ಷರಸ್ಥರಲ್ಲಿ ಬಹುತೇಕರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಸೂಚನದಾರರಾಗಿರುತ್ತಾರೆ.

ವೈವಾಹಿಕ ಸ್ಥಿತಿಗತಿ: ಸೂಚನದಾರರಲ್ಲಿ ಬಹುತೇಕರು ಅಂದರೆ 37(74%) ವಿವಾಹಿತರು, 8(16%) ಸೂಚನದಾರರು ಅವಿವಾಹಿತರು ಮತ್ತು ಅತೀ ಕಡಿಮೆ ಸಂಖ್ಯೆಯ ಸೂಚನದಾರರು ಅಂದರೆ 5(10%) ವಿಧವೆಯರಾಗಿರುತ್ತಾರೆ. ಒಟ್ಟಾರೆಯಾಗಿ ಈ ಅಂಕಿಅಂಶಗಳನ್ನು ಗಮನಿಸಿದಾಗ ಸಂಶೋಧನೆಯಲ್ಲಿ ಭಾಗವಹಿಸಿದ ಹೆಚ್ಚಿನ ಸೂಚನದಾರರು ವಿವಾಹಿತರಾಗಿದ್ದಾರೆಂಬುದು ತಿಳಿದು ಬಂದಿದೆ.

ಉದ್ಯೋಗ: ಸೂಚನದಾರರ ಉದ್ಯೋಗದ ಮಾಹಿತಿಯನ್ನು ಅವಲೋಕಿಸಿದಾಗ 18(36%) ಸೂಚನದಾರರು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ, 20(40%) ಸೂಚನದಾರರು ದಕ್ಷಿಣಕನ್ನಡದಲ್ಲಿ ವ್ಯಾಪಕವಾಗಿರುವ ಬೀಡಿ ಮತ್ತು ಇತರೇ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಕಡಿಮೆ ಸಂಖ್ಯೆಯ ಸೂಚನದಾರರು 4(8%), 8(16%) ಕ್ರಮವಾಗಿ ಕೂಲಿ ಮತ್ತು ಸ್ವ–ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಎಲ್ಲಾ ಮಾಹಿತಿಗಳ ಪ್ರಕಾರ ಬಹುತೇಕ ಸೂಚನದಾರರು ಬೀಡಿ ಹಾಗು ಇತರೇ ಉದ್ಯೋಗದಲ್ಲಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಿದೆ.

ಆದಾಯ: ವ್ಯಕ್ತಿಯ ವೈಯುಕ್ತಿಕ ಅಥವಾ ಆಕೆಯ ಕೌಟುಂಬಿಕ ಆದಾಯ ಸಾರ್ವಜನಿಕ ಮತ್ತು ಸ್ಥಳಿಯ ಸಂಸ್ಥೆಗಳಲ್ಲಿ ಭಾಗವಹಿಸುವಿಕೆಯನ್ನು ನಿರ್ಧರಿಸುತ್ತದೆ ಎಂಬುದನ್ನು ಹಲವಾರು ಅಧ್ಯಯನಗಳು ಧೃಡಪಡಿಸಿವೆ. ಈ ಅಧ್ಯಯನದಲ್ಲಿ ಭಾಗವಹಿಸಿದ ಸೂಚನದಾರರ ಆದಾಯ ಮಟ್ಟವನ್ನು ಗಮನಿಸಿದಾಗ 23(46%) ಸೂಚನದಾರರು ಬಡತನ ರೇಖೆಗಿಂತಲೂ ಕಡಿಮೆ (<12000) ಇರುವುದು ಕಂಡುಬಂದಿದೆ, 10(20%) ಜನ

ಸೂಚನದಾರರು 13000-23000 ಆದಾಯ, 9(18%) ಸೂಚನದಾರರು 24000- 34000 ಮತ್ತು 8(16%) ಸೂಚನದಾರರು 35000 ಮತ್ತು ಅದಕ್ಕಿಂತಲೂ ಹೆಚ್ಚಿನ ಆದಾಯವನ್ನು ಹೊಂದಿರುವುದು ಈ ಸಂಶೋಧನೆಯಿಂದ ತಿಳಿದು ಬಂದಿದೆ. ಈ ಎಲ್ಲಾ ಆದಾಯದ ಮಾಹಿತಿಯನ್ನು ವಿಶ್ಲೇಷಿಸಿದಾಗ ಹೆಚ್ಚಿನ ಸಂಖ್ಯೆಯ ಸೂಚನದಾರರು ಆರ್ಥಿಕ ಬಲಾಡ್ಯತೆಯನ್ನು ಹೊಂದಿಲ್ಲವೆಂಬುದನ್ನು, ಇದು ಅವರ ಸ್ಥಳಿಯ ಸಂಸ್ಥೆಯಲ್ಲಿ ಭಾಗವಹಿಸುವಿಕೆ ಮತ್ತು ನಿರ್ಧರಣೆ ಕೈಗೊಳ್ಳುತ್ತದೆಂದು ಪ್ರಾಥಮಿಕವಾಗಿ ತಿಳಿದು ಬಂದಿದೆ.

ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಸಂವಿಧಾನಿಕ ಸವಲತ್ತುಗಳ ಅರಿವಿನ ವಿವರ

ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂದಿಸಿದಂತೆ 73ನೇ ತಿದ್ದುಪಡಿಯು ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಸಂವಿಧಾನಿಕರಿಸಿ ಸಮಾಜದ ಎಲ್ಲಾಜನರು ಸಕ್ರೀಯವಾಗಿ ಭಾಗವಹಿಸುವಂತೆ ಪ್ರೇರೆಪಿಸಿತು.ಇದು ಕೇವಲ ಸೂಚ್ಯ ಬದಲಾವಣೆಯಾಗಿರದೆ ಪ್ರತಿಯೊಬ್ಬರು ಪಂಚಾಯತ್ ರಾಜ್ ಮತ್ತು ಸಂವಿಧಾನಿಕ ಸವಲತ್ತುಗಳ ಬಗ್ಗೆ ಸಂಪೂರ್ಣ ಅರಿವು ಹೊಂದಿರುವುದು ಅಗತ್ಯವೆಂದು ತಿಳಿಸಿದೆ. ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾದ ಪ್ರತಿನಿಧಿಗಳಿಗೆ ಸಂವಿಧಾನಿಕ ಸವಲತ್ತುಗಳ ಬಗ್ಗೆ ಪರಿಪೂರ್ಣವಾದ ಮಾಹಿತಿಯಿದ್ದಾಗ ಮಾತ್ರ ತನ್ನ ಕ್ಷೇತ್ರದ ಜನರಿಗೆ ಸೂಕ್ತ ಮತ್ತು ಸಮರ್ಪಕವಾದ ಸೇವೆಯನ್ನು ಕೊಡಲು ಸಾಧ್ಯವಾಗಬಹುದಾಗಿದೆ.

ಕೋಷ್ಟಕ 4.02: ಸೂಚನದಾರರ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಸಂವಿಧಾನಿಕ ಸವಲತ್ತುಗಳ ಅರಿವಿನ ವಿವರ.

ಅಭಿಪ್ರಾಯ	ಪಂಚಾಯತ್ ರಾಜ್ ವ್ಯವಸ್ಥೆಯ ಅರಿವು	ಸಂವಿಧಾನಿಕ ಸವಲತ್ತುಗಳ ಅರಿವು	ಪಂ. ರಾಜ್ ಮತ್ತು ಸಂವಿಧಾನಿಕ ಸವಲತ್ತುಗಳ ಬಗೆಗಿನ ಅರಿವು
ಹೌದು	40 (80%)	30 (60%)	35 (70%)
ಇಲ್ಲ	10 (20%)	20 (40%)	15 (30%)
ಒಟ್ಟು	**50 (100%)**	**50 (100%)**	**50(100%)**

ಈ ಮೇಲಿನ ಕೋಷ್ಟಕದಲ್ಲಿ ಗ್ರಾಮ ಪಂಚಾಯತಗೆ ಆಯ್ಕೆಯಾದ ಮಹಿಳಾ ಪ್ರತಿನಿದಿಗಳ ಅರಿವಿನ ಮಟ್ಟವನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. ಒಟ್ಟು 50 ಸೂಚನದಾರರಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಪ್ರಶ್ನಿಸಿದಾಗ 40(80%) ಸೂಚನದಾರರು ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಾಗಿ ತಿಳಿಸಿದ್ದಾರೆ. 10(20%) ಸೂಚನದಾರರು ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಪೂರ್ಣ ಮಾಹಿತಿ ತಿಳಿದಿಲ್ಲ ಎಂದು ಅಭಿಪ್ರಾಯ ಪಟ್ಟರು. ಸೂಚನದಾರರಲ್ಲಿ ಸಂವಿಧಾನಿಕ ಸವಲತ್ತುಗಳ ಬಗ್ಗೆ ಪ್ರಶ್ನಿಸಿದಾಗ 30(60%) ಸೂಚನದಾರರು ಪೂರ್ಣ ಮಾಹಿತಿ ಇರುವುದಾಗಿ ಮತ್ತು 20(40%) ಸೂಚನದಾರರು ಪೂರ್ಣ ಮಾಹಿತಿ ತಿಳಿದಿಲ್ಲವೆಂದು ಪ್ರತಿಕ್ರಿಯಿಸಿದರು.ಈ ಎಲ್ಲಾ ಅಂಕಿಅಂಶಗಳನ್ನು ಗಮನಿಸಿದಾಗ ಆಯ್ಕೆಯಾದ ಹೆಚ್ಚಿನವರಿಗೆ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಸ್ಥಳೀಯ ಸಂಸ್ಥೆಗಳ ಬಗ್ಗೆ ಸಂವಿಧಾನಿಕ ಸವಲತ್ತುಗಳ ಮೂಲಭೂತ ಮಾಹಿತಿ ಇರುವುದೆಂದು ಕಂಡು ಬಂದಿದೆ. ಒಟ್ಟು ಮಾಹಿತಿಗಳನ್ನು ವಿಶ್ಲೇಷಿದಾಗ ಸುಮಾರು 30(70%) ರಷ್ಟು ಸೂಚನದಾರರಿಗೆ ಪಂಚಾಯತ್ ರಾಜ್ ಮತ್ತು ಸಂವಿಧಾನಿಕ ಸವಲತ್ತುಗಳು ಎರಡರ ಬಗ್ಗೆಯೂ ಪರಿಪೂರ್ಣ ಮಾಹಿತಿಯಿರುವುದು ಕಂಡು ಬಂದಿದೆ. ಉಳಿದಂತೆ, 15 ಅಂದರೆ 30% ದಷ್ಟು ಸೂಚನದಾರರಿಗೆ ಎರಡೂ ವಿಷಯಗಳ ಬಗ್ಗೆ ಮಾಹಿತಿಯಿಲ್ಲವೆಂಬುದು ಕ್ಷೇತ್ರ ಕಾರ್ಯದ ಅಂಕಿ ಅಂಶಗಳಿಂದ ತಿಳಿದುಬಂದಿದೆ.

ರಾಜಕೀಯ ಪಕ್ಷಗಳ ಜೊತೆ ಸೂಚನಾದಾರರ ಭಾಗವಹಿಸುವಿಕೆ

ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥಗೆ ಸಂವಿಧಾನಿಕ ಮಾನ್ಯತೆ ದೊರಕಿದ ನಂತರ ಸ್ಥಳೀಯ ಸಂಸ್ಥೆಗಳ ಚುನಾವಣೆ ರಾಜಕೀಯ ಪಕ್ಷಗಳ ನೇರ ಭಾಗವಹಿಸುವಿಕೆಯಿಂದ ಹೊರತಾದ ಚುನಾವಣಾ ಪ್ರಕ್ರಿಯೆಯನ್ನು ಒಳಗೊಂಡಿದೆ. ಆದಾಗ್ಯು ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರು ಒಂದಲ್ಲ ಒಂದು ಕಾರಣಕ್ಕೆ ರಾಜಕೀಯ ಪಕ್ಷಗಳ ಬೆಂಬಲದ ಮೂಲಕ ಆಯ್ಕೆಯಾಗುವುದು ಸರ್ವೆ ಸಾಮಾನ್ಯವಾಗಿದೆ.

ಕೋಷ್ಟಕ 4.03: ರಾಜಕೀಯ ಪಕ್ಷಗಳ ಜೊತೆ ಸೂಚನಾದಾರರ ಭಾಗವಹಿಸುವಿಕೆ

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	43	86%
ಇಲ್ಲ	7	14%
ಒಟ್ಟು	**50**	**100%**
ಹೌದಾದರೆ, ಯಾವ ರೀತಿಯ ನೆರವು?		
ಆರ್ಥಿಕ ನೆರವು	33	76.74%
ಚುನಾವಣಾ ಪ್ರಚಾರ/ಸಂಘಟನೆ	10	23.26%
ಒಟ್ಟು	**43**	**100%**

ಈ ಮೇಲಿನ ಕೋಷ್ಟಕದಲ್ಲಿ ಸೂಚನಾದಾರರು ಚುನಾವಣಾ ಪೂರ್ವದಲ್ಲಿ ರಾಜಕೀಯ ಪಕ್ಷಗಳ ಜೊತೆ ಹೊಂದಿದ್ದ ಸದಸ್ಯತ್ವ ಮತ್ತು ಚುನಾವಣೆಗೆ ರಾಜಕೀಯ ಪಕ್ಷಗಳಿಂದ ಪಡೆದಿರುವ ಬೆಂಬಲ ಮತ್ತು ಸಹಾಯಗಳ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಒಟ್ಟು 43(86%) ಸೂಚನದಾರರು ಚುನಾವಣಾ ಪೂರ್ವದಲ್ಲಿ ರಾಜಕೀಯ ಪಕ್ಷಗಳ ಸದಸ್ಯತ್ವ ಹೊಂದಿರುವುದಾಗಿ ಹಾಗೂ 7(14%) ಸೂಚನದಾರರು ರಾಜಕೀಯ ಪಕ್ಷಗಳ ಸದಸ್ಯತ್ವ ಹೊಂದಿಲ್ಲವೆಂದು ಅಭಿಪ್ರಾಯಪಟ್ಟರು. ಚುನಾವಣೆಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳಿಂದ ಪಡೆದ ಬೆಂಬಲ ಕುರಿತಾಗಿ ಪ್ರಶ್ನಿಸಿದಾಗ 33(76.74%) ಸೂಚನದಾರು ಆರ್ಥಿಕ ಸಹಾಯವನ್ನು ಪಡೆದಿರುವುದಾಗಿ ಉಳಿದ 10(23.26%) ಸೂಚನದಾರರು ಚುನಾವಣಾ ಪ್ರಚಾರ ಮತ್ತು ಸಂಘಟನೆಗೆ ಪೂರಕವಾದ ನೆರವನ್ನು ಪಡೆದಿರುವುದಾಗಿ ಅಭಿಪ್ರಾಯ ಪಟ್ಟರು. ಈ ಎಲ್ಲಾ ಮಾಹಿತಿಯನ್ನು ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಮುಖ್ಯವಾಹಿನಿಯಲ್ಲಿರುವ ರಾಜಕೀಯ ಪಕ್ಷಗಳ ಸಕ್ರೀಯ ಭಾಗವಹಿಸುವಿಕೆಯೊಂದಿಗೆ ನಡೆಯುತ್ತದೆ ಎಂದು ಈ ಅಧ್ಯಯನದಿಂದ ತಿಳಿದು ಬಂದಿದೆ.

ಕೋಷ್ಟಕ 4.04: ಪಂಚಾಯತ್ ಕಛೇರಿಗೆ ಸೂಚನದಾರರು ನಿತ್ಯ ಭೇಟಿ ನೀಡುವ ವಿವರ

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	15	30%
ಇಲ್ಲ	35	70%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕದಲ್ಲಿ ಮಹಿಳಾ ಪ್ರತಿನಿಧಿಗಳು ಗ್ರಾಮ ಪಂಚಾಯತ್ ಕಛೇರಿಗೆ ನಿತ್ಯ ಭೇಟಿ ನೀಡುವ ಮಾಹಿತಿಯನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. ಒಟ್ಟು 50 ಸೂಚನದಾರರಲ್ಲಿ ಪಂಚಾಯತ್ ಕಛೇರಿಗೆ ನಿತ್ಯ ಭೇಟಿ ನೀಡುವ ಕುರಿತು ಬಗ್ಗೆ ಪ್ರಶ್ನಿಸಿದಾಗ 15(30%) ಸೂಚನದಾರರು ಪಂಚಾಯತ್ ಕಛೇರಿಗೆ ನಿತ್ಯ ಭೇಟಿ ನೀಡುವುದಾಗಿ ತಿಳಿಸಿದ್ದಾರೆ. 35(70%) ಸೂಚನದಾರರು ಪಂಚಾಯತ್ ಕಛೇರಿಗೆ ಸಭೆಗಳು, ಅಗತ್ಯ ಕೆಲಸವಿದ್ದಾಗ ಮಾತ್ರವೇ ಭೇಟಿ ನೀಡುವುದಾಗಿ ತಿಳಿಸಿದರು. ಈ ಎಲ್ಲಾ ಅಂಕಿಅಂಶಗಳನ್ನು ಗಮನಿಸಿದಾಗ ಆಯ್ಕೆಯಾದ ಹೆಚ್ಚಿನವರು ಪಂಚಾಯತ್ ಕಛೇರಿಗೆ ಸಭೆ, ಸಮಾರಂಭ ಹಾಗು ಅಗತ್ಯ ಕಾರ್ಯಗಳಿದ್ದಾಗ ಮಾತ್ರವೇ ಭೇಟಿ ನೀಡುತ್ತಾರೆ ಎಂದು ಕಂಡು ಬಂದಿದೆ.

ನಿರಂತರ ಗ್ರಾಮ ಪಂಚಾಯತ್ ಸಭೆಗಳಲ್ಲಿ ಭಾಗವಹಿಸುವಿಕೆಯ ವಿವರ

ಈ ಮೊದಲು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳಿಯರ ಭಾಗವಹಿಸುವಿಕೆಯ ಬಗ್ಗೆ ನಡೆದ ಬಹುತೇಕ ಸಂಶೋಧನೆಗಳು ಆಯ್ಕೆಯಾದ ಮಹಿಳಾ ಪ್ರತಿನಿಧಿಗಳು ನಿರಂತರವಾಗಿ ಪಂಚಾಯತ್ ಸಭೆಗಳಲ್ಲಿ ಭಾಗವಹಿಸುತ್ತಿಲ್ಲವೆಂದೊ ಕಂಡು ಬಂದಿದೆ. ಇದಕ್ಕೆ ಹಲವಾರು ಕಾರಣಗಳನ್ನೂ ಗುರುತಿಸಲಾಗಿದೆ ಅವುಗಳಲ್ಲಿ ಮುಖ್ಯವಾದವುಗಳು; ಮಹಿಳೆಯರ ಬಗೆಗಿನ ಸಾಮಾಜಿಕ ತಿಳುವಳಿಕೆ, ಸಾಮಾಜಿಕ ಮೌಲ್ಯಗಳು ಮತ್ತು ಸಾಮಾಜಿಕ ನಿರ್ಬಂಧನೆಗಳು. ಆದರೆ ಮಹಿಳೆಯರು ಸಕ್ರೀಯವಾಗಿ ಗ್ರಾಮ ಸಭೆಗಳಲ್ಲಿ ಭಾಗವಹಿಸುವುದು

ಮಹಿಳಾ ಸಬಲೀಕರಣ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಅವರ ಪಾತ್ರವನ್ನು ಎತ್ತಿ ತೋರಿಸುತ್ತದೆ. ಸ್ಥಳಿಯ ಸಂಸ್ಥೆಗಳಲ್ಲಿ ಮಹಿಳೆಯರ ಸಕ್ರಿಯ ಮತ್ತು ಕ್ರಿಯಾತ್ಮಕ ಭಾಗವಹಿಸುವಿಕೆಯ ಹೊರತಾಗಿ ಮಹಿಳಾ ಸಬಲೀಕರಣವನ್ನು ಸಾಧಿಸುವುದು ಕಷ್ಟಸಾಧ್ಯವೆಂಬುದು ಸರ್ವ ವಿದಿತ. ಈ ಕೆಳಗಿನ ಅಂಕಿ ಅಂಶಗಳು ಗ್ರಾಮ ಪಂಚಾಯತ್ ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಬಗ್ಗೆ ಬೆಳಕು ಚೆಲ್ಲುತ್ತದೆ.

ಕೋಷ್ಟಕ 4.05:ಸೂಚನದಾರರು ನಿರಂತರ ಗ್ರಾಮ ಪಂಚಾಯತ್ ಸಭೆಗಳಲ್ಲಿ ಭಾಗವಹಿಸುವಿಕೆಯು ವಿವರ

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	32	64
ಇಲ್ಲ	18	36
ಒಟ್ಟು	**50**	**100%**

ಈ ಮೇಲಿನ ಕೋಷ್ಟಕದಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳು ಗ್ರಾಮ ಪಂಚಾಯತದ ಸಭೆಗಳಲ್ಲಿ ನಿರಂತರ ಭಾಗವಹಿಸುವಿಕೆಯ ಮಾಹಿತಿಯನ್ನು ಕ್ರೋಡಿಕರಿಸಿ ವಿಶ್ಲೇಷಿಸಲಾಗಿದೆ. ಒಟ್ಟು ಸೂಚನದಾರರಲ್ಲಿ 32(64%) ಜನ ನಿರಂತರವಾಗಿ ಗ್ರಾಮ ಪಂಚಾಯತದ ಸಭೆಗಳಲ್ಲಿ ಅಂದರೆ ಸಾಮಾನ್ಯ ಸಭೆ, ವಿಶೇಷ ಸಭೆ, ವಾರ್ಡ ಸಭೆ, ಗ್ರಾಮ ಸಭೆಗಳಲ್ಲಿ ಭಾಗವಹಿಸುವುದಾಗಿ ವಿವರವನ್ನು ನೀಡಿರುತ್ತಾರೆ. 18(36%) ಸೂಚನದಾರರು ನಿರಂತರವಾಗಿ ಸಭೆಗಳಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ ಎಂದು ತಿಳಿಸಿದರು.ಈ ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ ಆಯ್ಕೆಯಾದ ಹೆಚ್ಚಿನ ಮಹಿಳಾ ಸದಸ್ಯರು ಸಾಮಾನ್ಯ ಸಭೆ, ವಿಶೇಷ ಸಭೆ, ವಾರ್ಡ ಸಭೆ, ಗ್ರಾಮ ಸಭೆಗಳಲ್ಲಿ ನಿರಂತರವಾಗಿ ಭಾಗವಹಿಸುವುದಾಗಿ ಕಂಡು ಬಂದಿದೆ.

ಪಂಚಾಯತ್ ಸಭೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವಿಕೆಯ ವಿವರ

1993 ರಲ್ಲಿ ಸಂವಿಧಾನದ 73ನೇ ತಿದ್ದುಪಡಿಯ ಅನುಷ್ಠಾನಕ್ಕೆ ಬಂದು, ಮಹಿಳೆಯರಿಗೆ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಒದಗಿಸಿದೆ. ಚುನಾಯಿತ ಮಹಿಳಾ ಪ್ರತಿನಿಧಿಗಳ ಕ್ರಿಯಾತ್ಮಕ ಭಾಗವಹಿಸುವಿಕೆಯು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮಹತ್ತರ ಪಾತ್ರ ಪಡೆಯುತ್ತದೆ.

ಕೋಷ್ಟಕ 4.06: ಪಂಚಾಯತ್ ಸಭೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವಿಕೆಯ ವಿವರ

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	21	42%
ಇಲ್ಲ	29	58%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕದಲ್ಲಿ ಮಹಿಳಾ ಪ್ರತಿನಿಧಿಗಳು ಗ್ರಾಮ ಪಂಚಾಯತದ ಸಭೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವಿಕೆಯನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. 50 ಜನ ಸೂಚನದಾರರಲ್ಲಿ 21(42%) ಜನ ಸಾಮಾನ್ಯ ಸಭೆ, ವಿಶೇಷ ಸಭೆ, ವಾರ್ಡ ಸಭೆ, ಗ್ರಾಮ ಸಭೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುತ್ತಾರೆಂದು ಮಾಹಿತಿಯನ್ನು ನೀಡಿರುತ್ತಾರೆ ಹಾಗೂ 29(58%) ಸೂಚನಾದಾರರು ಕ್ರಿಯಾತ್ಮಕವಾಗಿ ಸಭೆಗಳಲ್ಲಿ ಭಾಗವಹಿಸುತ್ತಿಲ್ಲವೆಂದು ತಿಳಿಸಿದ್ದಾರೆ. ಈ ಎಲ್ಲಾ ಅಂಕಿ-ಅಂಶಗಳನ್ನು ಗಮನಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳಿಗೆ ಗ್ರಾಮ ಪಂಚಾಯತ್ ಸಭೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಲು ಶಿಕ್ಷಣ, ನಿರಂತರ ತರಭೇತಿ, ಪುರುಷ ಹಾಗು ಸಹ ಮಹಿಳಾ ಸದಸ್ಯರ ಪ್ರೋತ್ಸಾಹ ಸಿಗದೇ ಇರುವುದು ಕಾರಣವೆಂದು ತಿಳಿದು ಬರುತ್ತದೆ. ಈ ಅಂಕಿ ಅಂಶಗಳ ಸಾಮಾಜಿಕ ಆಯಾಮಗಳನ್ನು ಗಮನಿಸಿದಾಗ ಸಂವಿಧಾನಿಕ ಸವಲತ್ತು ಮತ್ತು ಬೆಂಬಲಗಳ ಹೊರತಾಗಿಯೂ ಮಹಿಳೆಯು ಸಾಮಾಜಿಕವಾಗಿ ಬಂಧಿಯಾಗಿದ್ದಾಳೆಯೆನ್ನಬಹುದು. ಶಿಕ್ಷಣ ಮತ್ತು

ತರಬೇತಿಯ ಕೊರತೆ ಒಂದು ಕಡೆಯಾದರೆ ಸಾಮಾಜಿಕ ಮೌಲ್ಯ ಮತ್ತು ಕಟ್ಟುಪಾಡುಗಳು ಅವಳನ್ನು ಯಥೇಚ್ಛವಾಗಿ ಶೋಶಿಸುತ್ತವೆಯೆನ್ನ ಬಹುದು.

ಮಹಿಳಾ ಮೀಸಲಾತಿಯ ಬಗ್ಗೆ ಅರಿವಿನ ವಿವರ.

ಭಾರತದಲ್ಲಿ ಮಹಿಳಾ ಮೀಸಲಾತಿ ಒಂದು ಚರ್ಚೆಯ ವಿಷಯವಾಗಿದ್ದು, ವಿವಿಧ ರಾಜಕೀಯ ಪಕ್ಷಗಳು ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿ ಮಾಡುವಲ್ಲಿ ಮೀನಮೇಷ ಎಣಿಸುತ್ತಿವೆ. ಆದರೂ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33, ಆದರಲ್ಲೂ ವಿಶೇಷವಾಗಿ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕರ್ನಾಟಕ ಶೇ.50 ಮೀಸಲಾತಿಯನ್ನು ನೀಡಿದೆ.

ಕೋಷ್ಟಕ 4.07: ಸೂಚನದಾರರಿಗೆ ಮಹಿಳಾ ಮೀಸಲಾತಿಯ ಬಗ್ಗೆ ಅರಿವಿನ ವಿವರ.

ಅಭಿಪ್ರಾಯ	**ಸೂಚನದಾರರು**	**ಶೇಕಡವಾರು**
ಹೌದು	33	66%
ಇಲ್ಲ	17	34%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕದಲ್ಲಿ ಸೂಚನಾದಾರರಿಗೆ ಸಂವಿಧಾನದಲ್ಲಿ ನೀಡಿರುವ ಮಹಿಳಾ ಮೀಸಲಾತಿಯ ಬಗ್ಗೆ ಇರುವ ಅರಿವನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. ಒಟ್ಟು 50 ಸೂಚನಾದಾರರಲ್ಲಿ 33(66%) ಮಹಿಳಾ ಪ್ರತಿನಿಧಿಗಳಿಗೆ ಸಂವಿಧಾನವು ನೀಡಿರುವ ಮಹಿಳಾ ಮೀಸಲಾತಿಯ ಹೆಚ್ಚಿನ ಮಾಹಿತಿ ಇರುವುದಾಗಿ ತಿಳಿದು ಬರುತ್ತದೆ. 17(34%) ಸೂಚನಾದಾರರಿಗೆ ಸಮರ್ಪಕ ಮಾಹಿತಿ ಇರುವುದಿಲ್ಲ ಎಂದು ತಿಳಿಯುತ್ತದೆ. ಈ ಎಲ್ಲಾ

ಅಂಕಿಅಂಶಗಳನ್ನು ಗಮನಿಸಿದಾಗ ಹೆಚ್ಚಿನ ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಸಂವಿಧಾನಿಕ ಮಹಿಳಾ ಮೀಸಲಾತಿಯ ಬಗ್ಗೆ ಸಮರ್ಪಕವಾದ ಮಾಹಿತಿಯಿರುವುದು ಕಂಡುಬರುತ್ತದೆ, ಇದಕ್ಕೆ ಕಾರಣ ಸ್ಥಳೀಯ ರಾಜಕೀಯ ಪಕ್ಷಗಳು, ಸಂಘ–ಸಂಸ್ಥೆಗಳು, ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳಿಗೆ ನೀಡುವ ತರಭೇತಿ ಕಾರ್ಯಕ್ರಮಗಳು.

ಸೂಚನದಾರರ ಪಂಚಾಯತ್ ಸಭೆಯಲ್ಲಿ ಭಾಗವಹಿಸುವಿಕೆಯನ್ನು ಸಮರ್ಥಿಸುವಿಕೆಯ ವಿವರ

ಗ್ರಾಮೀಣಾಭಿವೃದ್ಧಿ ಮತ್ತು ಮಹಿಳಾ ಸಬಲೀಕರಣವು ಮಹಿಳೆಯರ ಗುಣಮಟ್ಟದ ಭಾಗವಹಿಸುವಿಕೆಯನ್ನು ಅವಲಂಬಿಸಿದೆ, ಮಹಿಳಾ ಪ್ರತಿನಿಧಿಗಳು ಸೂಚ್ಯವಾಗಿ ಗ್ರಾಮ ಪಂಚಾಯತ್‌ಗಳಲ್ಲಿ ಭಾಗವಹಿಸದೆ, ಮಹಿಳೆಯರ ಅಭಿವೃದ್ಧಿ ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿದೆ.

ಕೋಷ್ಟಕ 4.08: ಸೂಚನದಾರರು ಪಂಚಾಯತ್ ಸಭೆಯಲ್ಲಿ ಭಾಗವಹಿಸುವಿಕೆಯನ್ನು ಸಮರ್ಥಿಸುವ ವಿವರ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಅತ್ಯತ್ತಮ	8	16%)
ಉತ್ತಮ	13	26%)
ಸಾಧಾರಣ	29	58%)
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಮಹಿಳಾ ಪ್ರತಿನಿಧಿಗಳು ಗ್ರಾಮ ಪಂಚಾಯತ್ ಸಭೆಗಳಲ್ಲಿ ಭಾಗವಹಿಸುವಿಕೆಯನ್ನು ಸಮರ್ಥಿಸುವ ವಿವರವನ್ನು ಕ್ರೋಡಿಕರಿಸಿ ವಿಶ್ಲೇಷಿಸುತ್ತದೆ. ಒಟ್ಟು 50 ಸೂಚನಾದಾರರಲ್ಲಿ 29(58%) ಜನ

ಸಾಧಾರಣಾ ಭಾಗವಹಿಸುವಿಕೆಯನ್ನು, 13(26%) ಜನ ಉತ್ತಮವಾಗಿ ಭಾಗವಹಿಸುವುದಾಗಿ ಮತ್ತು 8(16%) ಜನ ಅತ್ಯುತ್ತಮವಾಗಿ ಪಂಚಾಯತ್ ಸಭೆಗಳಲ್ಲಿ ಭಾಗವಹಿಸುವುದಾಗಿ ಸಮರ್ಥಿಸಿಕೊಂಡಿದ್ದಾರೆ. ಈ ಎಲ್ಲಾ ಅಂಕಿ-ಅಂಶಗಳಿಂದ ತಿಳಿದು ಬರುವುದೇನೆಂದರೆ, ನಿರಂತರ ಶಿಕ್ಷಣ, ತರಬೇತಿ ಹಾಗೂ ಸಹ ಸದಸ್ಯರ ಪ್ರೋತ್ಸಾಹದಿಂದ ಮಹಿಳಾ ಪ್ರತಿನಿಧಿಗಳು ಪಂಚಾಯತ್ ಸಭೆಗಳಲ್ಲಿ ಸಮರ್ಪಕವಾಗಿ ಭಾಗವಹಿಸಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಮತ್ತು ಕ್ರಿಯಾಯೋಜನೆಗಳನ್ನು ತಯಾರಿಸಲು ಸಾಧ್ಯ.

ಪಂಚಾಯತ್ ಕಾರ್ಯ ಕಲಾಪಗಳಲ್ಲಿ ಎದುರಾಗುವ ಲಿಂಗ ಮತ್ತು ಜಾತಿ ತೊಡಕುಗಳ ವಿವರ

ಸ್ವತಂತ್ರ ನಂತರ ಭಾರತದಲ್ಲಿ ಸ್ತ್ರೀ ಪುರುಷರ ನಡುವಿನ ಅಂತರ ಕಡಿಮೆ ಮಾಡಲು ಬಹಳಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳು ಅನುಷ್ಠಾನಗೊಳಿಸಿವೆ. ಆದರೂ, ಸಾಮಾಜಿಕ ದೃಷ್ಟಿಕೋನದಲ್ಲಿ ಲಿಂಗ ಮತ್ತು ಜಾತಿ ನಡುವಿನ ಅಂತರವು ದಿನದಿಂದ ದಿನಕ್ಕೆ ವಿಸ್ತೃತಗೊಳ್ಳುತ್ತಿದೆ. ಅಂತಿಮವಾಗಿ ಅದು ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಮತ್ತು ನಿರ್ಧಾರ ಕೈಗೊಳ್ಳುವ ಮೇಲೆ ನಕಾರಾತ್ಮಕವಾಗಿ ಪರಿಣಾಮ ಬೀರುವ ಸಾಧ್ಯತೆ ಇದೆ. ಈ ಕೆಳಗಿನ ಅಂಕಿ ಅಂಶಗಳು ಮಹಿಳಾ ಪ್ರತಿನಿಧಿಗಳು ಪಂಚಾಯತ್ ಕಾರ್ಯ ಕಲಾಪಗಳಲ್ಲಿ ಭಾಗವಹಿಸುವಾಗ ಎದುರಾಗುವ ತೊಡಕುಗಳ ಬಗ್ಗೆ ವಿಮರ್ಶೆ ನಡೆಸಿದೆ.

ಕೋಷ್ಟಕ 4.09: ಸೂಚನದಾರರು ಪಂಚಾಯತದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಲ್ಲಿ ಲಿಂಗ ಮತ್ತು ಜಾತಿ ಅಡ್ಡಿ ಮಾಡುವ ಬಗ್ಗೆ ವಿವರ

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	34	68%
ಇಲ್ಲ	16	32%
ಒಟ್ಟು	**50**	**100%**

ಲಿಂಗ ಮತ್ತು ಜಾತಿ ಆಧಾರದಲ್ಲಿ ಅಭಿಪ್ರಾಯ		
ಲಿಂಗ	8	23%
ಜಾತಿ	6	18%
ಎರಡೂ	20	59%
ಒಟ್ಟು	**23**	**100%**

ಈ ಮೇಲಿನ ಕೋಷ್ಟಕವು ಸೂಚನಾದಾರರು ಪಂಚಾಯತ್ ಕಾರ್ಯಕಲಾಪಗಳಲ್ಲಿ ಭಾಗವಹಿಸುವಲ್ಲಿ ಲಿಂಗ ಮತ್ತು ಜಾತಿ ಅಡ್ಡಿ ಮಾಡುವ ಬಗ್ಗೆ ವಿವರ ಕ್ರೋಡಿಕರಿಸಿ ವಿಶ್ಲೇಷಿಸಲಾಗಿದೆ. ಒಟ್ಟು 50 ಸೂಚನಾದಾರರಲ್ಲಿ 34(68%) ಜನ ಗ್ರಾಮ ಪಂಚಾಯತದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಲ್ಲಿ ಲಿಂಗ ಮತ್ತು ಜಾತಿ ಅಡ್ಡಿಯಾಗುತ್ತದೆಂದು ತಿಳಿಸಿದ್ದಾರೆ. 16(32%) ಸೂಚನಾದಾರರು ಲಿಂಗ ಮತ್ತು ಜಾತಿಯು ಪಂಚಾಯತ್ ಕಾರ್ಯ-ಕಲಾಪಗಳಲ್ಲಿ ಭಾಗವಹಿಸುವಲ್ಲಿ ಅಡ್ಡಿಯಾಗುವುದಿಲ್ಲವೆಂದು ಅಭಿಪ್ರಾಯಪಟ್ಟರು. ಲಿಂಗ ಮತ್ತು ಜಾತಿಯ ಆಧಾರದಲ್ಲಿ ಅಡ್ಡಿಯಾಗುವ ಕುರಿತು ಪ್ರಶ್ನಿಸಿದಾಗ 20(59%) ಸೂಚನಾದಾರರು ಲಿಂಗ ಮತ್ತು ಜಾತಿಗಳೆರಡೂ ಎಂದು, 8(23%) ಜನ ಕೇವಲ ಲಿಂಗ ಆಧಾರಿತ ಅಡ್ಡಿಯಾಗುವುದೆಂದು ಮತ್ತು 6(18%) ಜನ ಕೇವಲ ಜಾತಿ ಮಾತ್ರವೇ ಪಂಚಾಯತ್ ಕಾರ್ಯ-ಕಲಾಪಗಳಲ್ಲಿ ಭಾಗವಹಿಸುವಿಕೆಯಲ್ಲಿ ಅಡ್ಡಿಯಾಗುತ್ತದೆಂದು ಅಭಿಪ್ರಾಯ ಪಟ್ಟರು. ಈ ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪುರುಷ ಪ್ರಾಬಲ್ಯ ಇನ್ನು ಕಂಡು ಬರುತ್ತದೆ, ಜೊತೆಗೆ ಜಾತಿ ವ್ಯವಸ್ಥೆಯು ಗ್ರಾಮೀಣ ಭಾಗಗಳಲ್ಲಿ ಇನ್ನೂ ಉಳಿದು ಕೊಂಡಿದೆಯೆಂದು ಕಂಡುಬರುತ್ತದೆ.

ನಾಯಕತ್ವ ಬಗ್ಗೆ ಚುನಾಯಿತ ಮಹಿಳಾ ಜನಪ್ರತಿನಿಧಿಗಳ ನಿಲುವು

ನಾಯಕತ್ವ ಗುಣದಿಂದ ಜನಪ್ರತಿನಿಧಿಯಾಗಿ ಆಯ್ಕೆಯಾಗಲು ಸಾಧ್ಯ. ತಾವು ಆಯ್ಕೆಯಾಗಲು ಬಯಸುವ ವಾರ್ಡುಗಳಲ್ಲಿ ಜನರೊಂದಿಗಿನ ಒಡನಾಟ, ಸಂಪರ್ಕ, ತಮ್ಮ ರಾಜಕೀಯ ನಿಲುವು ಹಾಗು ಜಾತಿ ಈ ಅಂಶಗಳು ನಾಯಕತ್ವ ಗುಣದ ಮೇಲೆ ಪ್ರಭಾವ ಬೀರಿದೆ ಎನ್ನಬಹುದು.

ಕೋಷ್ಟಕ 4.10: ನಾಯಕತ್ವ ಬಗ್ಗೆ ಚುನಾಯಿತ ಮಹಿಳಾ ಜನಪ್ರತಿನಿಧಿಗಳ ನಿಲುವು

ನಾಯಕತ್ವ ಬಗ್ಗೆ ಪರಿಕಲ್ಪನೆ	ಜನ-ಪ್ರತಿನಿಧಿಗಳ ನಿಲುವು	ಶೇಕಡವಾರು
ಜನ ಸಂಘಟಿಸುವ ಶಕ್ತಿ	10	20%
ಜನರ ಹಿತಾಸಕ್ತಿಯನ್ನು ರಕ್ಷಿಸುವುದು	14	28%
ವಿಚಾರಧಾರೆಯನ್ನು ಬೆಳೆಸುವ ಸಾಮರ್ಥ್ಯ	08	16%
ಜನರ ಬೇಡಿಕೆಗಳನ್ನು ಈಡೇರಿಸುವ ಸಾಮರ್ಥ್ಯ	18	36%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ತಿಳಿಸಿದಂತೆ 50 ಸೂಚನದಾರರಲ್ಲಿ 18(36%) ಮಂದಿ ಜನರ ಬೇಡಿಕೆಗಳನ್ನು ಈಡೇರಿಸುವ ಸಾಮರ್ಥ್ಯವೇ ನಾಯಕತ್ವ ಗುಣವೆಂದು ತಿಳಿಯಪಡಿಸಿದ್ದಾರೆ. 14(28%) ಮಂದಿ ನಾಯಕತ್ವ ಗುಣವೆಂದರೆ ಜನರ ಹಿತಾಸಕ್ತಿಯನ್ನು ರಕ್ಷಿಸುವುದು ಎಂದು, ಕೇವಲ 10(20%) ಮಂದಿ ಜನ ಸಂಘಟಿಸುವ ಶಕ್ತಿಯೇ ನಾಯಕತ್ವ ಗುಣವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಂತಿಮವಾಗಿ ಜನರ ಬೇಡಿಕೆಗಳನ್ನು ಪೂರೈಸಿದರೆ ಮಾತ್ರ ಮುಂದಿನ ಚುನಾವಣೆಯಲ್ಲಿ ಜಯಿಸಲು ಸಾಧ್ಯವೆಂದು ಮನಗಂಡಿದ್ದಾರೆ ಎಂದು ತಿಳಿಯಬಹುದು.

ಗುಂಪು/ಸಂಘಗಳಲ್ಲಿ ಅಧ್ಯಕ್ಷ ಹುದ್ದೆ ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ

ಹೆಚ್ಚಿನ ಚುನಾಯಿತ ಮಹಿಳಾ ಜನಪ್ರತಿನಿಧಿಗಳಿಗೆ ತಮ್ಮ ಗ್ರಾಮದ ಅಧ್ಯಕ್ಷ ಪದವಿ ಮೇಲೆ ಆಸಕ್ತಿ ಹೊಂದಿರುತ್ತಾರೆ ಎಂದರೆ ತಪ್ಪಾಗಲಾರದು. ಉನ್ನತ ಪದವಿ ಬಗ್ಗೆ ಒಲವು, ತರಬೇತಿಗಳು ಹಾಗೂ ಗುಂಪು/ಸಂಘಗಳಲ್ಲಿ ಅಧ್ಯಕ್ಷ ಹುದ್ದೆ ನಿಭಾಯಿಸಿರುವ ಧೈರ್ಯ ಈ ಆಸಕ್ತಿಗೆ ಬೆಳೆಯಲು ಕಾರಣ ಎನ್ನಬಹುದು.

ಕೋಷ್ಟಕ 4.11: ಗುಂಪು/ಸಂಘಗಳಲ್ಲಿ ಅಧ್ಯಕ್ಷ ಹುದ್ದೆ ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ

ಗುಂಪು/ಸಂಘಗಳಲ್ಲಿ ಅಧ್ಯಕ್ಷ ಹುದ್ದೆ	ಗ್ರಾಮ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ		
	ಹೌದು	ಇಲ್ಲ	ಒಟ್ಟು
ಹೌದು	16(32%)	2(04%)	18(36%)
ಇಲ್ಲ	28(56%)	4(08%)	32(64%)
ಒಟ್ಟು	**44(88%)**	**6(12%)**	**50 (100%)**

ಈ ಮೇಲಿನ ಕೋಷ್ಟಕವು ತಿಳಿಸಿದಂತೆ 50 ಸೂಚನದಾರರಲ್ಲಿ ಹೆಚ್ಚಿನ 32(64%) ಮಂದಿ ತಾವು ಯಾವುದೇ ಗುಂಪು/ಸಂಘಗಳಲ್ಲಿ ಅಧ್ಯಕ್ಷ ಹುದ್ದೆ ಹೊಂದಿಲ್ಲವೆಂದು ಹೇಳಿಕೊಂಡಿದ್ದಾರೆ. ಇವರಲ್ಲಿ ಕೇವಲ 4(08%) ಮಂದಿ ಮಾತ್ರ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಇಲ್ಲ ಎಂದು ಹೇಳಿಕೊಂಡಿದ್ದಾರೆ. ಆದರೆ 28(56%) ಮಂದಿ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಹೊಂದಿದ್ದಾರೆ. ಆದರೆ 18(36%) ಮಂದಿ ಗುಂಪು/ಸಂಘಗಳಲ್ಲಿ ಅಧ್ಯಕ್ಷ ಹುದ್ದೆ ಹೊಂದಿರುವುದಾಗಿ ಹೇಳಿಕೊಂಡಿದ್ದಾರೆ. ಇವರಲ್ಲಿ ಕೇವಲ ಇಬ್ಬರಿಗೆ ಮಾತ್ರ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಇಲ್ಲ. ಗ್ರಾಮ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಬಗ್ಗೆ ಸೂಚನದಾರರಲ್ಲಿ ಕೇಳಿ ಕೊಂಡಾಗ ಬಹುಭಾಗ 44(88%) ಮಂದಿ ತಾವು ಗ್ರಾಮ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಹೊಂದಿರುವುದಾಗಿ ಹಾಗೂ ಕೇವಲ 6(12%) ಸೂಚನದಾರರು ತಮಗೆ ಗ್ರಾಮ

ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಹೊಂದಿಲ್ಲವೆಂದು ಹೇಳಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಬೆಳೆಯುತ್ತಿರುವ ಸ್ವ-ಸಹಾಯ ಗುಂಪು/ಸಂಘಗಳಿಂದ ಮಹಿಳೆಯರಲ್ಲಿ ಜಾಗೃತಿ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಿಂದ ದೊರೆಯುವ ತರಬೇತಿಯು ಇವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದೆ ಎನ್ನಬಹುದು. ಪಂಚಾಯತ್ ರಾಜ್ ಸಂಸ್ಥೆ ತರಬೇತಿಗಳಲ್ಲಿ ಭಾಗವಹಿಸುವಿಕೆಯಲ್ಲಿ ಹಾಜರಾತಿ ಹಾಗೂ ತರಬೇತಿಯ ಉಪಯುಕ್ತತೆ ಬಗ್ಗೆ ತರಬೇತಿಯು ಚುನಾಯಿತ ಮಹಿಳಾ ಜನಪ್ರತಿನಿಧಿಗಳ ಸಾಮರ್ಥ್ಯ ಹಾಗೂ ನಾಯಕತ್ವ ಬೆಳವಣಿಗೆಗೆ ಅವಶ್ಯಕ ಎಂದು ತೀರ್ಮಾನಿಸಬಹುದು.

ಅಧಿಕಾರ ಚಲಾಯಿಸುವಲ್ಲಿ ಸೂಚನಾದಾರರಿಗೆ ಸಹ ಸದಸ್ಯರ ಸಹಕಾರದ ವಿವರ

ಕೋಷ್ಟಕ 4.12: ಅಧಿಕಾರ ಚಲಾಯಿಸುವಲ್ಲಿ ಸೂಚನಾದಾರರಿಗೆ ಸಹ ಸದಸ್ಯರ ಸಹಕಾರದ ವಿವರ.

ಅಭಿಪ್ರಾಯ	ಸೂಚನದಾರರು	ಅಭಿಪ್ರಾಯ
ಹೌದು	20	40%
ಇಲ್ಲ	30	60%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಚುನಾಯಿತ ಮಹಿಳಾ ಸದಸ್ಯರು ಅಧಿಕಾರವನ್ನು ಚಲಾಯಿಸುವಲ್ಲಿ ಸಹ ಸದಸ್ಯರ ಸಹಕಾರದ ವಿವರವನ್ನು ಕ್ರೋಢಿಕರಿಸಿ ವಿಶ್ಲೇಷಿಸಿದೆ. 50 ಸೂಚನಾದಾರರಲ್ಲಿ 30(60%) ಜನ ಸಹ ಸದಸ್ಯರ ಸಹಕಾರ ಕಡಿಮೆ ಎಂದೂ, 20(40%) ಜನ ಸಹ ಸದಸ್ಯರ ಸಹಕಾರ ಇದೆ ಎಂದೂ ತಿಳಿಸಿದ್ದಾರೆ. ಈ ಎಲ್ಲಾ ಅಂಕಿಅಂಶಗಳಿಂದ ತಿಳಿಯುವುದೇನೆಂದರೆ, ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಂವಿಧಾನ ಕ್ರಮ ಕೈಗೊಂಡರು, ಸಮಾಜದ ಪ್ರಾಬಲ್ಯ ಗುಂಪು ಸಹಕಾರವನ್ನು ನೀಡದಿರುವುದು ಕಂಡು ಬರುತ್ತದೆ.

ಪಂಚಾಯತ್ ರಾಜ್‌ಸಂಸ್ಥೆ ತರಬೇತಿಗಳಲ್ಲಿ ಭಾಗವಹಿಸುವಿಕೆಯಲ್ಲಿ ಹಾಜರಾತಿ ಹಾಗೂ ತರಬೇತಿಯ ಉಪಯುಕ್ತತೆ ಬಗ್ಗೆ:

ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯಭಿವೃದ್ಧಿಗಾಗಿ ಕಾಲನುಕಾಲಕ್ಕೆ ಕೇಂದ್ರ ಗ್ರಾಮೀಣಾಭಿವೃದ್ಧಿ ತರಭೇತಿ ಸಂಸ್ಥೆಗಳ ಹಾಗೂ ರಾಜ್ಯ ಗ್ರಾಮೀಣಾಭಿವೃದ್ಧಿ ತರಭೇತಿ ಸಂಸ್ಥೆಗಳ ಮೂಲಕ ತರಭೇತಿ ಹಾಗು ಕಾರ್ಯಗಾರಗಳನ್ನು ಆಯೋಜಿಸುತ್ತವೆ.

ಕೋಷ್ಟಕ 4.13: ಪಂಚಾಯತ್‌ರಾಜ್ ಸಂಸ್ಥೆ ತರಬೇತಿಗಳಲ್ಲಿ ಭಾಗವಹಿಸುವಿಕೆಯಲ್ಲಿ ಹಾಜರಾತಿ ಹಾಗೂ ತರಬೇತಿಯ ಉಪಯುಕ್ತತೆ ಬಗ್ಗೆ.

ತರಬೇತಿಗಳಲ್ಲಿ ಭಾಗವಹಿಸುವಿಕೆ	ತರಬೇತಿಯ ಉಪಯುಕ್ತತೆ		
	ಹೌದು	ಇಲ್ಲ	ಒಟ್ಟು
ಪೂರ್ಣ	34(68%)	1(2%)	35 (70%)
ಭಾಗಶಃ	09(18%)	6(12%)	15 (30%)
ಒಟ್ಟು	**43(86%)**	**7(14%)**	**50 (100%)**

ಈ ಮೇಲಿನ ಕೋಷ್ಟಕವು ಪಂಚಾಯತ್ ರಾಜ್‌ಸಂಸ್ಥೆ ತರಬೇತಿಗಳಲ್ಲಿ ಭಾಗವಹಿಸುವಿಕೆಯಲ್ಲಿ ಹಾಜರಾತಿ ಹಾಗೂ ತರಬೇತಿಯ ಉಪಯುಕ್ತತೆ ಬಗ್ಗೆ ನಡುವೆ ಸಂಬಂಧ ಕಲ್ಪಿಸಲಾಗಿದೆ. 50 ಸೂಚನದಾರರಲ್ಲಿ ಹೆಚ್ಚಿನ 35(70%) ಮಂದಿ ಪೂರ್ಣವಧಿ ತರಭೇತಿ ಯನ್ನು ಪಡೆದಿರುತ್ತಾರೆ, ಇವರಲ್ಲಿ 34(68%) ಮಂದಿ ತರಬೇತಿಯ ಉಪಯುಕ್ತವಾಗಿದೆ ಎಂದು ಹೇಳಿದ್ದಾರೆ. ಆದರೆ ಕೇವಲ 01(2%) ರಿಗೆ ಮಾತ್ರ ತರಬೇತಿಯ ಉಪಯುಕ್ತತೆ ಬಗ್ಗೆ ನಂಬಿಕೆ ವ್ಯಕ್ತಪಡಿಸಿಲ್ಲ. ಭಾಗಶಃ ತರಬೇತಿಗಳಲ್ಲಿ ಭಾಗವಹಿಸಿದ ಚುನಾಯಿತ ಮಹಿಳಾ ಜನಪ್ರತಿನಿಧಿಗಳಲ್ಲಿ 15(30%) ಮಂದಿ ಸೂಚನದಾರರು ಭಾಗಶಃ ತರಭೇತಿ ಯನ್ನು ಪಡೆದಿರುತ್ತಾರೆ, ಇವರಲ್ಲಿ 09(18%) ಮಂದಿ ಸೂಚನದಾರರು ತರಬೇತಿಯ ಉಪಯುಕ್ತವಾಗಿದೆ ಎಂದು, 6(12%) ಮಂದಿ

ತರಬೇತಿಯ ಉಪಯುಕ್ತವಾಗಿಲ್ಲ ಎಂದು ಹೇಳಿರುತ್ತಾರೆ. ಪಂಚಾಯತ್ ರಾಜ್‌ಸಂಸ್ಥೆಗಳ ತರಬೇತಿಗಳಲ್ಲಿ ಭಾಗವಹಿಸುವಿಕೆಯ ಆಸಕ್ತಿಯು, ಅದರ ಉಪಯುಕ್ತತೆಯ ಬಗ್ಗೆ ಪ್ರಭಾವ ಬೀರಿದೆ ಎಂದು ತೀರ್ಮಾನಿಸಬಹುದು.

ಚುನಾಯಿತದಾರ ನಂತರ ಕುಟುಂಬದ ಸಹಕಾರದ ವಿವರ:

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬವು ಒಂದು ಮೂಲಭೂತ ಸಂಸ್ಥೆಯಾಗಿದೆ.ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯು ಕುಟುಂಬದ ಸಹಕಾರದಿಂದ ಹೊರತಾಗಿಲ್ಲ. ಸಹಕಾರವು ಕೇವಲ ಆರ್ಥಿಕ ಬೆಂಬಲವಲ್ಲದೆ ನೈತಿಕ ಬೆಂಬಲವು ಒಳಗೊಂಡಿದೆ.

ಕೋಷ್ಟಕ 4.14: ಸೂಚನಾದಾರರ ಚುನಾಯಿತದಾರ ನಂತರ ಕುಟುಂಬದ ಸಹಕಾರದ ವಿವರ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ರಾಜಕೀಯ ಸಹಾಯ	18	36%
ಆರ್ಥಿಕ ಸಹಾಯ	15	30%
ನೈತಿಕ ಬೆಂಬಲ	17	34%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಮಹಿಳೆಯರು ಪಂಚಾಯತ್ ಪ್ರತಿನಿಧಿಗಳಾಗಿ ಚುನಾಯಿತರಾದ ನಂತರ ಕುಟುಂಬದ ಸದಸ್ಯರ ಸಹಕಾರದ ಬಗೆಗಿನ ವಿವರವನ್ನು ಕ್ರೋಢೀಕರಿಸಿ ವಿಶ್ಲೇಷಿಸುತ್ತದೆ. 50 ಚುನಾಯಿತ ಮಹಿಳಾ ಪ್ರತಿನಿಧಿಗಳಲ್ಲಿ, 18(36%) ಚುನಾಯಿತ ಮಹಿಳೆಯರು ಕುಟುಂಬದ ಸದಸ್ಯರು ರಾಜಕೀಯ ವಿಷಯಗಳಲ್ಲಿ ಸಹಾಯವನ್ನು, 17(34%) ಜನ ಕುಟುಂಬದವರು ನೈತಿಕ ಬೆಂಬಲವನ್ನು ಮತ್ತು 15(30%) ಸದಸ್ಯರು ಆರ್ಥಿಕ ಸಹಾಯವನ್ನು ಕುಟುಂಬ ಸದಸ್ಯರು ನೀಡುತ್ತಾರೆಂದು ತಿಳಿಸಿದ್ದಾರೆ. ಈ ಅಂಕಿ ಅಂಶಗಳಿಂದ

ತಿಳಿಯುವುದೇನೆಂದರೆ ಜನಪ್ರತಿನಿಧಿಗಳಾಗಿ ಕೆಲಸಮಾಡುವಲ್ಲಿ ಮಹಿಳೆಯರಿಗೆ ಕುಟುಂಬದ ಸದಸ್ಯರು ಪ್ರತ್ಯಕ್ಷವಾಗಿ ಯಾ ಪರೋಕ್ಷವಾಗಿ ಸಹಾಯವನ್ನು ಮಾಡುತ್ತಿದ್ದಾರೆ. ಅವಶ್ಯಕ ಶಿಕ್ಷಣ, ತರಭೇತಿಗಳು ಮಹಿಳೆಯರನ್ನು ಸಬಲೀಕರಣ ಹಾಗು ಸ್ವಾವಲಂಬಿಗಳಾಗಿ ಮಾಡಲು ಸಾಧ್ಯ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಬಾಹ್ಯ ಒತ್ತಡಗಳಿಂದ ಹೊರ ಬರಲು ಸಾಧ್ಯ ಎಂದು ಕಂಡುಬರುತ್ತದೆ.

ಗ್ರಾಮ ಪಂಚಾಯತ್‌ನ ಕಾರ್ಯ ಕಲಾಪಗಳಲ್ಲಿ ಕುಟುಂಬದ ಸದಸ್ಯರ ಸಹಕಾರದ ವಿವರ

ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯು ಕುಟುಂಬದ ಸಹಕಾರದಿಂದ ಹೊರತಾಗಿಲ್ಲ. ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಕುಟುಂಬ ಸದಸ್ಯರ ಮೂಗು ತೂರಿಸುವಿಕೆಯು ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಕಾಣಬಹುದು.

ಕೋಷ್ಟಕ 4.15: ಸೂಚನಾದಾರರು ಗ್ರಾಮ ಪಂಚಾಯತ್ ಕಾರ್ಯ ಕಲಾಪಗಳಲ್ಲಿ ಭಾಗವಹಿಸುವಲ್ಲಿ ಕುಟುಂಬದ ಸದಸ್ಯರ ಸಹಕಾರದ ವಿವರ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	34	68%
ಇಲ್ಲ	16	32%
ಒಟ್ಟು	**50**	**100%**

ಮಹಿಳೆಯರು ಗ್ರಾಮ ಪಂಚಾಯತ್ ನಲ್ಲಿ ಸಕ್ರಿಯವಾಗಿ ಭಾಗವಹಿಸುವಲ್ಲಿ ಅವರ ಕುಟುಂಬದ ಸದಸ್ಯರ ಪಾತ್ರವು ಅತೀ ಮುಖ್ಯ. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ 34(68%) ಸೂಚನದಾರರು ಕುಟುಂಬದ ಸದಸ್ಯರಿಂದ ಉತ್ತಮ ಬೆಂಬಲ ದೊರೆಯುವುದೆಂದು, ಉಳಿದ 16(32%) ಸೂಚನದಾರರು ತಮಗೆ ಗ್ರಾಮ ಪಂಚಾಯತ್ ಕಾರ್ಯ ಕಲಾಪಗಳಲ್ಲಿ ಭಾಗವಹಿಸುವಲ್ಲಿ ಕುಟುಂಬದ ಸದಸ್ಯರ ಸಹಕಾರ ದೊರೆಯುವುದಿಲ್ಲವೆಂದರು.

ಸೂಚನಾದಾರರ ಪಂಚಾಯತ್ ಸದಸ್ಯರಾದ ನಂತರ ಕುಟುಂಬದವರ ಅನಿಸಿಕೆ ವಿವರ.

ಮಹಿಳೆಯರು ಕೌಟುಂಬಿಕವಾಗಿ ಸಕ್ರಿಯವಾಗಿರುವ ಕಾರಣ ಅವರಿಗೆ ರಾಜಕೀಯವಾಗಿ ಭಾಗವಹಿಸಲು ಅವಕಾಶ ದೊರೆಯುವುದಿಲ್ಲವೆಂಬುದು ಸರ್ವ ಸಾಮಾನ್ಯ ಮಾತು.ಒಂದು ವೇಳೆ ಮಹಿಳೆಯರು ರಾಜಕೀಯವಾಗಿ ಭಾಗವಹಿಸಿದರು, ಕುಟುಂಬದಲ್ಲಿ ಅವರ ಬಗೆಗಿನ ಅಭಿಪ್ರಾಯ, ಮನೋಭಾವನೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಗಳಿರುತ್ತದೆ.

ಕೋಷ್ಟಕ 4.16: ಸೂಚನಾದಾರರ ಪಂಚಾಯತ್ ಸದಸ್ಯರಾದ ನಂತರ ಕುಟುಂಬದವರ ಅನಿಸಿಕೆಗಳ ವಿವರ.

ಅಭಿಪ್ರಾಯ	ಸೂಚನದಾರರು	ಅಭಿಪ್ರಾಯ
ಸಂತೋಷ	32	64%
ಬೇಸರ	18	56%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಸೂಚನಾದಾರರ ಕುಟುಂಬದ ಸದಸ್ಯರ ಅನಿಸಿಕೆಯ ವಿವರವನ್ನು ಕ್ರೋಡಿಕರಿಸಿ ವಿಶ್ಲೇಷಿಸುತ್ತದೆ. ಒಟ್ಟು 50 ಸೂಚನಾದಾರರಲ್ಲಿ 32(64%) ಕುಟುಂಬ ಸದಸ್ಯರಿಗೆ ಜನ ಪ್ರತಿನಿಧಿಯಾಗಿ ಚುನಾಯಿತವಾಗಿದ್ದು ಸಂತೋಷವು, 18(36%) ಸೂಚನಾದಾರರ ಕುಟಂಬಸ್ಥರಿಗೆ ಬೇಸರವು ಆಗಿರುವುದು ತಿಳಿದುಬಂದಿದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಹೆಚ್ಚಿನ ಕುಟುಂಬಸ್ಥರಿಗೆ ಜನ ಪ್ರತಿಸಿಧಿಯಾಗಿ ಆಯ್ಕೆಯಾಗಿರುವುದು ಸಂತಸದ ವಿಚಾರವಾಗಿಯು, ಕಡಿಮೆ ಸಂಖ್ಯೆಯ ಕುಟುಂಬಸ್ಥರಿಗೆ ಬೇಸರವು ಆಗಿರುವುದು ಕಂಡುಬರುತ್ತದೆ, ಇದಕ್ಕೆ ಕಾರಣ ಅವರ ಆರ್ಥಿಕ ಪರಿಸ್ಥಿತಿಯು ಇರಬಹುದು.

ಚುನಾಯಿತರಾದ ನಂತರ ಕುಟುಂಬ ಜವಾಬ್ದಾರಿ ನಿರ್ವಹಿಸುವಲ್ಲಿನ ಬದಲಾವಣೆ ವಿವರ

1993ರ ಪಂಚಾಯತ್ ರಾಜ್ ಕಾಯ್ದೆಯು ಹಾಗೂ ಸರಕಾರದ ಧೋರಣೆಯು ಇತ್ತೀಚಿನ ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ.50 ರ ಮೀಸಲಾತಿಯನ್ನು ಕಲ್ಪಿಸಿಕೊಟ್ಟು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳಾ ಸಹಭಾಗಿತ್ವ ಹೆಚ್ಚುವಂತೆ ಮಾಡಿದೆ ಮತ್ತು ಸಮಾಜದಲ್ಲಿ ಅವರ ಸ್ಥಾನಮಾನ ಹೆಚ್ಚಿಸಿದೆ.

ಕೋಷ್ಟಕ 4.17: ಸೂಚನಾದಾರರ ಚುನಾಯಿತರಾದ ನಂತರ ಕುಟುಂಬ ಜವಾಬ್ದಾರಿ ನಿರ್ವಹಿಸುವಲ್ಲಿನ ಬದಲಾವಣೆ ವಿವರ

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	36	72%
ಇಲ್ಲ	14	28%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಸೂಚನಾದಾರರು ಚುನಾಯಿತರಾದ ನಂತರ ಕುಟುಂಬ ಜವಾಬ್ದಾರಿ ನಿರ್ವಹಿಸುವಲ್ಲಿನ ಬದಲಾವಣೆಯ ಬಗೆಗಿನ ಮಾಹಿತಿಯನ್ನು ಕ್ರೋಡಿಕರಿಸಿ ವಿಶ್ಲೇಷಿಸಲಾಗಿದೆ. ಒಟ್ಟು 50 ಸೂಚನಾದಾರರಲ್ಲಿ 36(72%) ಜನರು ಪ್ರತಿನಿಧಿಯಾಗಿ ಆಯ್ಕೆಯಾದ ನಂತರ ಕುಟುಂಬ ಜವಾಬ್ದಾರಿ ನಿರ್ವಹಿಸುವಲ್ಲಿ ಬದಲಾವಣೆಯಾಗಿದೆಯೆಂದು ಹಾಗೂ 14(28%) ಪ್ರತಿನಿಧಿಗಳು ಯಾವುದೇ ಬದಲಾವಣೆಗಳಾಗಿಲ್ಲವೆಂದು ಮಾಹಿತಿ ನೀಡಿದ್ದಾರೆ. ಈ ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ ಮಹಿಳಾ ಮೀಸಲಾತಿಯು ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನಗಳನ್ನು ಮಾಡುತ್ತಿದೆ ಹಾಗು ಕುಟುಂಬದ ಜವಾಬ್ದಾರಿ ನಿರ್ವಹಣೆಯಲ್ಲಿ ಪೂರ್ಣವಾಗಿ ತಮ್ಮನ್ನು ತೊಡಗಿಸಲು ಸಾಧ್ಯವಾಗುತ್ತಿಲ್ಲವೆಂದು ಕಂಡುಕೊಳ್ಳಬಹುದು.

ಚುನಾಯಿತರಾದ ನಂತರ ಎದುರುಸುತ್ತಿರುವ ಕೌಟುಂಬಿಕ ಸಮಸ್ಯೆಗಳ ವಿವರ

ರಾಜಕೀಯ ಭಾಗವಹಿಸುವಿಕೆಯು ಪರೋಕ್ಷವಾಗಿ ಆರ್ಥಿಕ ಮತ್ತು ಸಾಮಾಜಿಕ ಬಲಾಢ್ಯತೆಯನ್ನು ನಿರೀಕ್ಷಿಸುತ್ತದೆ. ಗ್ರಾಮ ಪಂಚಾಯತ್‌ನ ಪ್ರತಿನಿಧಿಗಳು ವೇತನೇತರರ ಹುದ್ದೆಯಾಗಿದ್ದು. ಇದು ಅವರ ಕುಟುಂಬ ಆರ್ಥಿಕತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಕೋಷ್ಟಕ 4.18: ಸೂಚನಾದಾರರ ಚುನಾಯಿತರಾದ ನಂತರ ಎದುರುಸುತ್ತಿರುವ ಕೌಟುಂಬಿಕ ಸಮಸ್ಯೆಗಳ ವಿವರ

ಅಭಿಪ್ರಾಯಗಳು	ಸೂಚನದಾರರು	ಶೇಕಡವಾರು
ಮನೆ ವಾರ್ತೆ ನಿಭಾಯಿಸುವಲ್ಲಿ	24	48%
ಕೌಟುಂಬಿಕ ಅಸಮಧಾನಕ್ಕೆ ಅವಕಾಶ	10	20%
ಆರ್ಥಿಕ ಸಮಸ್ಯೆ	16	32%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಚುನಾಯಿತ ಪ್ರತಿನಿಧಿಗಳಾದ ನಂತರ ಮಹಿಳೆಯರು ಎದುರಿಸುತ್ತಿರುವ ಕೌಟುಂಬಿಕ ಸಮಸ್ಯೆಗಳ ಬಗ್ಗೆ ವಿವರ ಕ್ರೋಡಿಕರಿಸಿ ವಿಶ್ಲೇಷಿಸುತ್ತದೆ. 50 ಸೂಚನಾದಾರರಲ್ಲಿ 24(48%) ಜನ ಜನಪ್ರತಿಯಾದ ನಂತರ ಮನೆ ವಾರ್ತೆ ನಿಭಾಯಿಸುವಲ್ಲಿ ಸಮಸ್ಯೆಗಳಾಗುತ್ತದೆಂದು. 16(32%) ಜನ ಆರ್ಥಿಕ ಸಮಸ್ಯೆಗಳು ತಲೆದೋರುತ್ತಿವೆಯೆಂದು ಮತ್ತು 10(20%) ಜನ ಕೌಟುಂಬಿಕ ಅಸಮಧಾನಗಳಿಗೆ ಆಸ್ಪದವಾಗುತ್ತಿದೆಯೆಂದು ಮಾಹಿತಿ ನೀಡಿದ್ದಾರೆ. ಈ ಎಲ್ಲಾ ಅಂಕಿಅಂಶಗಳನ್ನು ಗಮನಿಸಿದಾಗ, ಕುಟುಂಬಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದಾಗಿ ಗ್ರಾಮ ಪಂಚಾಯತ್ ಕಾರ್ಯಗಳಲ್ಲಿ ಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಅಸಾಧ್ಯವಾಗಿರುವುದು ಕಂಡುಬರುತ್ತಿದೆ.

ಸದಸ್ಯರಾದ ನಂತರ ಕೌಟುಂಬಿಕ ಸಮಾರಂಭಗಳಲ್ಲಿ ಗುರುತಿಸುವಿಕೆಯ ವಿವರ

ರಾಜಕೀಯ ಪಕ್ಷದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವುದರಿಂದ ಮಹಿಳೆಯರಿಗೆ ತಮ್ಮ ವೈಯುಕ್ತಿಕ ಸ್ಥಾನಮಾನದಲ್ಲೂ ಅಮೂಲಾಗ್ರ ಬದಲಾವಣೆ ಕಂಡುಬರುತ್ತದೆ. ಇದು ಮಹಿಳಾ ಮೀಸಲಾತಿ ಮತ್ತು ಸಂವಿಧಾನದ 73ನೇ ತಿದ್ದುಪಡಿಯ ಮೂಲ ಆಶಯವಾಗಿದೆ.

ಕೋಷ್ಟಕ 4.19: ಸೂಚನಾದಾರರ ಸದಸ್ಯರಾದ ನಂತರ ಕೌಟುಂಬಿಕ ಸಮಾರಂಭಗಳಲ್ಲಿಗುರುತಿಸುವಿಕೆಯ ವಿವರ

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಗೌರವಯುತವಾಗಿ	35	70%
ಸಾಮಾನ್ಯರಂತೆ	12	24%
ಹೊರತಾಗಿ	3	6%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕದಲ್ಲಿ ಸೂಚನಾದಾರರು ಸದಸ್ಯರಾದ ನಂತರ ಕೌಟುಂಬಿಕ ಸಮಾರಂಭಗಳಲ್ಲಿ ಭಾಗವಹಿಸುವಲ್ಲಿ ಗುರುತಿಸುವಿಕೆಯ ವಿವರವನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. 50 ಸೂಚನಾದಾರರಲ್ಲಿ 35(70%) ಪ್ರತಿನಿಧಿಗಳು ಕುಟುಂಬ ಸಮಾರಂಭಗಳಲ್ಲಿ ಮೊದಲಿಗಿಂತಲೂ ಗೌರವಯುತವಾಗಿ ನಡೆಸಿಕೊಳ್ಳುತ್ತಾರೆಂದೂ, 12(24%) ಜನ ಈ ಸಾಮಾನ್ಯರಂತೆ/ ಮೊದಲಿನಂತೆಯೆ ನಡೆಸಿಕೊಳ್ಳುತ್ತಾರೆಂದು ಮತ್ತು 03(06%) ಜನ ಹೊರತಾಗಿಯೂ ನಡೆಸಿಕೊಳ್ಳುತ್ತಾರೆಂದು ತಿಳಿಸಿದ್ದಾರೆ. ಈ ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ ಜನಪ್ರತಿನಿಧಿಗಳಾಗಿ ಆಯ್ಕೆಯಾದ ನಂತರ ಮಹಿಳೆಯರ ಸ್ಥಾನಮಾನವು ಕುಟುಂಬ ವ್ಯವಸ್ಥೆಯಲ್ಲಿ ಹೆಚ್ಚಾಗುತ್ತಿರುವುದನ್ನು ಕಂಡುಕೊಳ್ಳಬಹುದು.

ಸದಸ್ಯರಾಗಿ ನಿರ್ವಹಿಸಬೇಕಾದ ಕೆಲಸಕಾರ್ಯಗಳ ಪೂರ್ಣಮಾಹಿತಿಯ ವಿವರ

ಸಂವಿಧಾನದ 11ನೇ ಶೆಡ್ಯೂಲ್‌ನ 243ನೇ ಪರಿಚ್ಛೇದದ (ಜ), ಪಂಚಾಯತಿ ರಾಜ್ ಸಂಸ್ಥೆಗಳ ಅಧಿಕಾರ ಹಂಚಿಕೆಯ ಬಗ್ಗೆ ತಿಳಿಸುತ್ತದೆ. ಈ ಸಂಸ್ಥೆಗಳಿಗೆ ಒಟ್ಟು 29 ಕಾರ್ಯಕ್ರಮಗಳನ್ನು ನೀಡಲಾಗಿದೆ.

ಕೋಷ್ಟಕ 4.20: ಸೂಚನಾದಾರರ ಸದಸ್ಯರಾಗಿ ನಿರ್ವಹಿಸಬೇಕಾದ ಕೆಲಸಕಾರ್ಯಗಳ ಪೂರ್ಣ ಮಾಹಿತಿಯ ವಿವರ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಗೊತ್ತಿದೆ	18	36%
ಸಾಧಾರಣ	30	60%
ಗೊತ್ತಿಲ್ಲ	2	4%
ಒಟ್ಟು	**50**	**100**

ಈ ಮೇಲಿನ ಕೋಷ್ಟಕವು ಪಂಚಾಯತ್ ಸದಸ್ಯರಾಗಿ ಸೂಚನದಾರರು ನಿರ್ವಹಿಸಬೇಕಾದ ಕೆಲಸ ಕಾರ್ಯಗಳ ಬಗ್ಗೆ ಪೂರ್ಣ ಮಾಹಿತಿಯ ವಿವರವನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. ಒಟ್ಟು 50 ಸೂಚನಾದಾರರಲ್ಲಿ 30 (60%) ಮಂದಿಗೆ ಸಾಧಾರಣವಾಗಿ ಮಾಹಿತಿಯಿದೆಯೆಂದು, 18(36%) ಜನ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ಸರಿಯಾಗಿ ತಿಳಿದಿದೆಯೆಂದು ಹಾಗು 2(4%) ಜನ ಗೊತ್ತಿಲ್ಲವೆಂದು ತಿಳಿಸಿದ್ದಾರೆ. ಈ ಎಲ್ಲಾ ಅಂಕಿಅಂಶಗಳಿಂದ ತಿಳಿಯುವುದೇನೆಂದರೆ, ಶಿಕ್ಷಣ, ಸಾಮರ್ಥ್ಯಭಿವೃದ್ಧಿ ತರಬೇತಿಗಳಿಂದ ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ ಪಂಚಾಯತ್ ಕಾರ್ಯಕ್ರಮಗಳ ಹಾಗು ಕರ್ತವ್ಯಗಳ ಜ್ಞಾನವನ್ನು ಹೆಚ್ಚಿಸುವ ಅಗತ್ಯವಿದೆ.

ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ತಿಳುವಳಿಕೆಯ ವಿವರ

73ನೇ ತಿದ್ದುಪಡಿಯು 29 ಕಾರ್ಯಕ್ರಮಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಿದೆ. ಕಾಲಾನುಕಾಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣಭಿವೃದ್ಧಿ ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಜಾರಿಗೆ ತರುತ್ತವೆ. ಇವುಗಳಲ್ಲಿ ಮುಖ್ಯವಾಗಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ, ಸಾರ್ವಜನಿಕ ಆಸ್ತಿಗಳನ್ನು ರಚಿಸುವ ಕಾರ್ಯಕ್ರಮಗಳು, ವಸತಿ ಯೋಜನೆಗಳು ಹಾಗು ಉದ್ಯೋಗ ಯೋಜನೆಗಳು.

ಕೋಷ್ಟಕ 4.21: ಸೂಚನಾದಾರರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ತಿಳುವಳಿಕೆಯ ವಿವರ

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಗೊತ್ತಿದೆ	20	40%
ಸಾಧಾರಣ	28	56%
ಗೊತ್ತಿಲ್ಲ	2	2 4%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಸೂಚನದಾರರಿಗೆ ಗ್ರಾಮೀಣಭಿವೃದ್ಧಿ ಕಾರ್ಯಕ್ರಮಗಳ ತಿಳುವಳಿಕೆ ಮಟ್ಟವನ್ನು ಕ್ರೋಡಿಕರಿಸಿ ವಿಶ್ಲೇಷಿಸುತ್ತದೆ. 50 ಸೂಚನಾದಾರರಲ್ಲಿ 28(56%) ಜನರಿಗೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಾಧಾರಣಾವಾದ ತಿಳುವಳಿಕೆಯಿದೆಯೆಂದು, 20(40%) ಜನರಿಗೆ ಗ್ರಾಮೀಣಾಭಿವೃದ್ದಿ ಕಾರ್ಯಕ್ರಮಗಳ ಬಗ್ಗೆ ಗೊತ್ತಿದೆಯೆಂದು ಹಾಗು 2(4%) ಜನರಿಗೆ ಗೊತ್ತಿಲ್ಲವೆಂದು ತಿಳಿಸಿದ್ದಾರೆ. ಈ ಎಲ್ಲಾ ಅಂಕಿಅಂಶಗಳಿಂದ ತಿಳಿಯವುದೇನೆಂದರೆ, ಗ್ರಾಮೀಣಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ ಸಮರ್ಪಕ ಮಾಹಿತಿಯ ಅಗತ್ಯತೆ ಕಂಡುಬರುತ್ತದೆ.

ಕೋಷ್ಟಕ 4.22: ಸೂಚನದಾರರು ಪಂಚಾಯತ್ ಕೆಲಸ ಕಾರ್ಯ ನಿರ್ವಹಿಸುವಲ್ಲಿ ಪಂಚಾಯತ್ ಅಧಿಕಾರಿ/ಸಿಬ್ಬಂದಿಗಳ ಸಹಕಾರದ ವಿವರ.

1993ರ ಕಾಯಿದೆ ಆಡಳಿತಾತ್ಮಕವಾದ ವಿಕೇಂದ್ರಿಕೃತ ವ್ಯವಸ್ಥೆಯನ್ನು ಮೂರುಸ್ತರಗಳಲ್ಲಿಯೂ ಪ್ರತ್ಯೇಕವಾಗಿ ರೂಪಿಸಿದೆ. ಗ್ರಾಮ ಪಂಚಾತ್‌ಗಳಲ್ಲಿ ಆಡಳಿತ ಮತ್ತು ಅನುಷ್ಠಾನಗೊಳಿಸಲು ನಡೆಸಲು ಚುನಾಯಿತ ಆಡಳಿತ ವರ್ಗ ಹಾಗೂ ಅಧಿಕಾರಿ ವರ್ಗವು ಇರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ಮಧ್ಯೆ ಹೊಂದಾಣಿಕೆಯ ಕೊರತೆ ಕಾಣಬಹುದಾಗಿದೆ. ಈ ಕೊರತೆಯು ಅಂತಿಮವಾಗಿ ಪಂಚಾಯತಿಗಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿರುತ್ತದೆ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಅತ್ಯತ್ತಮ	14	28%
ಉತ್ತಮ	28	56%
ಸಾಧಾರಣ	8	16%
ಒಟ್ಟು	**50**	**100**

ಮೇಲಿನ ಕೋಷ್ಟಕವು ಸೂಚನಾದಾರರು ಕೆಲಸಕಾರ್ಯಗಳನ್ನು ಮಾಡುವಲ್ಲಿ ಪಂಚಾಯತ್ ಅಧಿಕಾರಿ/ ಸಿಬ್ಬಂದಿಗಳ ಸಹಕಾರದ ವಿವರವನ್ನು ಕ್ರೋಡಿಕರಿಸಿ ವಿಶ್ಲೇಷಿಸಲಾಗಿದೆ. 50 ಸೂಚನಾದಾರರಲ್ಲಿ 28(56%) ಜನ ಪಂಚಾಯತ್ ಅಧಿಕಾರಿ/ಸಿಬ್ಬಂದಿಗಳ ಸಹಕಾರವು ಉತ್ತಮವಾಗಿದೆಯೆಂದು, 14(28%) ಜನ ಸಹಕಾರವು ಅತ್ಯುತ್ತಮವೆಂದು ಹಾಗು 8(16%) ಜನ ಸಹಕಾರವು ಸಾಧಾರಣವಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ, ಗ್ರಾಮ ಪಂಚಾಯತ್‌ಗಳ ಕೆಲಸ ಕಾರ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ಅಧಿಕಾರಿ ವರ್ಗ/ ಸಿಬ್ಬಂದಿಗಳು ಉತ್ತಮವಾಗಿ ಸ್ಪಂದಿಸುತ್ತಾರೆ ಎಂದು ಕಂಡುಬರುತ್ತದೆ.

ಕೋಷ್ಟಕ 4.23: ಸೂಚನಾದಾರರು ಪಂಚಾಯತ್‌ಗೆ ಹೊಸದಾಗಿ ನೇಮಕವಾದ 'ಪಂಚಾಯತ್ ಅಭಿವೃದ್ಧಿ ಅಧಿಕಾರಿ'ಗಳ ಬಗೆಗಿನ ಅಭಿಪ್ರಾಯ ವಿವರ.

ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ತಾಂತ್ರಿಕವಾಗಿ ಸುಸ್ಥಿರಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ಇತ್ತೀಚ್ಚೆಗೆ ಗ್ರಾಮ ಪಂಚಾಯತ್‌ಗಳಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ನೇಮಿಸಿದೆ. ಪಂಚಾಯತ್ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ಇವರ ಪಾತ್ರವು ಪ್ರಮುಖವಾಗಿದೆ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಅತ್ಯುತ್ತಮ	9	28%
ಉತ್ತಮ	23	46%
ಸಾಧಾರಣ	18	36%
ಒಟ್ಟು	**50**	**100%**

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಸೂಚನದಾರರಿಗೆ ಹೊಸದಾಗಿ ಪಂಚಾಯತ್‌ಗಳಿಗೆ ನೇಮಕವಾದ 'ಪಂಚಾಯತ್ ಅಭಿವೃದ್ಧಿ ಅಧಿಕಾರಿ'ಗಳ ಬಗ್ಗೆ ಅಭಿಪ್ರಾಯವನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. 50 ಸೂಚನದಾರರಲ್ಲಿ 23(46%) ಪ್ರತಿನಿಧಿಗಳು ಹೊಸದಾಗಿ ನೇಮಕವಾದ 'ಪಂಚಾಯತ್ ಅಭಿವೃದ್ಧಿ ಅಧಿಕಾರಿ'ಗಳ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 18(36%) ಜನರು ಸಾಧಾರಣ ಎಂದು ಅಭಿಪ್ರಾಯಪಟ್ಟಿದ್ದಾರೆ ಮತ್ತು 9(18%) ಜನ ಅತ್ಯುತ್ತಮ ಎನ್ನುವ ಮಾಹಿತಿಯನ್ನು ನೀಡಿದ್ದಾರೆ. ಈ ಎಲ್ಲಾ ಅಂಕಿಅಂಶಗಳನ್ನು ಗಮನಿಸಿದಾಗ, ಹೊಸದಾಗಿ ನೇಮಕವಾದ 'ಪಂಚಾಯತ್ ಅಭಿವೃದ್ಧಿ ಅಧಿಕಾರಿ'ಗಳು ಸಮರ್ಪಕವಾಗಿ ಕಾನೂನುಪಾಲನೆ ಮಾಡುತ್ತಿರುವುದು ಕಂಡುಬರುತ್ತದೆ.

ಕೋಷ್ಟಕ 4.24: ಸೂಚನಾದಾರರು ಪಂಚಾಯತ್ ಅಭಿವೃದ್ಧಿ ಕಾರ್ಯ ಬಗ್ಗೆ ಮೇಲಾಧಿಕಾರಿಗಳ ಬಗ್ಗೆ ಜೊತೆ ಸಂಪರ್ಕ ಸಾಧಿಸುವಲ್ಲಿನ ವಿವರ.

ಭಾರತದಲ್ಲಿ ಸ್ಥಳೀಯ ಸಂಸ್ಥೆಗಳು ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳಿಂದ ಮತ್ತು ಸರ್ಕಾರದಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳ ಮುಖಾಂತರ ಕಾರ್ಯನಿರ್ವಹಿಸುತ್ತದೆ. ಕೆಲವೊಮ್ಮೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ತಡೆಯುಂಟಾದಾಗ ಮೇಲಾಧಿಕಾರಿಗಳನ್ನು ಅಂದರೆ ತಾಲೂಕು ಮಟ್ಟದ ಹಾಗು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಿ ತೊಡರುಗಳನ್ನು ಸರಿಪಡಿಸಬೇಕಾದ ಅವಶ್ಯಕತೆಗಳು ಕಂಡು ಬರುತ್ತದೆ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	18	36%
ಇಲ್ಲ	32	64%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಸೂಚನಾದಾರರು ಅಭಿವೃದ್ಧಿಕಾರ್ಯಗಳ ಬಗ್ಗೆ ಮೇಲಾಧಿಕಾರಿಗಳನ್ನು ಸಂಪರ್ಕಿಸುವ ಬಗ್ಗೆ ವಿವರವನ್ನು ಕ್ರೋಡಿಕರಿಸಿ ವಿಶ್ಲೇಷಿಸಲಾಗಿದೆ. 50 ಸೂಚನಾದಾರರಲ್ಲಿ 32(64%) ಪ್ರತಿನಿಧಿಗಳು ಈ ಬಗ್ಗೆ ಮೇಲಾಧಿಕಾರಿಗಳನ್ನು ಸಂಪರ್ಕಿಸಿಲ್ಲವೆಂದು, 18(36%) ಜನ ಅಭಿವೃದ್ಧಿಕಾರ್ಯಗಳ ಬಗ್ಗೆ ಮೇಲಾಧಿಕಾರಿಗಳ ಜೊತೆ ಸಂಪರ್ಕಿಸಲು ಶಕ್ತರು ಎಂದಿದ್ದಾರೆ.ಈ ಎಲ್ಲಾ ಅಂಕಿಅಂಶಗಳನ್ನು ಗಮನಿಸಿದಾಗ, ಮಹಿಳಾ ಸಬಲೀಕರಣ, ವ್ಯಕ್ತಿತ್ವ ವಿಕಸನ ತರಬೇತಿಗಳ ಅವಶ್ಯಕತೆ ಕಂಡುಬರುತ್ತದೆ.

ಕೋಷ್ಟಕ 4.25: ಸೂಚನಾದಾರರು ಅಭಿವೃದ್ಧಿ ಕಾರ್ಯಗಳ ಬಗ್ಗೆ ರಾಜಕೀಯ ನಾಯಕರಲ್ಲಿ ಚರ್ಚಿಸಿದರ ವಿವರ.

ಸರ್ಕಾರದಿಂದ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಯೋಜನೆಗಳು ಕಾಲಕಾಲಕ್ಕೆ ಯೋಜಿತವಾಗುತ್ತದೆ.ಈ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಸಚಿವರು, ಮಂತ್ರಿಗಳು ಹಾಗು ರಾಜಕೀಯ ನಾಯಕರ ಸಂಪರ್ಕ ಅವಶ್ಯಕವಾಗಿದೆ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	18	36%
ಇಲ್ಲ	32	64%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಸೂಚನಾದಾರರು ರಾಜಕೀಯ ನಾಯಕರ ಜೊತೆ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಂಪರ್ಕ ಮಾಡಿ ಚರ್ಚಿಸುವ ಶಕ್ತತೆಯ ವಿವರವನ್ನು ಕ್ರೋಡಿಕರಿಸಿ ವಿಶ್ಲೇಷಿಸಲಾಗಿದೆ. 50 ಸೂಚನಾದಾರರ ಪೈಕಿ 32(64%) ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಂಪರ್ಕ ಸಾಧಿಸಿ ಚರ್ಚಿಸಲು ಸಾಧ್ಯವಾಗುತ್ತಿಲ್ಲವೆಂದು ಹಾಗು 18 (36%) ಸದಸ್ಯರು ಯೋಜನೆಗಳಯ ಹಾಗು ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಮೂಲಭೂತ ಅವಶ್ಯಕ ಕಾಮಗಾರಿಗಳ ಬಗ್ಗೆ ರಾಜಕೀಯ ನಾಯಕರಲ್ಲಿ ಚರ್ಚಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಎಲ್ಲಾ ಅಂಕಿಅಂಶಗಳನ್ನು ಗಮನಿಸಿದಾಗ, ಹೆಚ್ಚಿನ ಮಹಿಳಾ ಪ್ರತಿನಿಧಿಗಳಲ್ಲಿ ಶಿಕ್ಷಣದ ಹಾಗು ಧೈರ್ಯದ ಕೊರತೆ ಕಂಡುಬರುತ್ತದೆ.

ಕೋಷ್ಟಕ 4.26: ಸೂಚನಾದಾರರು ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ವ್ಯಾಪ್ತಿಯ ಮತದಾರರಿಗೆ ಸಮರ್ಪಕ ಮಾಹಿತಿ ನೀಡುವ ವಿವರ.

ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ಕಾಲಕಾಲಕ್ಕೆ ಗ್ರಾಮೀಣಾಭಿವೃದ್ಧಿ ಹಾಗು ಮೂಲ ಸೌಕರ್ಯಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಯೋಜನೆಯ ಅಗತ್ಯತೆ ಹಾಗೂ ಅನುಷ್ಠಾನವನ್ನು ಸ್ಥಳೀಯ ಜನರ ಸಹಭಾಗಿತ್ವದಲ್ಲಿ ಕೈಗೊಳ್ಳುವುದು ಅತೀ ಅಗತ್ಯವಾಗಿರುವುದರಿಂದ ಕಾಲಕಾಲಕ್ಕೆ ಅವರಿಗೆ ಯೋಜನೆ ಹಾಗು ಕಾರ್ಯಕ್ರಮಗಳ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡಬೇಕಾಗುತ್ತದೆ. ಇದು ಆಯ್ಕೆಯಾದ ಜನಪ್ರತಿನಿಧಿಗಳ ಜವಾಬ್ದಾರಿ ಹೌದು.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	41	82%
ಇಲ್ಲ	9	18%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಸೂಚನದಾರರು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಹಾಗು ಯೋಜನೆಗಳ ಬಗ್ಗೆ ಮತದಾರರಿಗೆ ನೀಡಿದ ಮಾಹಿತಿಯ ಬಗ್ಗೆ ವಿವರಗಳನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ.೫೦ ಸೂಚನದಾರರಲ್ಲಿ 41(82%) ಪ್ರತಿನಿಧಿಗಳು ಮತದಾರರಿಗೆ ಪಂಚಾಯತ್ ರಾಜ್ ಕಾರ್ಯಕ್ರಮಗಳ ಹಾಗು ಯೋಜನೆಗಳ ಬಗ್ಗೆ ಮತದಾರರಿಗೆ ಮಾಹಿತಿ ನೀಡಲು ಶಕ್ತರೆಂದು ಅಭಿಪ್ರಾಯಪಟ್ಟಿದ್ದಾರೆ. 9(18%) ಪ್ರತಿನಿಧಿಗಳು ಮತದಾರರಿಗೆ ಮಾಹಿತಿ ನೀಡಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದ್ದಾರೆ. ಈ ಅಂಕಿಅಂಶಗಳನ್ನು ಗಮನಿಸಿದಾಗ, ಪಂಚಾಯತ್ ರಾಜ್ ಹಾಗು ಗ್ರಾಮೀಣಾಭಿವೃದ್ಧಿಗಳ ಕಾರ್ಯಕ್ರಮಗಳ ಹಾಗೂ ಯೋಜನೆಗಳ ಬಗ್ಗೆ ಮತದಾರರಿಗೆ ಸಮರ್ಪಕವಾದ ಮಾಹಿತಿಯನ್ನು ಮಹಿಳಾ ಪ್ರತಿನಿಧಿಗಳು ನೀಡುತ್ತಾರೆಂದು ಕಂಡುಬರುತ್ತದೆ.

ಕೋಷ್ಟಕ 4.27: ಮತದಾರರು ಕೆಲಸಕಾರ್ಯಗಳಿಗೆ ನೇರವಾಗಿ ಸೂಚನದಾರರು ಸಂಪರ್ಕಿಸುವ ಬಗ್ಗೆ.

ಸಹಜವಾಗಿ ಮತದಾರರು ತಾವು ಆಯ್ಕೆಮಾಡಿ ಕಳುಹಿಸಿದ ಜನಪ್ರತಿನಿಧಿಗಳಲ್ಲಿ, ತಮ್ಮ ಕೆಲಸ ಕಾರ್ಯಗಳಲ್ಲಿ ಸಹಾಯ ಸಹಕಾರದ ನಿರೀಕ್ಷೆ ಬಯಸುತ್ತಾರೆ, ಎಂದರೆ ತಪ್ಪಾಗಲಾರದು. ಮತದಾರರು ತಮ್ಮ ವಾರ್ಡಿನ ಅಭಿವೃದ್ಧಿಯನ್ನು ಕಾಣಲು ಹಾತೊರೆಯುತ್ತಾರೆ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	34	68%
ಇಲ್ಲ	16	32%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಸೂಚನದಾರರು ತಮ್ಮನ್ನು, ತಮ್ಮ ವಾರ್ಡಿನ ಮತದಾರರು ತಮ್ಮ ಕೆಲಸ ಕಾರ್ಯಗಳ ಸಲುವಾಗಿ ನೇರವಾಗಿ ಸಂಪರ್ಕಿಸುತ್ತಾರೋ ಎಂಬ ಬಗ್ಗೆ ವಿವರಿಸುತ್ತದೆ. ಒಟ್ಟು 50 ಸೂಚನದಾರರಲ್ಲಿ ಬಹುಭಾಗ 34(68%) ಮಂದಿ ಹೌದು ಎಂದು. ಕೇವಲ 16(32%) ಮಂದಿ ತಮ್ಮನ್ನು ನೇರವಾಗಿ ಸಂಪರ್ಕಿಸುವುದಿಲ್ಲ ಎಂದು ತಿಳಿಸಿರುತ್ತಾರೆ. ಮತದಾರರು ತಮ್ಮ ವಾರ್ಡಿನ ಜನಪ್ರತಿನಿಧಿಗಳನ್ನು ಆಯ್ಕೆಮಾಡಿ ಕಳುಹಿಸುವ ಸಂದರ್ಭದಲ್ಲಿ ತಮ್ಮ ವಾರ್ಡಿನ ಜೊತೆಗೆ ತಮ್ಮ ಕೆಲಸ ಕಾರ್ಯಗಳ ಸಲುವಾಗಿ ನೇರವಾಗಿ ಸ್ಪಂದಿಸುವವರು ಬೇಕೆಂಬುದನ್ನು ಜನ ಬಯಸುತ್ತಾರೆ ಎಂಬುದನ್ನು ಜನಪ್ರತಿನಿಧಿಗಳು ಅರ್ಥೈಸಿ ಕೊಳ್ಳಬೇಕೆಂದು ತೀರ್ಮಾನಿಸಬಹುದು.

ಕೋಷ್ಟಕ 4.28: ಸೂಚನಾದಾರರು ವಾರ್ಡ್/ಗ್ರಾಮ ಸಭೆಗಳಲ್ಲಿ ಮತದಾರರು ಭಾಗವಹಿಸುವಂತೆ ಪ್ರೋತ್ಸಾಹಿಸುವ ವಿವರ.

ಜನ ಸಹಭಾಗಿತ್ವವು ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣ ಮತ್ತು ಅತ್ಯುನ್ನತ ಮೌಲ್ಯವು ಆಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯು ಸಮರ್ಪಕವಾಗಿ ನಡೆಯಲು ಪ್ರತೀ ಚಟುವಟಿಕೆಯಲ್ಲೂ ಜನರ ಸಕ್ರೀಯ ಭಾಗವಹಿಸುವಿಕೆಯು ಅತೀ ಅಗತ್ಯ. ಗ್ರಾಮಸಭೆಗಳ ಮೂಲಕ ಜನಸಹಭಾಗಿತ್ವದಲ್ಲಿ ವಾರ್ಷಿಕ ಯಾ ಪಂಚವಾರ್ಷಿಕ ಕ್ರಿಯಾ ಯೋಜನೆಗಳನ್ನು ತಯಾರಿಸಿ ಅನುಷ್ಠಾನಗೊಳಿಸಲು ಸಹಕಾರಿಯಾಗಬಹುದು.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	45	90%
ಇಲ್ಲ	5	10%
ಒಟ್ಟು	50	100%

ಈ ಮೇಲಿನ ಕೋಷ್ಟಕವು ಸೂಚನಾದಾರರು ವಾರ್ಡ್‌ಸಭೆ/ ಗ್ರಾಮ ಸಭೆಗಳಲ್ಲಿ ಕ್ಷೇತ್ರದ ಮತದಾರರನ್ನು ಭಾಗವಹಿಸುವಂತೆ ಪ್ರೇರೇಪಿಸುವ ಬಗ್ಗೆ ವಿವರವನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. 50 ಜನ ಸೂಚನಾದಾರರಲ್ಲಿ 45(90%) ಸದಸ್ಯರು ಮತದಾರರಿಗೆ ವಾರ್ಡ್ ಸಭೆ ಹಾಗು ಗ್ರಾಮ ಸಭೆಗಳ ಬಗ್ಗೆ ಮಾಹಿತಿಯನ್ನು ನೀಡಿ, ಸಭೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತಾರೆಂದು ಹಾಗು 5(10%) ಪ್ರತಿನಿಧಿಗಳು ಮಾಹಿತಿಯನ್ನು ನೀಡುತ್ತಿಲ್ಲವೆಂದು ತಿಳಿಸಿದ್ದಾರೆ. ಈ ಎಲ್ಲಾ ಅಂಕಿಅಂಶಗಳನ್ನು ಗಮನಿಸಿದಾಗ, ಮಹಿಳಾ ಪ್ರತಿನಿಧಿಗಳು ಜನಸಹಭಾಗಿತ್ವಕ್ಕೆ ಹೆಚ್ಚಿನ ಮನ್ನಣೆಯನ್ನು ನೀಡುತ್ತಾರೆಂದು ಕಂಡುಕೊಳ್ಳಬಹುದು.

ಕೋಷ್ಟಕ 4.29: ಸೂಚನಾದಾರರು ಮಾಧ್ಯಮಗಳಲ್ಲಿ ಕಾಣಿಸಿಕೊಂಡಿರುವ ವಿವರ.

ಪಂಚಾಯತ್‌ಗಳ ಅಭಿವೃದ್ಧಿ ಕಾರ್ಯಗಳ, ಯೋಜನೆಗಳ ಹಾಗೂ ಕಾರ್ಯಕ್ರಮಗಳ ಬಗ್ಗೆ ಸಮಾನ್ಯವಾಗಿ ಮಾಧ್ಯಮಗಳಲ್ಲಿ ಅಚ್ಚಾಗುವುದನ್ನು ದಿನಪತ್ರಿಕೆ, ಮ್ಯಾಗರಿಝೀನ್, ದೂರದರ್ಶನಗಳಲ್ಲಿ ಕಾಣಬಹುದು.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	34	68%
ಇಲ್ಲ	16	32%
ಒಟ್ಟು	**50**	**100%**
ಇಲೆಕ್ಟ್ರಾನಿಕ್ ಅಥವಾ ಮುದ್ರಣಮಾಧ್ಯಮ ಅಭಿಪ್ರಾಯ		
ಇಲೆಕ್ಟ್ರಾನಿಕ್ ಮಾಧ್ಯಮ	6	12%
ಮುದ್ರಣ ಮಾಧ್ಯಮ	44	88%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಸೂಚನಾದಾರರು ಮಾಧ್ಯಮಗಳಲ್ಲಿ ಕಾಣಿಸಿಕೊಂಡ ವಿವರದ ಬಗ್ಗೆ ಮಾಹಿತಿಯನ್ನು ಕ್ರೋಡಿಕರಿಸಿ ವಿಶ್ಲೇಷಿಸುತ್ತದೆ. 50 ಸೂಚನಾದಾರರ ಪೈಕಿ 44(88%) ಪ್ರತಿನಿಧಿಗಳು ಮುದ್ರಣ ಮಾಧ್ಯಮಗಳಲ್ಲಿ ಕಾಣಿಸಿಕೊಂಡಿರುವರೆಂದೂ, 6(12%) ಜನ ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಕಾಣಿಸಿಕೊಂಡಿರುವರೆಂದು ತಿಳಿಸಿದ್ದಾರೆ. ಈ ಅಂಕಿಅಂಶಗಳನ್ನು ಗಮನಿಸಿದಾಗ, ಮಹಿಳಾ ಪ್ರತಿನಿಧಿಗಳು ಹೆಚ್ಚಾಗಿ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸುತ್ತಿದ್ದಾರೆಂದು ಕಂಡುಕೊಳ್ಳಬಹುದು.

ಕೋಷ್ಟಕ 4.30: ಸೂಚನಾದಾರರಿಗೆ ಪಂಚಾಯತ್‌ನ ಅನುದಾನಗಳು ಮತ್ತು ಬಜೆಟ್‌ನ ಮಾಹಿತಿ ವಿವರ.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಆರ್ಥಿಕ ನಿರ್ಧಾರವನ್ನು ಕೂಡ ಸಂಬಂಧವನ್ನು ಗ್ರಾಮ ಪಂಚಾಯತ್ ಸದಸ್ಯರ ಪಾಲ್ಗೊಳ್ಳುವಿಕೆಯಲ್ಲಿ ಯೋಜಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತ್ ಸದಸ್ಯರಿಗೆ ಪಂಚಾಯತ್ ಅನುದಾನ ಮತ್ತು ಬಜೆಟ್‌ನ ಬಗ್ಗೆ ಮಾಹಿತಿಯಿರುವುದು ಅಪೇಕ್ಷಣಿಯ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಗೊತ್ತಿದೆ	17	34%
ಸಾಧಾರಣ	29	58%
ಗೊತ್ತಿಲ್ಲ	4	8%
ಒಟ್ಟು	**50**	**100%**

ಈ ಮೆಲಿನ ಕೋಷ್ಟಕವು ಸೂಚನಾದಾರರಿಗೆ ಗ್ರಾಮ ಪಂಚಾಯತ್ ಅನುದಾನ ಹಾಗು ಬಜೆಟ್‌ನ ಬಗ್ಗೆ ವಿವರವನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. 50 ಪ್ರತಿನಿಧಿಗಳಲ್ಲಿ 29(58%) ಮಹಿಳಾ ಸದಸ್ಯರಿಗೆ ಮಾಹಿತಿ ಸಾಧಾರಣ ತಿಳಿದಿದೆಯೆಂದೂ, 17(34%) ಪ್ರತಿನಿಧಿಗಳು ಗೊತ್ತಿದೆಯೆಂದೂ ಮತ್ತು 4(8%) ಜನ ಗೊತ್ತಿಲ್ಲವೆಂದೂ ಅಭಿಪ್ರಾಯಪಟ್ಟಿದ್ದಾರೆ.ಈ ಅಂಕಿಅಂಶಗಳನ್ನು ಗಮನಿಸಿದಾಗ ಗ್ರಾಮ ಪಂಚಾಯತ್ ಅನುದಾನ ಮತ್ತು ಬಜೆಟ್‌ಗಳ ಬಗ್ಗೆ ತಿಳಿದುಕೊಳ್ಳಲು ಮಹಿಳಾ ಪ್ರತಿನಿಧಿಗಳು ಪ್ರಯತ್ನಿಸುವ ಅವಶ್ಯಕತೆಯು ಕಂಡುಬರುತ್ತದೆ.

ಕೋಷ್ಟಕ 4.31: ನಿರ್ಧಾರ ತೆಗೆದುಕೊಳ್ಳುವಲ್ಲಿ ಸೂಚನಾದಾರರ ಪಾತ್ರದ ವಿವರ.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಆರ್ಥಿಕ ಮತ್ತು ಆರ್ಥಿಕೇತರ ನಿರ್ಧಾರ ತೆಗೆದುಕೊಳ್ಳುವಲ್ಲಿ ಸದಸ್ಯರು ಮುಖ್ಯ ಪಾತ್ರವನ್ನು ವಹಿಸುತ್ತಾರೆ. ಸಮರ್ಪಕವಾದ ಶಿಕ್ಷಣ ಹಾಗೂ ತರಬೇತಿಯು ಪ್ರತಿನಿಧಿಗಳಲ್ಲಿ ಈ ನಿರ್ಧಾರ ತೆಗೆದುಕೊಳ್ಳುವಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	20	40%
ಇಲ್ಲ	30	60%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಸೂಚನದಾರರು ಪಂಚಾಯತ್‌ನ ನಿರ್ಧಾರ ತೆಗೆದುಕೊಳ್ಳುವಲ್ಲಿ ಅವರ ಪಾತ್ರದ ಬಗ್ಗೆ ವಿವರಿಸುತ್ತದೆ. ಒಟ್ಟು 50 ಸೂಚನದಾರರಲ್ಲಿ ಬಹುಭಾಗ 30(60%) ಮಂದಿ ಇಲ್ಲ ಎಂದು ತಿಳಿಸಿರುತ್ತಾರೆ. ಆದರೆ ಕೇವಲ 20(40%) ಮಂದಿ ಮಾತ್ರ ನಿರ್ಧಾರ ತೆಗೆದುಕೊಳ್ಳುವಲ್ಲಿ ತಮ್ಮ ಪ್ರಮುಖ್ಯತೆಯನ್ನು ಉಳಿಸಿಕೊಂಡಿದ್ದಾರೆ. ಗ್ರಾಮಪಂಚಾಯತ್ ವ್ಯವಸ್ಥೆಯಲ್ಲಿ ಆರ್ಥಿಕ ಮತ್ತು ಆರ್ಥಿಕೇತರ ನಿರ್ಧಾರ ತೆಗೆದುಕೊಳ್ಳುವಲ್ಲಿ ಪುರುಷ ಸದಸ್ಯರು ಮುಖ್ಯ ಪಾತ್ರವನ್ನು ವಹಿಸುತ್ತಾರೆ ಎಂದು ತಿಳಿಯಬಹುದು.

ಕೋಷ್ಟಕ 4.32: ವಾರ್ಡ/ಗ್ರಾಮ ಸಭೆಗಳಲ್ಲಿ ಮತದಾರರ ಪ್ರಶ್ನೆಗಳಿಗೆ/ ಸಮಸ್ಯೆಗಳಿಗೆ ಸೂಚನಾದಾರರು ಉತ್ತರಿಸುವ ವಿವರ.

ಗ್ರಾಮ ಸಭೆಯು ಒಂದು ಗ್ರಾಮಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿಯಲ್ಲಿ ನೋಂದಾಯಿತರಾಗಿರುವ ಜನರಿಂದ ಕೂಡಿದ ಒಂದು ಮಂಡಲಿ ಸಭೆಯು ಗ್ರಾಮಮಟ್ಟದ ಅಭಿವೃದ್ಧಿಗೆ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತದೆ.

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	16	32%
ಇಲ್ಲ	34	68%
ಒಟ್ಟು	**50**	**100%**

ಈ ಮೇಲಿನ ಕೋಷ್ಟಕವು ಸೂಚನದಾರರು ಪಂಚಾಯತ್‌ನ, ವಾರ್ಡ/ಗ್ರಾಮ ಸಭೆಗಳಲ್ಲಿ ಮತದಾರರ ಪ್ರಶ್ನೆಗಳಿಗೆ/ ಸಮಸ್ಯೆಗಳಿಗೆ ಸೂಚನಾದಾರರು ಉತ್ತರಿಸುವ ಬಗ್ಗೆ ವಿವರಿಸುತ್ತದೆ. ಒಟ್ಟು 50 ಸೂಚನದಾರರಲ್ಲಿ ಬಹುಭಾಗ 34(68%) ಮಂದಿ ಉತ್ತರಿಸುವುದಿಲ್ಲವೆಂದು ತಿಳಿಸಿರುತ್ತಾರೆ. ಇವರಲ್ಲಿ ಕೇವಲ 16(32%) ಮಂದಿ ಮಾತ್ರ ಉತ್ತರಿಸುತ್ತಾರೆಂದು ಹೇಳಿಕೊಂಡಿದ್ದಾರೆ. ಸಮರ್ಪಕವಾದ ಶಿಕ್ಷಣದ ಕೊರತೆ, ಸಾಮಾಜಿಕ ಹಿನ್ನಲೆ ಮತ್ತು ಸಾಮರ್ಥ್ಯಾಭಿವೃದ್ಧಿಯ ಕೊರತೆಯೆಂಬುದು ಕ್ಷೇತ್ರ ಕಾರ್ಯದ ಅವಲೋಕನದಿಂದ ತಿಳಿದು ಬಂದಿದೆ.

ಅಧ್ಯಾಯ-5

ಅಧ್ಯಯನ ಫಲಿತಗಳು

1. ಅಧ್ಯಯನವು ಕಂಡು ಕೊಂಡತೆ, ಒಟ್ಟು 50 ಸೂಚನದಾರರ ಪೈಕಿ 5(10%) ಜನ 18-28 ವಯೋಮಾನಕ್ಕೆ ಸೇರಿದವರು, 18 ಸೂಚನದಾರರು 29-39 ವಯೋ ಗುಂಪಿಗೆ ಸೇರಿದವರು, ಹೆಚ್ಚಿನ ಸೂಚನದಾರರು (21) 40-50 ರ ವಯೋ ಗುಂಪಿಗೆ ಸೇರಿದವರು, ಕಡಿಮೆ ಸಂಖ್ಯೆಯ ಅಂದರೆ 6 (12%) ಸೂಚನದಾರರು 51-60 ರ ವಯೋಮಾನಕ್ಕೆ ಸೇರಿದವರಾಗಿದ್ದಾರೆ. ಸೂಚನದಾರರ ಜಾತಿವಾರು ಹಂಚಿಕೆಯಲ್ಲಿ 13 (26%) ಜನ ಪರಿಶಿಷ್ಟ ಜಾತಿ, 10(20%) ಸೂಚನದಾರರು ಪರಿಶಿಷ್ಟ ಪಂಗಡಕ್ಕೆ, 14(28%) ಜನ ಹಿಂದುಳಿದ ವರ್ಗಕ್ಕೆ ಮತ್ತು ಉಳಿದ 13(26%) ಸೂಚನದಾರರು ಸಾಮಾನ್ಯ ವರ್ಗಕ್ಕೆ ಸೇರಿದ ಹಿಳೆಯರಾಗಿದ್ದಾರೆ. ಸೂಚನದಾರರ ಶಿಕ್ಷಣದಲ್ಲಿ ಒಟ್ಟು 19(38%) ಸೂಚನದಾರರು ಪ್ರಾಥಮಿಕ ಶಿಕ್ಷಣವನ್ನು ಆಂಶಿಕವಾಗಿ ಅಥವಾ ಸಂಪೂರ್ಣವಾಗಿ ಪೂರೈಸಿದವರಾಗಿರುತ್ತಾರೆ. 18(36%) ಸೂಚನದಾರರು ಪ್ರೌಢಶಾಲಾ ಶಿಕ್ಷಣವನ್ನು, 8(16%) ಜನ ಪದವಿಪೂರ್ವ ಶಿಕ್ಷಣವನ್ನು ಮತ್ತು 5(10%) ಜನ ಸೂಚನದಾರರು ಅನಕ್ಷರಸ್ಥರೆಂದು ತಿಳಿದು ಬಂದಿದೆ.

2. ಅಧ್ಯಯನವು ಕಂಡುಕೊಂಡತೆ, 50 ಸೂಚನದಾರರಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಪ್ರಶ್ನಿಸಿದಾಗ 40(80%) ಸೂಚನದಾರರು ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಾಗಿ ತಿಳಿಸಿದ್ದಾರೆ. 10(20%) ಸೂಚನದಾರರು ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಪೂರ್ಣ ಮಾಹಿತಿ ತಿಳಿದಿಲ್ಲ ಎಂದು ಅಭಿಪ್ರಾಯ ಪಟ್ಟರು. ಸೂಚನದಾರರಲ್ಲಿ ಸಂವಿಧಾನಿಕ ಸವಲತ್ತುಗಳ ಬಗ್ಗೆ ಪ್ರಶ್ನಿಸಿದಾಗ 30(60%) ಸೂಚನದಾರರು ಪೂರ್ಣ ಮಾಹಿತಿ ಇರುವುದಾಗಿ ಮತ್ತು 20(40%) ಸೂಚನದಾರರು ಪೂರ್ಣ ಮಾಹಿತಿ ತಿಳಿದಿಲ್ಲವೆಂದು ಪ್ರತಿಕ್ರಿಯಿಸಿದರು.

3. ಅಧ್ಯಯನದಿಂದ ಕಂಡುಕೊಂಡತೆ, ಒಟ್ಟು 43(86%) ಸೂಚನದಾರರು ಚುನಾವಣಾ ಪೂರ್ವದಲ್ಲಿ ರಾಜಕೀಯ ಪಕ್ಷಗಳ ಸದಸ್ಯತ್ವ ಹೊಂದಿರುವುದಾಗಿ ಹಾಗು 7(14%) ಸೂಚನದಾರರು ರಾಜಕೀಯ ಪಕ್ಷಗಳ ಸದಸ್ಯತ್ವ ಹೊಂದಿಲ್ಲವೆಂದು ಅಭಿಪ್ರಾಯಪಟ್ಟರು. ಚುನಾವಣೆಗೆ ಸಂಬಂಧಿಸಿದಂತೆ ರಾಜಕೀಯ

ಪಕ್ಷಗಳಿಂದ ಪಡೆದ ಬೆಂಬಲ ಕುರಿತಾಗಿ ಪ್ರಶ್ನಿಸಿದಾಗ 33(76.74%) ಸೂಚನದಾರು ಆರ್ಥಿಕ ಸಹಾಯವನ್ನು ಪಡೆದಿರುವುದಾಗಿ ಉಳಿದ 10(23.26%) ಸೂಚನದಾರರು ಚುನಾವಣಾ ಪ್ರಚಾರ ಮತ್ತು ಸಂಘಟನೆಗೆ ಪೂರಕವಾದ ನೆರವನ್ನು ಪಡೆದಿರುವುದಾಗಿ ಅಭಿಪ್ರಾಯ ಪಟ್ಟರು.

4. ಅಧ್ಯಯನದ ಪ್ರಕಾರ, ಒಟ್ಟು 43(86%) ಸೂಚನದಾರರು ಚುನಾವಣಾ ಪೂರ್ವದಲ್ಲಿ ರಾಜಕೀಯ ಪಕ್ಷಗಳ ಸದಸ್ಯತ್ವ ಹೊಂದಿರುವುದಾಗಿ ಹಾಗು 7(14%) ಸೂಚನದಾರರು ರಾಜಕೀಯ ಪಕ್ಷಗಳ ಸದಸ್ಯತ್ವ ಹೊಂದಿಲ್ಲವೆಂದು ಅಭಿಪ್ರಾಯಪಟ್ಟರು. ಚುನಾವಣೆಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳಿಂದ ಪಡೆದ ಬೆಂಬಲ ಕುರಿತಾಗಿ ಪ್ರಶ್ನಿಸಿದಾಗ 33(76.74%) ಸೂಚನದಾರು ಆರ್ಥಿಕ ಸಹಾಯವನ್ನು ಪಡೆದಿರುವುದಾಗಿ ಉಳಿದ 10(23.26%) ಸೂಚನದಾರರು ಚುನಾವಣಾ ಪ್ರಚಾರ ಮತ್ತು ಸಂಘಟನೆಗೆ ಪೂರಕವಾದ ನೆರವನ್ನು ಪಡೆದಿರುವುದಾಗಿ ಅಭಿಪ್ರಾಯ ಪಟ್ಟರು.

5. ಒಟ್ಟು 50 ಸೂಚನಾದಾರರಲ್ಲಿ 33(66%) ಮಹಿಳಾ ಪ್ರತಿನಿಧಿಗಳಿಗೆ ಸಂವಿಧಾನವು ನೀಡಿರುವ ಮಹಿಳಾ ಮೀಸಲಾತಿಯ ಹೆಚ್ಚಿನ ಮಾಹಿತಿ ಇರುವುದಾಗಿ ತಿಳಿದು ಬರುತ್ತದೆ. 17(34%) ಸೂಚನಾದಾರರಿಗೆ ಸಮರ್ಪಕ ಮಾಹಿತಿ ಇರುವುದಿಲ್ಲ ಎಂದು ತಿಳಿಯುತ್ತದೆ.

6. ಈ ಅಧ್ಯಯನದಲ್ಲಿ ತಿಳಿದು ಬಂದಂತೆ, ಒಟ್ಟು 50 ಸೂಚನಾದಾರರಲ್ಲಿ 34(68%) ಜನ ಗ್ರಾಮ ಪಂಚಾಯತದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಲ್ಲಿ ಲಿಂಗ ಮತ್ತು ಜಾತಿ ಅಡ್ಡಿಯಾಗುತ್ತದೆಂದು ತಿಳಿಸಿದ್ದಾರೆ. 16(32%) ಸೂಚನಾದಾರರು ಲಿಂಗ ಮತ್ತು ಜಾತಿಯು ಪಂಚಾಯತದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಲ್ಲಿ ಅಡ್ಡಿಯಾಗುವುದಿಲ್ಲವೆಂದು ಅಭಿಪ್ರಾಯಪಟ್ಟರು. ಲಿಂಗ ಮತ್ತು ಜಾತಿಯ ಆಧಾರದಲ್ಲಿ ಅಡ್ಡಿಯಾಗುವ ಕುರಿತು ಪ್ರಶ್ನಿಸಿದಾಗ 20(59%) ಸೂಚನಾದಾರರು ಲಿಂಗ ಮತ್ತು ಜಾತಿಗಳೆರಡೂ ಎಂದು, 8(23%) ಜನ ಕೇವಲ ಲಿಂಗ ಆಧಾರಿತ ಅಡ್ಡಿಯಾಗುವುದೆಂದು ಮತ್ತು 6(18%) ಜನ ಕೇವಲ ಜಾತಿ

ಮಾತ್ರವೇ ಪಂಚಾಯತದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಿಕೆಯಲ್ಲಿ ಅಡ್ಡಿಯಾಗುತ್ತದೆಂದು ಅಭಿಪ್ರಾಯ ಪಟ್ಟರು.

7. ಅಧ್ಯಯನದಲ್ಲಿ ತಿಳಿದಂತೆ, 50 ಸೂಚನದಾರರಲ್ಲಿ 18(36%) ಮಂದಿ ಜನರ ಬೇಡಿಕೆಗಳನ್ನು ಈಡೇರಿಸುವ ಸಾಮರ್ಥ್ಯವೇ ನಾಯಕತ್ವ ಗುಣವೆಂದು ತಿಳಿಯಪಡಿಸಿದ್ದಾರೆ. 14(28%) ಮಂದಿ ನಾಯಕತ್ವ ಗುಣವೆಂದರೆ ಜನರ ಹಿತಾಸಕ್ತಿಯನ್ನು ರಕ್ಷಿಸುವುದು ಎಂದು, ಕೇವಲ 10(20%) ಮಂದಿ ಜನ ಸಂಘಟಿಸುವ ಶಕ್ತಿಯೇ ನಾಯಕತ್ವ ಗುಣವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

8. 50 ಸೂಚನದಾರರಲ್ಲಿ ಹೆಚ್ಚಿನ 32(64%) ಮಂದಿ ತಾವು ಯಾವುದೇ ಗುಂಪು/ಸಂಘಗಳಲ್ಲಿ ಅಧ್ಯಕ್ಷ ಹುದ್ದೆ ಹೊಂದಿಲ್ಲವೆಂದು ಹೇಳಿಕೊಂಡಿದ್ದಾರೆ. ಇವರಲ್ಲಿ ಕೇವಲ 4(08%) ಮಂದಿ ಮಾತ್ರ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಇಲ್ಲ ಎಂದು ಹೇಳಿಕೊಂಡಿದ್ದಾರೆ. ಆದರೆ 28(56%) ಮಂದಿ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಹೊಂದಿದ್ದಾರೆ. ಆದರೆ 18(36%) ಮಂದಿ ಗುಂಪು/ಸಂಘಗಳಲ್ಲಿ ಅಧ್ಯಕ್ಷ ಹುದ್ದೆ ಹೊಂದಿರುವುದಾಗಿ ಹೇಳಿಕೊಂಡಿದ್ದಾರೆ. ಇವರಲ್ಲಿ ಕೇವಲ ಇಬ್ಬರಿಗೆ ಮಾತ್ರ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಇಲ್ಲ. ಗ್ರಾಮ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಬಗ್ಗೆ ಸೂಚನದಾರರಲ್ಲಿ ಕೇಳಿ ಕೊಂಡಾಗ ಬಹುಭಾಗ 44(88%) ಮಂದಿ ತಾವು ಗ್ರಾಮ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಹೊಂದಿರುವುದಾಗಿ ಹಾಗೂ ಕೇವಲ 6(12%) ಸೂಚನದಾರರು ತಮಗೆ ಗ್ರಾಮ ಪಂಚಾಯತ್ ಅಧ್ಯಕ್ಷರಾಗುವಲ್ಲಿ ಆಸಕ್ತಿ ಆ ಹೊಂದಿಲ್ಲವೆಂದು ಹೇಳಿಕೊಂಡಿದ್ದಾರೆ.

ಅಧ್ಯಾಯ-6

ಮುಕ್ತಾಯ

6:ಮುಕ್ತಾಯ

ಸಂವಿಧಾನವನ್ನು ರಚಿಸುವ ಸಂದರ್ಭದಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರಂತಹ ಪ್ರಜ್ಞಾವಂತರು ದಲಿತವರ್ಗದವರಂತೆ ಮಹಿಳೆಯರನ್ನು ದುರ್ಬಲ ವರ್ಗದವರೆಂದು ಪರಿಗಣಿಸಿ ಸಂವಿಧಾನದ ಮೂರನೇ ಅಧ್ಯಯದ ಮೂಲಭೂತ ಹಕ್ಕುಗಳನ್ನು ಕುರಿತಂತೆ ಸಮಾನತೆಯ ಪರಿಕಲ್ಪನೆಯನ್ನು ತಂದಿದ್ದರು ಇದಕ್ಕೆ ಪರಿಚ್ಛೇದ 14, ಸಮಾನತೆಯ ಹಕ್ಕು ಸಾಕ್ಷಿಯಾಗಿದೆ. ಒಂದು ಪ್ರಾಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿವಿಧ ರಾಜಕೀಯ ಸ್ತರಗಳಿಗೆ ಪುರುಷರಂತೆ ಮಹಿಳೆಯರಿಗೆ ಭಾಗವಹಿಸಲು ಮುಕ್ತ ಅವಕಾಶವಿದೆ. ಆದರೆ ಈ ಅವಕಾಶಗಳಿದ್ದರೂ, ಸುಶಿಕ್ಷಿತ ಮಹಿಳೆಯರು, ರಾಜಕೀಯವನ್ನು ಪ್ರವೇಶಿಸುವುದಕ್ಕೆ ಹಿಂಜರಿಯುತ್ತಿರುವುದು ಪ್ರಾಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಹಿನ್ನಡೆಯೆಂದು ತಿಳಿಯಬಹುದು. ಪ್ರಜಾಪ್ರಭುತ್ವ ಸರ್ಕಾರವು ಪ್ರಜೆಗಳ ವಿಕಾಸವನ್ನು ಸಾಮಾಜಿಕ ಬದಲಾವಣೆಗಳನ್ನು ಸ್ತ್ರೀ ಪುರುಷರೆಂಬ ಪಕ್ಷಪಾತವಿಲ್ಲದೆ ತರುವಂತಹ ವ್ಯವಸ್ಥೆಯಾಗಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಶೈಕ್ಷಣಿಕ ಸೌಲಭ್ಯಗಳು ಸಾಕಷ್ಟು ಬೆಳವಣಿಗೆಯಾಗಿರುವುದರಿಂದ ಮಹಿಳೆಯರು ಶಿಕ್ಷಣವನ್ನು ಪಡೆಯುವುದು ಹಾಗು ಪಡೆಯುತ್ತಿರುವುದು ಪ್ರಜಾಪ್ರಭುತ್ವದ ಆರೋಗ್ಯಕರ ಬೆಳವಣಿಗೆಯಾಗಿದೆಯೆಂದೆ ಪರಿಗಣಿಸಬೇಕು. ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವುದು ಅವರ ಸಬಲೀಕರಣಕ್ಕೆ ಅತ್ಯಗತ್ಯ. ಒಂದು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ರಾಜಕೀಯ ಪ್ರಕ್ರಿಯೆಯಗಳಲ್ಲಿ ಪಾಲ್ಗೊಂಡು ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಮಹಿಳೆಯರ ಪಾತ್ರವು ಪ್ರಾಮುಖ್ಯವಾಗಿರುತ್ತದೆ. ರಾಜಕೀಯದಲ್ಲಿ ಮಹಿಳೆಯರು ಪಾಲ್ಗೊಳ್ಳುವುದು ಅದರಲ್ಲೂ ಕೆಳಹಂತದ ಗ್ರಾಮ ಪಂಚಾಯತದಲ್ಲಿ ಪಾಲ್ಗೊಳ್ಳುವುದು ಮೂಲದಿಂದಲೇ ಸಮಾನತೆಯ ಸರ್ವಕಾಲಿಕ ಮೌಲ್ಯವನ್ನು ಅನುಷ್ಠಾನಗೊಳಿಸಲು ಅನುಕೂಲಕರವಾಗುತ್ತದೆ ಎಂದು ಪ್ರಸ್ತುತ ಸಂಶೋಧನ ಅಧ್ಯಯನವು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡುತ್ತದೆ. ಮುಂದಿನ ಅಧ್ಯಯವು ರಾಜಕೀಯದಲ್ಲಿ ಮಹಿಳಾ ಮೀಸಲಾತಿ ಕುರಿತಂತೆ ಅಧ್ಯಯನ ಮಾಡುತ್ತದೆ.

6.01: ಮುಂದಿನ ಅಧ್ಯಯನಕ್ಕಾಗಿ ಸಲಹೆಗಳು

1. ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಆಧುನಿಕ ಅಭಿವೃದ್ಧಿ ಸಿದ್ಧಾಂತಗಳ ಮೂಲಕ ವಿಶ್ಲೇಷಣೆ ಮಾಡುವ ಅಗತ್ಯವಿದೆ.
2. ಮಹಿಳೇಯರ ರಾಜಕೀಯ ಭಾಗವಹಿಸುವಿಕೆಗೆ ತೊಡಕಾಗುವ ಸಾಮಾಜಿಕ ಮತ್ತು ಇತರೇ ಮರೆಮಾಚಿದ ಆಯಾಮಗಳನ್ನು ಅರ್ಥೈಸಿಕೊಳ್ಳಲು ಬಹು–ಶಿಸ್ತಿಯ ಅಧ್ಯನವನ್ನು ಕೈಗೊಳ್ಳುವುದು.
3. ಮಹಿಳೆಯರಲ್ಲೂ, ದಮನಿತ ವರ್ಗದ ಮಹಿಳೆಯರ ಮತ್ತು ನಿಮ್ನ ವರ್ಗದ ಮಹಿಳೆಯರ ಕುರಿತಾಗಿ ವಿಶೇಷವಾಗಿ ಅಧ್ಯಯನ ನಡೆಸುವುದು.
4. ಸರಕಾರ ಮತ್ತು ಸರಕಾರೇತರ ಸಂಸ್ಥೆಗಳ ಉಪಕ್ರಮದಿಂದ ಮಹಿಳೆಯರ ಮತ್ತು ಅವರ್ ರಾಜಕೀಯ ಭಾಗವಹಿಸುವಿಕೆಯ ಮೇಲೆ ಆಗಿರುವ ಪ್ರಭಾವವನ್ನು ಮಾಪನ ಮಾಡುವುದು.
5. ಬಲಿಷ್ಠ ಮತ್ತು ಸುಸ್ಥಿರ ಗ್ರಾಮ ಪ್ರಭುತ್ವವನ್ನು ಸಾಧಿಸುವುದಕ್ಕೆ ಪೂರಕವಾದ ಅಭಿವೃದ್ಧಿ ಸಂಶೋಧನೆಗಳನ್ನು ರೂಪಿಸುವುದು ಮತ್ತು ಕೈಗೊಳ್ಳುವುದು.

ಪರಾಮರ್ಶನ ಗ್ರಂಥಸೂಚಿ

ಶಶಿ ಕೌಲ್ ಮತ್ತು ಶ್ರದ್ಧಾ ಶಾನಿ (2009). ಸ್ಟಡಿ ಆನ್ ದಿ ಪಾರ್ಟಿಸಿಪೇಸನ್ ಆಫ್ ವುಮೆನ್ ಇನ್ ಪಂಚಾಯತ್ ರಾಜ್ ಇನ್‌ಸ್ಟ್ಯುಟಿಸನ್. ಜರ್ನಲ್ ಆಫ್ ಸೋಷಿಯಲ್ ಸಾಯನ್ಸ್. ಕೆ.ಆರ್.ಇ ಪಬ್ಲಿಕೇಷನ್. ನವದೆಹಲಿ.

ರೂಪಾಶ್ರೀ ಸಿನ್ಹಾ, ಆಶಾ ಸಿಂಗ್ ಮತ್ತು ಪಿಯೂಷ್ ಬಾಜಪೈ (೨೦೦೨). ವುಮೆನ್ ಪಾರ್ಟಿಸಿಪೆಸನ್ ಇನ್ ಪಂಚಾಯತ್ ರಾಜ್ ಫಾರ್ ಇಪ್ರೂವಿಂಗ್ ಹೆಲ್ತ್ ಸ್ಟೇಟಸ್; ಅ ಕೇಸ್ ಫಾರ್ ಉತ್ತರ ಪ್ರದೇಶ. ಆರ್ನಲ್ ಆಫ್ ಫ್ಯಾಮಿಲಿ ವೆಲ್ಫೇರ್. ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೆಸನ್. ಮುಂಬಯಿ.

ಮಿನ್ನಿ ಥಾಕೂರು (೨೦೧೦). ವುಮೆನ್ ಎಂಪವರ್‌ಮೆಂಟ್ ಥ್ರೂ ಪಂಚಾಯತ್ ರಾಜ್ ಇನ್‌ಸ್ಟ್ಯುಟಿಸನ್. ನವದೆಹಲಿ: ಕಾನ್ಸೆಪ್ಟ್ ಪಬ್ಲಿಕೇಷನ್.

ಅಶ್ವಿನಿ ಕುಮಾರ್ (2012), ಪಾರ್ಟಿಸಿಪೆಷನ್ ಆಫ್ ವೀಕರ್ ಸೆಕ್ಷನ್ ಇನ್ ಪಂಚಾಯತ್ ರಾಜ್ ಇನ್‌ಸ್ಟ್ಯುಟಿಸನ್ ಆಫ್ ಜಮ್ಮು ಎಂಡ್ ಕಾಶ್ಮೀರ್. ಇಂಟರ್ ನ್ಯಾಷನಲ್ ಜರ್ನಲ್ ಆಫ್ ಇನ್ನೊವೇಟಿವ್ ರಿಸರ್ಚ್ ಎಂಡ್ ಡಿವೆಲಪ್‌ಮೆಂಟ್. ಇಂಡಿಯಾ ಪಬ್ಲಿಕೇಷನ್. ನವದೆಹಲಿ.

ಕೆ.ಸಿ. ವಿದ್ಯಾ(1994), ವುಮೆನ್ ಎಂಡ್ ಪಂಚಾಯತ್ ರಾಜ್ ಇನ್‌ಸ್ಟ್ಯುಟಿಸನ್ಸ್. ಎ ಕೇಸ್ ಸ್ಟಡಿ ಆಫ್ ಎ ಡಿಸ್ಟ್ರಿಕ್ಟ್ ಇನ್ ಕರ್ನಾಟಕ. ಅಪ್ರಕಟಿತ ಪಿ.ಹೆಚ್.ಡಿ ಪ್ರೌಢಪ್ರಬಂಧ. ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಸಾಕ್). ಬೆಂಗಳೂರು.

ಅಸ್ಲಾಮ್.ಎಮ್, (2007), ಭಾರತದಲ್ಲಿ ಪಂಚಾಯತ್‌ರಾಜ್, ನಾಷನಲ್ ಬುಕ್‌ಟ್ರಸ್ಟ್. ಹೊಸದೆಹಲಿ.

ಬಾಗೆಲ್.ಐ, (2009), " ದಲಿತ್ ವುಮೆನ್‌ಇನ್ ಪಂಚಾಯತ್‌ರಾಜ್", ಜ್ಞಾನದ ಪ್ರಕಾಶನ. ನವದೆಹಲಿ.

ಸಿಂಗ್ಲಾ.ಪಿ, (2007), " ವಿಮೆನ್ ಪಾರ್ಟಿಸಿಪೇಷನ್ ಇನ್ ಪಂಚಾಯತ್‌ರಾಜ್", ರಾವತ್ ಪಬ್ಲಿಕೇಷನ್. ಜೈಪುರ್.

ದಾಕ.ಎಸ್, (2005), " ಬಿಹೈಂಡ್ ದಿ ವೈಲ್- ದಲಿತ್ ವಿಮೆನ್‌ಇನ್ ಪಂಚಾಯತ್‌ರಾಜ್", ಅಭಿಜಿತ್‌ಪಬ್ಲಿಕೇಷನ್, ದೆಹಲಿ.

ಗುಪ್ತ.ಶಾಕುಂತಲಾ, (2005), "ವಿಮೆನ್ ಡೆವೆಲಪ್‌ಮೆಂಟ್ ಇನ್ ಇಂಡಿಯಾ",ಅನ್ಮೋಲ್ ಪಬ್ಲಿಕೇಷನ್. ನವಹೆಹಲಿ.

ಬಸವ.ಡಿ, (2001), " ಭಾರತದ ಆರ್ಥಿಕತೆ ಮತ್ತುಅಭಿವೃದ್ಧಿಯ ಆಯಾಮಗಳು",ಚೇತನಾ ಬುಕ್ ಹೌಸ್. ಮೈಸೂರು.

ಜಯಶೀಲ, ಸುಧಾಕರ್.ಎಸ್, (2006), "ಕರ್ನಾಟಕ ವಿಕಾಸ", ಗ್ರಾಮೀಣ ಮಹಿಳೆಯರ ಸಬಲೀಕರಣದ ವಿವಿಧ ಆಯಾಮಗಳು, ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು.

ಹೆಚ್.ಡಿ.ಮಾಳವಿಯಾ, (1965), "ವಿಲೇಜ್ ಪಂಚಾಯತ್ಇನ್ಇಂಡಿಯಾ, ಆಲ್ ಇಂಡಿಯಾ ಕಾಂಗ್ರೇಸ್ ಕಮಿಟಿ", ನವದೆಹಲಿ.

ಗಾಂಧಿ.ಎಮ್.ಕೆ, (1942), "ಮೈ ಐಡಿಯಾಆಫ್ ವಿಲೇಜ್ ಸ್ವರಾಜ್, ಹರಿಜನ್ ಪತ್ರಿಕೆ".

ಮೆಹ್ತಾ. ಬಿ.ಜಿ, (1957), ಕಮಿಟಿಆನ್ ಪ್ಲಾನ್ ಪ್ರಾಜೆಕ್ಟ್ಸ್: ಸ್ಟಡಿಟೀಮ್, ಪ್ಲಾನಿಂಗ್ಕಮಿಷನ್, ಭಾರತ ಸರ್ಕಾರ, ನವಹೆಹಲಿ.

ಶರ್ಮಾ ಸೀಮಾ, ಶಮಾ ಕಾಂತಾ, (2006), ವುಮನ್ ಆಂಡ್ ಪಾಲಿಟಿಕ್ಸ್' ಅನಮೋಲ್ ಪ ಬ್ಲಿ ಕೇಶನ್ ಪಿವಿಟಿ, ಎಲ್‌ಟಿಡಿ., ೪೩೭೪/೪ಬಿ, ದ ರಿಯಾಗಂಜ್, ನ್ಯೂ ಡೆಲ್ಲಿ .

ಮಿಶ್ರಾ ಕವಿತಾ (2006) ವುವ ೦ನ್ಸ್ ರೋಲ್ ಇನ್ ಪೋಲಿಟಿಕ್ಸ್ ಇನ್ ಮಾರ್ಡನ್ ವರ್ಲ್ಡ್, ಓಮೇಗಾ ಪಬ್ಲಿಕೇಶನ್,೪೩೭೮/೫ ಆನಸ್ಸಾರಿ ರೋಡ್, ದರಿಯಾಗಂಜ್, ನ್ಯೂ ಡೆಲ್ಲಿ.

ದತ್ತ ಸುಜೀತ್ ಕುಮಾರ್, ಘೆ ೦ೀಶ ದೀಲಿಪ್ ಕುಮಾರ್, (2002). ಎಂಪ ವರಿಂಗ ರುರಲ್ ವುಮನ್. ವುಮನ್ ಇನ್ ಪಂಚಾಯತ್, ಅಂಕಶಾ ಪಬ್ಲಿಕೇಟಿಂಗ ಹೌಸ್, ಆರ್-೩೭ಬಿ, ವಾಣಿ ವಿಹಾರ, ಉತ್ತಮ ನಗರ, ನ್ಯೂ ಡೆಲ್ಲಿ.

ಕೆ. ಸಿ. ವಿದ್ಯಾ, (2007), ಪೋಲಿಟಿಕ ಲ್ ಎಂಪರಮೆಂಟ್ ಆಫ ್ ವುಮನ್ ಅಟ್ ದ ಗಾಸರೂಡ್ಸ್,ಕನಿಷ್ಕಾಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್, ೪೬೯೭/೫-೨೧ಎ, ಅನಸ್ಸಾರಿ ರೋಡ್, ನ್ಯೂ ಡೆಲಿ.

ಜೆ. ಮೀನಾಕ್ಷಿ, (2007), ವುಮನ್ ಆಂಡ್ ಪಂಚಾಯತರಾಜ್, ಓಮೇಗಾ ಪಬ್ಲಿಕೇಷನ್,೪೩೭೮/೫ ಅನಸ್ಸಾರಿ ರೋಡ್, ದರಿಯಾಗಂಜ್, ನ್ಯೂ ಡೆಲ್ಲಿ.

ಅಲ್ಕೋಡ್ ವಾಯ್ ಲಕ್ಷ್ಮೀದೇವಿ. (2005), 'ಸ್ಥಾನಿಕ ಸರಕಾರಿ ಸಂಸ್ಥೆಗಳಲ್ಲಿ ಮಹಿಳೆಯರು, ಸಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿ ನಗರ, ಬೆಂಗಳೂರು-೫೬೦೦೦೯.

ಪೂನಚಾ ವೀಣಾ (2007) ಆರ್‌ಸಿಡ್ಲ್ಯೂಎಸ್ ಜಂಡರ್ ಸೀರಿಜ್ – ಜಂಡರ್ ಅಂಡ್ ಪಾಲಿಟಿಕ್ಸ್ : ಬುಕ್-೩, ವುಮನ್ ಎಂರಮೆಂಟ್ ಆಂಡ್ ಪೋಲಿಟಿಕಲ್ ಪಾರ್ಟಿಸಿಪೇಶನ್.

ಶ್ರೀರಾಜ್ ಬಾಲಸರಾ (2003) ದ ಪಂಚಾಯತರಾಜ್ ಆಂಡ್ ದ ರೆಟಾರಿಕ್ ಆಫ್ ವುಮನ್ ಎಂಪರಮೆಂಟ್: ದ ಡೈಲೆ ಮಾ ಬಿಫೋರ್ ನಾನ್ ಪಾರ್ಟಿ ಫೆಮಿನಿಸ್ಟ್‌ಗ್ರುಪ್.

ಕಲಾಲ್ ರಾಮ್ 'ಪಂಚಾಯತರಾಜ್ ವ್ಯವಸ್ಥೆಯಲ್ಲಿ ದಲಿತ ಮಹಿಳಾ ಪ್ರತಿನಿಧೀಕರಣ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಸಲ್ಲಿಸಿದ ಪಿಎಚ್. ಡಿ ಮಹಾಪ್ರಬಂಧ, 2009

ಅನುಬಂಧಗಳು

ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ ಎಂ.ಫಿಲ್ ಪದವಿಗಾಗಿ ರಚಿಸಲ್ಪಟ್ಟ ಪ್ರಶ್ನಾವಳಿ)

ಸ್ಥಳ:
ದಿನಾಂಕ:

ಸಂಶೋಧಕರು: ಸುಜಯ.ಪಿ., ಸಂಶೋಧನಾ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕರ್ನಾಟಕ ಥಿಯಾಲಾಜಿಕಲ್ ಸಂಶೋಧನಾ ಕೇಂದ್ರ.
ಬಲ್ಮಠ, ಮಂಗಳೂರು.

A. ವೈಯಕ್ತಿಕ ಮಾಹಿತಿ

೧. ವಯಸ್ಸು:

೨. ಗ್ರಾಮ ಪಂಚಾಯತ್ ಹೆಸರು:

೩. ಜಾತಿ: ಪ.ಜಾ/ಪ.ಪಂ/ಹಿಂ.ವರ್ಗ/ಸಾಮಾನ್ಯ

೪. ಶಿಕ್ಷಣ: ಅನಕ್ಷರಸ್ಥೆ/ಪ್ರಾಥಮಿಕ ಶಿಕ್ಷಣ/ಪ್ರೌಢ ಶಿಕ್ಷಣ/ಪದವಿ ಪೂರ್ವ/ಪದವಿ ಮತ್ತು ಇತರೆ(ಉಲ್ಲೆಖಿಸಿ)

೫. ವೈವಾಹಿಕ ಸ್ಥಿತಿ: ವಿವಾಹಿತೆ/ಅವಿವಾಹಿತೆ/ವಿಧವೆ

೬. ಉದ್ಯೋಗ: ಕೂಲಿ / ಕೃಷಿ ಸಂಬಂಧಿ / ಸ್ವ-ಉದ್ಯೋಗ / ಬೀಡಿ/ ಇತರೆ (ಉಲ್ಲೇಖಿಸಿ)

೭. ಆದಾಯ: ೧೨,೦೦೦ ಕ್ಕಿಂತ ಕಡಿಮೆ/೧೩,೦೦೦-೨೩,೦೦೦/೨೪,೦೦೦-೩೪,೦೦೦/೩೪,೦೦೦ ಕ್ಕಿಂತ ಹೆಚ್ಚು.

೮. ತಾವು ಚುನಾವಣೆಯಲ್ಲಿ ಆಯ್ಕೆಯಾದುದು ಹೇಗೆ? ಅ) ಪಕ್ಷದ ಅಭ್ಯರ್ಥಿಯಾಗಿ ಇ) ಸ್ವತಂತ್ರ ಅಭ್ಯರ್ಥಿಯಾಗಿ. ಉ) ನಾಮನಿರ್ದೇಶಿತ ಅಭ್ಯರ್ಥಿಯಾಗಿ.

B. ಮಹಿಳಾ ಪ್ರಾತಿನಿಧ್ಯ

೯. ನಿಮಗೆ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಅರಿವಿದೆಯೆ?
ಅ) ಹೌದು ಆ) ಇಲ್ಲ ಇ) ಭಾಗಶಃ

೧೦. ಸಂವಿಧಾನಿಕ ಸವಲತ್ತುಗಳ ಬಗ್ಗೆ ನಿಮಗೆ ತಿಳಿದಿದೆಯ?
ಅ) ಹೌದು ಆ) ಇಲ್ಲ

೧೧. ಚುನಾವಣೆ ಪೂರ್ವದಲ್ಲಿ ನೀವು ಯಾವುದಾದರೂ ರಾಜಕೀಯ ಪಕ್ಷದ ಸದಸ್ಯರಾಗಿದ್ದೀರಾ?
ಅ) ಹೌದು ಆ) ಇಲ್ಲ

೧೧. ಹೌದಾದರೆ, ಚುನಾವಣೆಯಲ್ಲಿ ಸ್ಪರ್ಧಿಸಲು ರಾಜಕೀಯ ಪಕ್ಷಗಳು ಹೇಗೆ ನೆರವಾದವು?

ಅ) ಆರ್ಥಿಕ ಆ) ಚುನಾವಣ ಪ್ರಚಾರ ಇ) ಸಂಘಟನೆ

೧೨. ನೀವು ಪ್ರತಿದಿನ ಪಂಚಾಯತ್ ಕಛೇರಿಗೆ ಭೇಟಿ ನೀಡುತ್ತೀರಾ?

ಅ) ಹೌದು ಆ) ಇಲ್ಲ

೧೩. ನೀವು ನಿರಂತರವಾಗಿ ಪಂಚಾಯತ್ ಸಭೆಗಳಲ್ಲಿ ಭಾಗವಹಿಸುತ್ತೀರಾ?

ಅ) ಹೌದು ಆ) ಇಲ್ಲ

೧೪.ಮಹಿಳೆಯರು ಕ್ರಿಯಾತ್ಮಕವಾಗಿ ಪಂಚಾಯತ್ ಸಭೆಗಳಲ್ಲಿ ಭಾಗವಹಿಸುತ್ತಾರೆಂದು ನಿಮಗೆ ಅನಿಸುತ್ತಿದೆಯಾ?

ಅ) ಹೌದು ಆ) ಇಲ್ಲ

೧೫. ಇಲ್ಲವೆಂದಾದರೆ ಯಾಕೆ? ವಿವರಿಸಿ

----

೧೬. ನಿಮಗೆ ಮಹಿಳಾ ಮೀಸಲಾತಿಯ ಬಗ್ಗೆ ಅರಿವು ಇದೆಯಾ?

ಅ) ಹೌದು ಆ) ಇಲ್ಲ

೧೭. ನೀವು ಪಂಚಾಯತ್ ಸಭೆಯಲ್ಲಿ ನಿಮ್ಮ ಭಾಗವಹಿಸುವಿಕೆಯನ್ನು ಹೇಗೆ ಸಮರ್ಥಿಸಿಕೊಳ್ಳುತ್ತೀರಿ?

ಅ) ಅತ್ಯುತ್ತಮ ಆ) ಉತ್ತಮ ಇ) ಸಾಧಾರಣ

೧೮. ಪಂಚಾಯತ್ ಕಾರ್ಯಗಳಲ್ಲಿ ಭಾಗವಹಿಸುವಲ್ಲಿ ನಿಮಗೆ ನಿಮ್ಮ ಜಾತಿ ಮತ್ತು ಲಿಂಗ ಅಡ್ಡಿ ಮಾಡುತ್ತದೆಯೆ?

ಅ) ಹೌದು ಆ) ಇಲ್ಲ

೧೯. ಹೌದಾದರೇ, ಯಾವುದು?

ಅ) ಲಿಂಗ ಆ) ಜಾತಿ ಇ) ಎರಡೂ

C. ನಾಯಕತ್ವದ ಗುಣ

೨೦. ನಿಮ್ಮ ದೃಷ್ಟಿಯಲ್ಲಿ ನಾಯಕತ್ವ ಎಂದರೇನು?

ಅ) ಜನ ಸಂಘಟನೆ

ಆ) ಜನರ ಆಸಕ್ತಿಯನ್ನು ರಕ್ಷಿಸುವ ಸಾಮರ್ಥ್ಯ

ಇ) ವಿಚಾರಧಾರೆಯನ್ನು ಬೆಳೆಸುವ ಸಾಮರ್ಥ್ಯ

ಈ) ಜನರ ಬೇಡಿಕೆಯನ್ನು ಈಡೇರಿಸುವ ಸಾಮರ್ಥ್ಯ

೨೧. ನೀವು ಪಂಚಾಯತ್ ಅಧ್ಯಕ್ಷೆ ಆಗಲು ಬಯಸುತ್ತೀರಾ?
ಅ) ಹೌದು ಆ) ಇಲ್ಲ

೨೨. ನೀವು ಯಾವುದಾದರು ಸಂಘ-ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿದ್ದೀರಾ?
ಅ) ಹೌದು ಆ)ಇಲ್ಲ

೨೩. ಅಧಿಕಾರವನ್ನು ಚಲಾಯಿಸುವಲ್ಲಿ ನಿಮಗೆ ಸಹ ಸದಸ್ಯರ ಸಹಕಾರ ದೊರೆತಿದೆಯ?
ಅ) ಹೌದು ಆ)ಇಲ್ಲ

೨೪. ಹೌದಾದರೆ ಯಾವ ರೀತಿಯ ಸಹಕಾರ ದೊರೆತಿದೆ,ವಿವರಿಸಿ.

೨೫. ಚುನಾಯಿತ ಸದಸ್ಯರಿಗೆ ಪಂಚಾಯತ್ ರಾಜ್ ಸಂಸ್ಥೆಯು ನೀಡುವ ತರಬೇತಿಯಲ್ಲಿ ಭಾಗವಹಿಸಿದ್ದೀರಾ?
ಅ) ಹೌದು ಆ)ಇಲ್ಲ

೨೬. ಹೌದಾದರೆ, ಯಾವ ವಿಧದ ತರಬೇತಿ?
ಅ) ವಸತಿಯುತ ಪೂರ್ಣವಧಿ ತರಬೇತಿ ಆ) ಭಾಗಶಃ ತರಬೇತಿ

೨೭. ಈ ತರಬೇತಿಯು ನಿಮಗೆ ಉಪಯುಕ್ತ ಅನ್ನಿಸಿದೆಯ?
ಅ) ಹೌದು ಆ)ಇಲ್ಲ

D. ಕುಟುಂಬದ ಬೆಂಬಲ

೨೮. ಚುನಾಯಿತ ಪ್ರತಿನಿಧಿಯಾಗಿ ಆಯ್ಕೆಯಾದ ನಂತರ ಕುಟುಂಬದಿಂದ ಯಾವ ರೀತಿಯ ಸಹಕಾರ ಪಡೆಯುತ್ತೀರಿ?
ಅ) ಆರ್ಥಿಕ ಆ) ರಾಜಕೀಯ ಈ) ನೈತಿಕ ಬೆಂಬಲ.

೨೯. ಗ್ರಾಮ ಪಂಚಾಯತ್ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲು ನಿಮಗೆ ಕುಟುಂಬದ ಸದಸ್ಯರು ಸಹಕಾರ ನೀಡುತ್ತಾರೆಯೆ?
ಅ) ಹೌದು ಆ) ಇಲ್ಲ.

೩೦. ಗ್ರಾಮ ಪಂಚಾಯತ್ ಸದಸ್ಯೆರಾದ ನಂತರ ಕುಟುಂಬದ ಸದಸ್ಯರ ಅನಿಸಿಕೆ ಏನು?
ಅ) ಸಂತೋಷ ಆ) ಅಸಂತೋಷ

೩೧. ಚುನಾಯಿತ ಪ್ರತಿನಿಧಿಯಾದ ನಂತರ ಕುಟುಂಬದ ಜವಾಬ್ದಾರಿ ನಿರ್ವಹಿಸುವಲ್ಲಿ ಬದಲಾವಣೆಯಾಗಿದೆಯಾ?
ಅ) ಹೌದು ಆ)ಇಲ್ಲ

೩೨. ಹೌದಾದರೆ, ಯಾವ ರೀತಿಯ ಬದಲಾವಣೆಯಾಗಿದೆ ವಿವರಿಸಿ.

---

೩೩. ಚುನಾಯಿತ ಸದಸ್ಯೆಯಾದ ನಂತರ ನಿಮಗೆ ಯಾವುದೇ ರೀತಿಯ ಕೌಟುಂಬಿಕ ಸಮಸ್ಯೆಯನ್ನು ಎದುರಿಸಿದ್ದೀರಾ?
ಅ) ಹೌದು ಆ)ಇಲ್ಲ

೩೪. ಹೌದಾದರೆ ಯಾವ ರೀತಿಯ ಸಮಸ್ಯೆಗಳನ್ನು ಎದುರಿಸಿದ್ದೀರಿ?
ಅ) ಮನೆವಾರ್ತೆ ನಿಭಾಯಿಸುವಲ್ಲಿ ಆ) ಕೌಟುಂಬಿಕ ಅಸಮಾಧಾನ ಇ)ಆರ್ಥಿಕ ಸಮಸ್ಯೆ

೩೫. ಚುನಾಯಿತ ಸದಸ್ಯರಾದ ನಂತರ ಕೌಟುಂಬಿಕ ಸಮಾರಂಭಗಳಲ್ಲಿ ನಿಮ್ಮನ್ನು ಗುರುತಿಸುವ ದೃಷ್ಟಿಕೋನ ಹೇಗಿದೆ?

ಅ) ಗೌರವಯುತವಾಗಿ ಆ)ಸಾಮಾನ್ಯರಂತೆ ಇ)ಮೊದಲಿನಂತೆ

E. ಹಕ್ಕು ಮತ್ತು ಕರ್ತವ್ಯಗಳ ಅರಿವು

೩೬. ನಿಮಗೆ ಪಂಚಾಯತ್ ಆಡಳಿತ ಸದಸ್ಯರಾಗಿ ನಿರ್ವಹಿಸಬೇಕಾದ ಕೆಲಸ ಕಾರ್ಯಗಳ ಬಗ್ಗೆ ಸಂಪೂರ್ಣ ಮಾಹಿತಿಯಿದೆಯ?
ಅ) ಗೊತ್ತಿದೆ ಆ)ಗೊತ್ತಿಲ್ಲ ಇ)ಸಾಧಾರಣ

೩೭. ನಿಮಗೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಮರ್ಪಕ ತಿಳುವಳಿಕೆಯಿದೆಯಾ?
ಅ) ಗೊತ್ತಿದೆ ಆ)ಗೊತ್ತಿಲ್ಲ ಇ)ಸಾಧಾರಣ

೩೮. ಪಂಚಾಯತ್ ಕೆಲಸ ಕಾರ್ಯಗಳನ್ನು ನಿರ್ವಹಿಸುವಲ್ಲಿ ಅಧಿಕಾರಿಗಲ್ಳು/ಸಿಬ್ಬಂದಿಗಳು ಸಹಕರಿಸುತ್ತಾರಾ?
ಅ) ಹೌದು ಆ)ಇಲ್ಲ

೩೯. ಇಲ್ಲವಾದರೆ ಯಾಕಿಲ್ಲ? ವಿವರಿಸಿ.

೪೦. ಹೊಸತಾಗಿ ನೇಮಕವಾಗಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?
ಅ) ಅನುಕೂಲ ಆ) ಅನಾನುಕೂಲ ಇ) ಅವರ ಅಗತ್ಯವಿಲ್ಲ

೪೧. ಅವರ ಅಗತ್ಯವಿಲ್ಲವೆಂದರೆ ಯಾಕೆ?ವಿವರಿಸಿ.

---

೪೨. ಪಂಚಾಯತ್ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ತಾವು ನೇರವಾಗಿ ಮೇಲಾಧಿಕಾರಿಗಳ ಜೊತೆ ಸಂವಹನ ನಡೆಸಲು ಸಶಕ್ತರೆ?

ಅ) ಹೌದು ಆ)ಇಲ್ಲ

೪೩. ಇಲ್ಲವಾದರೇ ಯಾಕೆ?
ಅ) ಸಂವಹನ ಕೌಶಲ್ಯದ ಕೊರತೆ ಆ)ಅಧಿಕಾರಿಗಳು ಅಪರಿಚಿತರು ಇ)ಕಾರ್ಯ ಬಾಹುಳ್ಯ.

೪೪. ಸ್ಥಳಿಯ ರಾಜಕೀಯ ನಾಯಕರನ್ನು ಭೇಟಿಯಾಗಿ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿದ್ದೀರಾ?
ಅ) ಹೌದು ಆ)ಇಲ್ಲ

೪೫. ಹೌದಾರೆ ಎಷ್ಟು ಸಮಯಕ್ಕೊಮ್ಮೆ ಭೇಟಿಯಾಗುತ್ತೀರಿ?
ಅ) ಪ್ರತಿ ತಿಂಗಳು ಆ) ಮೂರು ತಿಂಗಳಿಗೊಮ್ಮೆ ಇ) ಆರು ತಿಂಗಳಿಗೊಮ್ಮೆ ಈ) ಅವಕಾಶ ದೊರೆತಾಗ ಮಾತ್ರ

F. ಸಾರ್ವಜನಿಕ ಅಭಿಪ್ರಾಯ

೪೬. ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ತಮ್ಮ ಮತ ಕ್ಷೇತ್ರದವರಿಗೆ ಸಮರ್ಪಕ ಮಾಹಿತಿಯನ್ನು ನೀಡುತ್ತೀರಾ?
ಅ) ಹೌದು ಆ)ಇಲ್ಲ

೪೭. ನಿಮ್ಮ ಕ್ಷೇತ್ರದ ಮತದಾರರು ಕೆಲಸ ಕಾರ್ಯಗಳಿಗೆ ನೇರವಾಗಿ ನಿಮ್ಮನ್ನು ಸಂಪರ್ಕಿಸುತ್ತಾರಾ?
ಅ) ಹೆಚ್ಚಿನ ಸಂದರ್ಭಗಳಲ್ಲಿ ಆ)ಕೆಲವು ಸಂದರ್ಭಗಳಲ್ಲಿ ಇ)ಯಾವತ್ತು ಇಲ್ಲ

೪೮. ನೀವು ಪಂಚಾಯತ್/ವಾರ್ಡ್/ಗ್ರಾಮ ಸಭೆಗಳಲ್ಲಿ ಮತದಾರರು ಭಾಗವಹಿಸುವಂತೆ ಜನರನ್ನು ಪ್ರೋತ್ಸಾಹಿಸುತ್ತೀರಾ?
ಅ) ಹೌದು ಆ)ಇಲ್ಲ

೪೯. ನೀವು ಯಾವತ್ತಾದರೂ ಯಾವುದೇ ಮಾಧ್ಯಮದಲ್ಲಿ ಕಾಣಿಸಿಕೊಂಡಿದ್ದಿರಾ?
ಅ) ಹೌದು ಆ)ಇಲ್ಲ

೫೦. ಹೌದಾದರೆ ಯಾವುದರಲ್ಲಿ?
ಅ) ಮುದ್ರಣ ಮಾಧ್ಯಮ ಆ) ಮಿಂಚು ಮಾಧ್ಯಮ

G. ನಿರ್ಧಾರಕಗಳು

೫೧. ಪಂಚಾಯತ್ ಅನುದಾನಗಳು ಹಾಗೂ ಅಯವ್ಯಯಗಳ ಬಗ್ಗೆ ಮಾಹಿತಿಯಿದೆಯ?
ಅ) ಹೌದು ಆ)ಇಲ್ಲ

೫೨. ಪಂಚಾಯತ್ ನಿರ್ಧಾರ ತೆಗೆದು ಕೊಳ್ಳುವಲ್ಲಿ ನಿಮ್ಮ ಪಾತ್ರವಿದೆಯ?

ಅ) ಹೌದು ಆ)ಇಲ್ಲ

ಱಖ. ನೀವು ವಾರ್ಡ್ ಸಭೆ/ಗ್ರಾಮ ಸಭೆಗಳಲ್ಲಿ ಮತದಾರರ/ಗ್ರಾಮಸ್ಥರ ಸಮಸ್ಯೆ ಮತ್ತು ಪ್ರಶ್ನೆಗಳಲಿಗೆ ಉತ್ತರಿಸುತ್ತೀರಾ?

ಅ) ಹೌದು ಆ)ಇಲ್ಲ

ಱಳ) ಮಹಿಳಾ ಪ್ರತಿನಿಧಿಗಳಿಗೆ ಪಂಚಾಯತು ಆಡಳಿತದಲ್ಲಿ ಸೂಕ್ತ ಸ್ಥಾನಮಾನ ಇದೆ ಎಂಬುದಾಗಿ ನಿಮಗೆ ಅನಿಸುತ್ತಿದೆಯೇ? ಹೌದು: ಇಲ್ಲ: (ಕಾರಣ ನೀಡಿ)

ಱಱ) ಪಂಚಾಯತು ಆಡಳಿತದಲ್ಲಿ ಮಹಿಳೆಯರಿಗೆ ಹೆಚ್ಚಿನ ಅಧಿಕಾರವಿರುವ ವಿಷಯಗಳು ಯಾವುದು ?

***************ಧನ್ಯವಾದಗಳು***************